ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 29 ಗುರುವಾರ 2024

ಸಂಪುಟ: 44 | ಸಂಚಿಕೆ: 312 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ವಿಧಾನಸೌಧದಲ್ಲೇ 'ಪಾಕ್' ಪರ ಘೋಷಣೆ ಆರೋಪದ ಪ್ರತಿಧ್ವನಿ; ಸರ್ಕಾರದ ರಾಜೀನಾಮೆಗೆ ಆಗ್ರಹಿಸಿ ಹೋರಾಟ

ವಿಧಾನಮಂಡಲದಲ್ಲಿ ಭಾರಿ ಕೋಲಾಹಲ

● ಸದನ ಸಮಾವೇಶಗೊಳ್ಳುತ್ತಿದ್ದಂತೆ ಬಿಜೆಪಿ ವಿಷಯ ಪ್ರಸ್ತಾಪಿಸಿ, ಸರ್ಕಾರ ತರಾಟೆಗೆ ● ಸದನ ಎರಡು ಬಾರಿ ಕಲಾಪ ಮುಂದೂಡಿ ಸ್ಪೀಕರ್ ಸಂಧಾನ ವಿಫಲ; ಗುರುವಾರಕ್ಕೆ ಅಧಿವೇಶನ ಮುಂದೂಡಿಕೆ

ಬೆಂಗಳೂರು, ಫೆ.28(ಕೆಎಂಶಿ)– ರಾಜ್ಯದ ಶಕ್ತಿ ಕೇಂದ್ರ ವಿಧಾನಸೌಧದಲ್ಲಿ 'ಪಾಕ್' ಪರ ಘೋಷಣೆ ಕೂಗಿದ ಆರೋಪ ವಿಧಾನಮಂಡಲದಲ್ಲಿ ಭಾರಿ ಕೋಲಾಹಲಕ್ಕೆ ಕಾರಣವಾಯಿತು.

ವಿಧಾನಸಭೆ ಅಧಿವೇಶನ ಆರಂಭವಾಗುತ್ತಿದ್ದಂತೆ ಮಂಗಳವಾರದ ಘಟನೆ ಪ್ರಸ್ತಾಪಿಸಿದ ಪ್ರತಿಪಕ್ಷ ಬಿಜೆಪಿ, ಸರ್ಕಾರದ ರಾಜೀನಾಮೆಗೆ ಆಗ್ರಹಿಸಿದ್ದಲ್ಲದೆ, ರಾಜ್ಯಸಭಾ ಸದಸ್ಯ ನಾಸಿರ್ ಹುಸೇನ್ ಬಂಧನಕ್ಕೆ ಒತ್ತಾಯಿಸಿತು. ವಿಷಯ ಪ್ರಸ್ತಾಪಿಸಿದ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಮತ್ತಿತರರು, ರಾಜ್ಯಸಭಾ ಚುನಾವಣಾ ಫಲಿತಾಂಶ ಪ್ರಕಟವಾದ ನಂತರ, ಚುನಾಯಿತ ಕಾಂಗ್ರೆಸ್ ಅಭ್ಯರ್ಥಿ ಸೈಯದ್ ನಾಸಿರ್ ಹುಸೇನ್ ಅವರ ಸಂಭ್ರಮಾಚರಣೆ ಸಂದರ್ಭದಲ್ಲಿ ಪಾಕಿಸ್ತಾನ ಪರ ಘೋಷಣೆಯನ್ನು ಕಿಡಿಗೇಡಿಯೊಬ್ಬ ಕೂಗಿದ್ದಾನೆ.



ವಿಧಾನಪರಿಷತ್‌ನಲ್ಲಿ ಕೈಕೈ ಮಿಲಾಯಿಸುವ ಹಂತಕ್ಕೆ ಹೋದ ಪರಿಸ್ಥಿತಿ.

ಕರ್ನಾಟಕದ ಇತಿಹಾಸದಲ್ಲೇ ಶಕ್ತಿಸೌಧದಲ್ಲಿ ಇಂತಹ ಘಟನೆ ನಡೆದಿರಲಿಲ್ಲ, ಇದು ಶಾಸನ ರಚನೆ ಸ್ಥಳ. ಇಂತಹ ಕೇಂದ್ರದಲ್ಲೇ ರಾಷ್ಟ್ರ ವಿರೋಧಿ ಚಟುವಟಿಕೆ ನಡೆದರೆ ಸರ್ಕಾರ ಯಾರಿಗೆ ರಕ್ಷಣೆ ನೀಡಲು ಸಾಧ್ಯ ಎಂದು ಪ್ರಶ್ನಿಸಿದರು. ಘಟನೆ ನಡೆದು 16 ಗಂಟೆಗಳಾದರೂ ಆರೋಪಿಯನ್ನು ಬಂಧಿಸದೆ ಸರ್ಕಾರ ರಕ್ಷಣೆ ಮಾಡುತ್ತಿದೆ. ಇಂತಹ ಸರ್ಕಾರ ನಮಗೆ ಬೇಕೇ ಎಂದರು.

ರಾಷ್ಟ್ರ ವಿರೋಧಿಗಳನ್ನು ಬೆಂಬಲಿಸುವ ನೀವು ಅಧಿಕಾರದಿಂದ ಕೆಳಗಿಳಿದು ಹೊರ ನಡೆಯಿರಿ, ನಾಸಿರ್ ಹುಸೇನ್ ಅವರನ್ನು ಬಂಧಿಸಿದರೆ ಸತ್ಯ ಬಯಲಾಗುತ್ತದೆ. ರಾಷ್ಟ್ರದ ವಿರುದ್ಧ ಧ್ವನಿ ಎತ್ತುವವರಿಗೆ ನೀವು ರತ್ನಗಂಬಳಿ ಹಾಸುತ್ತಿದ್ದೀರಿ, ಇದು ನಿಮಗೆ ಮುಳುವಾಗುತ್ತದೆ. ಕೆಎಫ್‌ಡಿ ಸಂಘಟನಾ ಸದಸ್ಯರು ನಿಮ್ಮ ಜೊತೆ ಇರುವಂತೆ ನಟಿಸುತ್ತಾರೆ ● 6ನೇ ಪುಟಕ್ಕೆ

ಸೈಯದ್ ನಾಸಿರ್ ಹುಸೇನ್ ಬಂಧನಕ್ಕೆ ಆಗ್ರಹ



ಪಾಕ್ ಪರ ಘೋಷಣೆ ವಿರುದ್ಧ ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ್ ನೇತೃತ್ವದಲ್ಲಿ ಬಿಜೆಪಿ ಶಾಸಕರು ವಿಧಾನಸೌಧದ ಮುಂಭಾಗ ಪ್ರತಿಭಟನೆ ನಡೆಸಿದರು.

ಪಾಕ್ ಪರ ಘೋಷಣೆ ಸಾಬೀತಾದರೆ ಕ್ರಮ

ಬೆಂಗಳೂರು: ವಿಧಾನಸೌಧದ ಆವರಣದಲ್ಲಿ ನಿನ್ನೆ (ಮಂಗಳವಾರ) ನೂತನ ರಾಜ್ಯಸಭಾ ಸದಸ್ಯ ಸೈಯದ್ ನಾಸಿರ್ ಹುಸೇನ್ ಅಭಿಮಾನಿಗಳು 'ಪಾಕ್' ಪರ ಘೋಷಣೆ ಕೂಗಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ವಿಡಿಯೋವನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ತನಿಖೆಗೆ ಕಳುಹಿಸಲಾಗಿದ್ದು, ಪಾಕಿಸ್ತಾನ ಪರ ಘೋಷಣೆ ಕೂಗಿರುವುದು ಸಾಬೀತಾದರೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ದೇಶದ್ರೋಹಿ ಗಳನ್ನು ಮಟ್ಟಹಾಕಬೇಕಿದೆ ಎಂದು ಹೇಳಿದ್ದಾರೆ. ಪಾಕಿಸ್ತಾನ ಪರ ಘೋಷಣೆ ಕೂಗಿದ್ದಾರೆಯೇ ● 6ನೇ ಪುಟಕ್ಕೆ



ದೇಶದ್ರೋಹಿಗಳ ವಿರುದ್ಧ ಕಠಿಣ ಕ್ರಮ



● ಗೃಹ ಸಚಿವ ಡಾ.ಪರಮೇಶ್ವರ್ ಎಚ್ಚರಿಕೆ ● ಆರೋಪ ಕೇಳಿಬಂದ ತಕ್ಷಣ ಸ್ವಯಂಪ್ರೇರಿತ ಪ್ರಕರಣ ದಾಖಲು ● ಎಫ್‌ಎಸ್‌ಎಲ್ ವರದಿ ಬಂದ ತಕ್ಷಣ ಕಾನೂನು ರೀತಿ ಕ್ರಮ

ಬೆಂಗಳೂರು, ಫೆ. 28(ಕೆಎಂಶಿ)– ದೇಶದ್ರೋಹಿಗಳಿಗೆ ರಕ್ಷಣೆ ಕೊಡುವ ಪ್ರಶ್ನೆಯೇ ಇಲ್ಲ ಎಂದಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ್, ಅಂತಹವರ ವಿರುದ್ಧ ರಾಷ್ಟ್ರ ವಿರೋಧಿ ಚಟುವಟಿಕೆ ನಿಗ್ರಹ ಕಾನೂನಿನಡಿ ಕ್ರಮ ಕೈಗೊಳ್ಳಲಾಗುವುದು ಎಂದು ವಿಧಾನಸಭೆಯಲ್ಲಿಂದು ಭರವಸೆ ನೀಡಿದರು.

ರಾಜ್ಯದ ಯಾವುದೇ ಮೂಲೆಯಲ್ಲಿ ಪಾಕಿಸ್ತಾನದ ಪರವಾಗಿ ಘೋಷಣೆ ಕೂಗಿ, ನಮಗೆ ಅವಮಾನ ಮಾಡಿದರೆ ಕಠಿಣ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು.

ರಾಜ್ಯಸಭೆ ಚುನಾವಣೆ ಫಲಿತಾಂಶ ಪ್ರಕಟವಾದ ನಂತರ ನಿನ್ನೆ ಸಂಭ್ರಮಾಚರಣೆ ವೇಳೆ ಪಾಕಿಸ್ತಾನದ ಪರ ಘೋಷಣೆ ಕೂಗಿದ್ದಾರೆ ಎಂದು ಆರೋಪಿಸಿ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಸೇರಿದಂತೆ ಬಿಜೆಪಿಯ ಹಲವು ಶಾಸಕರು ಆರೋಪ ಮಾಡಿ, ನಡೆಸಿದ ಚರ್ಚೆಗೆ ಉತ್ತರ ನೀಡಿದ ● 6ನೇ ಪುಟಕ್ಕೆ

ನಿಮ್ಮಿಂದ ಕಾನೂನು–ಸುವ್ಯವಸ್ಥೆ ಕಾಪಾಡಲಾಗದು

ಬೆಂಗಳೂರು: ಶಕ್ತಿಸೌಧದಲ್ಲೇ ಪಾಕಿಸ್ತಾನ್ ಜಿಂದಾಬಾದ್ ಎನ್ನಲು ಸಾಧ್ಯವಾದರೆ ರಾಜ್ಯದ ಬೇರೆ ಎಲ್ಲಿ ಕಾನೂನು ಸುವ್ಯವಸ್ಥೆಯನ್ನು ರಕ್ಷಿಸಲು ನಿಮ್ಮಿಂದ ಸಾಧ್ಯ ಎಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಪ್ರಶ್ನಿಸಿದರು.

ಇದು ದೇಶದ ಗೌರವದ ಪ್ರಶ್ನೆ, ಯಾವ ಕಾರಣಕ್ಕೂ ಇಂತಹ ಬೆಳವಣಿಗೆಯನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ಪ್ರಕರಣ ನಡೆದು ಇಷ್ಟು ಸಮಯ ಕಳೆದರೂ ಒಬ್ಬನನ್ನೂ ಸರ್ಕಾರ ಬಂಧಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ನೀವು ಎಫ್‌ಎಸ್‌ಎಲ್ ವರದಿ ಬಂದ ನಂತರ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವುದಾಗಿ ಹೇಳುತ್ತೀರಿ, ವರದಿ ಬರುವುದು ಒಂದು ವಾರವೋ, ತಿಂಗಳೋ ಆಗಬಹುದು, ಅಲ್ಲಿಯವರೆಗೆ ಕಾಯಲು ಸಾಧ್ಯವಿಲ್ಲ. ಇದು ದೇಶದ್ರೋಹದ ಪ್ರಕರಣ, ತಕ್ಷಣವೇ ತಪ್ಪಿತಸ್ಥರನ್ನು ಬಂಧಿಸಬೇಕು. ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು. ಎಲ್ಲಕ್ಕಿಂತ ಮುಖ್ಯವಾಗಿ ವಿಧಾನಸೌಧದಲ್ಲೇ ಇಂತಹ ಘಟನೆ ನಡೆದರೂ ನೀವು ಸುಮ್ಮನಿದ್ದೀರಿ ಎಂದರೆ ಇಲ್ಲಿ ನಮಗೆ ಭದ್ರತೆ ಇರಲು ಸಾಧ್ಯವೇ ಇಲ್ಲ. ಇಂತಹ ಸ್ಥಿತಿಯಲ್ಲಿ ನಾವು ಸದನದಲ್ಲಿ ಏಕೆ ಮುಂದುವರಿಯಬೇಕು ಎಂದು ಪ್ರಶ್ನಿಸಿದರು. ಸರ್ಕಾರ ನೈತಿಕತೆಯನ್ನು ಕಳೆದುಕೊಂಡಿದೆ. ಅದು ಅಧಿಕಾರದಲ್ಲಿ ಮುಂದುವರಿಯುವ ಶಕ್ತಿಯನ್ನು ಕಳೆದುಕೊಂಡಿದೆ. ಆದ್ದರಿಂದ ತಕ್ಷಣವೇ ಸರ್ಕಾರ ರಾಜೀನಾಮೆ ನೀಡಬೇಕು ಎಂದು ಅಶೋಕ್ ಒತ್ತಾಯಿಸಿದರು.

ಇಂದು ಜಾತಿಗಣತಿ ವರದಿ ರಾಜ್ಯ ಸರ್ಕಾರಕ್ಕೆ ಸಲ್ಲಿಕೆ

ಬೆಂಗಳೂರು, ಫೆ.28– ರಾಜ್ಯ ರಾಜಕಾರಣದಲ್ಲಿ ವಿವಾದದ ಬಿರುಗಾಳಿ ಯೆಬ್ಬಿಸಿರುವ ಜಾತಿಗಣತಿ ವರದಿಯನ್ನು ನಾಳೆ (ಫೆ.29) ಸಿಎಂ ಸಿದ್ದರಾಮಯ್ಯನವರಿಗೆ ಕರ್ನಾಟ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗಡೆಯವರು ಅಧಿಕೃತವಾಗಿ ಸಲ್ಲಿಸಲಿದ್ದಾರೆ.

ಗುರುವಾರ ಬೆಳಗ್ಗೆ ಸುಮಾರು 11 ಗಂಟೆಗೆ ವರದಿ ಪ್ರತಿಯನ್ನು ಸಿದ್ದರಾಮಯ್ಯನವರಿಗೆ ಸಲ್ಲಿಸಲಿದ್ದಾರೆ. ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮಾಜಿ ಅಧ್ಯಕ್ಷ ಕಾಂತರಾಜು ಅವರ ನೇತೃತ್ವದಲ್ಲಿ ಸಿದ್ಧಪಡಿಸಲಾಗಿದ್ದ ವರದಿಯಲ್ಲಿ ಸಾಕಷ್ಟು ಲೋಪದೋಷಗಳಿವೆ, ಈ ವರದಿಯನ್ನು ಎ.ಸಿ. ರೂಮುಗಳಲ್ಲಿ ಕುಳಿತುಕೊಂಡು ಬರೆಯಲಾಗಿದೆ ಎಂಬ ಆರೋಪಗಳು ಕೇಳಿ ಬಂದಿದ್ದವು.

ವಿಧಾನಮಂಡಲ ಅಧಿವೇಶನ ಮೂರು ಬಾರಿ ವಿಸ್ತರಣೆ

ಬೆಂಗಳೂರು, ಫೆ. 28(ಕೆಎಂಶಿ)– ವಿಧಾನಮಂಡಲ ಅಧಿವೇಶನವನ್ನು ಮತ್ತೆ ಒಂದು ದಿನ ವಿಸ್ತರಣೆ ಮಾಡಲಾಗಿದೆ. ಇತ್ತೀಚಿನ ವರ್ಷಗಳಲ್ಲೇ ಅಧಿವೇಶನವನ್ನು ಮೂರು ಬಾರಿ ವಿಸ್ತರಣೆ ಮಾಡಿರುವುದು ಇದೇ ಮೊದಲಾಗಿದೆ.

ಫೆಬ್ರವರಿ 23ರ ಶುಕ್ರವಾರದಂದೇ ಅಧಿವೇಶನ ಮುಗಿಯಬೇಕಿತ್ತು, ಅಂದು ಮುಖ್ಯಮಂತ್ರಿ ಅವರ ಅನಾರೋಗ್ಯದ ಹಿನ್ನೆಲೆಯಲ್ಲಿ ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಲು ಸಾಧ್ಯವಾಗದ ಕಾರಣ ಫೆಬ್ರವರಿ 26ರ ಸೋಮವಾರಕ್ಕೆ ವಿಸ್ತರಣೆ ಮಾಡಲಾಯಿತು. ಆಡಳಿತ ಪಕ್ಷದ ಹಾಲಿ ಶಾಸಕ ರಾಜಾ ವೆಂಕಟಪ್ಪ ನಾಯಕ ಹಠಾತ್ ನಿಧನದಿಂದ ಅಂದು ಕಲಾಪವನ್ನು ಮೊಟಕುಗೊಳಿಸಿ, ಸದನವನ್ನು ಬುಧವಾರಕ್ಕೆ ಮುಂದೂಡಲಾಗಿತ್ತು.

ಇಂದು ಮುಖ್ಯಮಂತ್ರಿ ಉತ್ತರ ನೀಡಿ ಬಜೆಟ್‌ಗೆ ಅನುಮತಿ ಪಡೆಯಬೇಕಿತ್ತು, ಆದರೆ, ರಾಜ್ಯಸಭಾ ಚುನಾವಣಾ ಫಲಿತಾಂಶದ ವೇಳೆ ಪಾಕಿಸ್ತಾನ್ ಪರ ಘೋಷಣೆ ಕೂಗಿದ ವಿಷಯ ವಿಧಾನಮಂಡಲದಲ್ಲಿ ಪ್ರತಿಧ್ವನಿಸಿ ಭಾರಿ ಕೋಲಾಹಲ ಉಂಟು ಮಾಡಿದ್ದರಿಂದ ಬಜೆಟ್ ಮೇಲಿನ ಚರ್ಚೆಗೆ ಮುಖ್ಯಮಂತ್ರಿ ಉತ್ತರ ನೀಡಲು ಸಾಧ್ಯವಾಗಲಿಲ್ಲ. ಮುಂಬರುವ ಲೋಕಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಮುಖ್ಯಮಂತ್ರಿ ಅವರು ತಮ್ಮ ಉತ್ತರದಲ್ಲಿ ಗ್ಯಾರಂಟಿ ಯೋಜನೆ, ಕೇಂದ್ರದ ಮಲತಾಯಿ ಧೋರಣೆ ಹಾಗೂ ಕೆಲವು ಯೋಜನೆಗಳನ್ನು ಪ್ರಕಟಿಸುವ ಉದ್ದೇಶ ಹೊಂದಿದ್ದಾರೆ. ಇದಕ್ಕಾಗಿ ಅವರಿಗೆ ಒಂದಷ್ಟು ಸಮಯಾವಕಾಶ ಬೇಕಿದೆ, ಅದು ಇಂದು ದೊರೆಯದ ಕಾರಣ ಸಭಾಧ್ಯಕ್ಷರಲ್ಲಿ ಮನವಿ ಮಾಡಿ ನಾಳೆ ಉತ್ತರ ನೀಡುವುದಾಗಿ ಮನವಿ ಮಾಡಿದರು.

> ಎಚ್ಚೆತ್ತುಕೋ ಮತದಾರ ಎಚ್ಚೆತ್ತುಕೋ! ಒಂದು ದಿನದ ಅಧಿವೇಶನಕ್ಕೆ ಆಗುವ ವೆಚ್ಚ ಲಕ್ಷ ಲಕ್ಷ. ಅದು ನಿನ್ನ ದುಡಿಮೆಯ ದುಡ್ಡು. ನೀನು ಆಯ್ಕೆ ಮಾಡಿದವರ ತೆವಲಿಗೆ ಸೇರಿ ಹೋಗುತ್ತಿದೆ ನಿನ್ನ ತೆರಿಗೆ ಹಣ!


ಮುಡಾ ಅಧ್ಯಕ್ಷರಾಗಿ ಕೆ.ಮರೀಗೌಡ

ಮಾಜಿ ಮೇಯರ್ ಅಯೂಬ್ ಖಾನ್ ಮೈಲ್ಯಾಕ್ ಅಧ್ಯಕ್ಷ


● 44 ನಿಗಮ ಮಂಡಳಿಗಳಿಗೆ ನೇಮಕ ● ಪಟ್ಟಿಗೆ ಮುಖ್ಯಮಂತ್ರಿ ಅನುಮೋದನೆ ● ಆಯಾಯ ಇಲಾಖೆ ಮೂಲಕ ಆದೇಶ ಜಾರಿ



ಕೆ.ಮರೀಗೌಡ



ಅಯೂಬ್ ಖಾನ್



ಹೆಚ್.ಎಂ.ರೇವಣ್ಣ



ಎಸ್.ಆರ್.ಪಾಟೀಲ್



ಪುಷ್ಪಾ ಅಮರನಾಥ್



ಸೂರಜ್ ಹೆಗ್ಗಡೆ

ಬೆಂಗಳೂರು, ಫೆ.28–ನಿಗಮ ಮಂಡಳಿ ಅಧ್ಯಕ್ಷ ಸ್ಥಾನಗಳಿಗೆ 44 ಮಂದಿ ಕಾಂಗ್ರೆಸ್ ಕಾರ್ಯಕರ್ತರ ಪಟ್ಟಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಮೋದಿಸಿದ್ದಾರೆ. ಈ ಪಟ್ಟಿಯನ್ನು ಸರ್ಕಾರ ಬಹಿರಂಗಪಡಿಸಿಲ್ಲ. ಆದರೆ ಆಯಾ ಇಲಾಖೆಗಳಿಗೆ ರವಾನಿಸಿದ್ದು, ಸಂಬಂಧಪಟ್ಟ ಇಲಾಖೆಗಳಿಂದ ಪ್ರತಿಯೊಬ್ಬರಿಗೂ ನಾಳೆ (ಫೆ.29) ನೇಮಕ ಆದೇಶ ರವಾನೆಯಾಗಲಿದೆ ಎಂದು ಮುಖ್ಯಮಂತ್ರಿಗಳ ಕಾರ್ಯಾಲಯ ತಿಳಿಸಿದೆ.

ಖಚಿತ ಮೂಲಗಳ ಪ್ರಕಾರ ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಕೆ.ಮರೀಗೌಡ ಅವರನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಮಾಜಿ ಮೇಯರ್ ಅಯೂಬ್ ಖಾನ್ ಅವರನ್ನು ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ (ಮೈಲ್ಯಾಕ್) ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಕರ್ನಾಟಕ ಮೃಗಾಲಯ ಪ್ರಾಧಿಕಾರ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ, ಕಾಡಾ ಸೇರಿದಂತೆ ಇನ್ನಿತರ ನಿಗಮ ಮಂಡಳಿಗಳ ಅಧ್ಯಕ್ಷ ಸ್ಥಾನಗಳು ಯಾರ ಪಾಲಾಗಲಿವೆ ಎಂಬುದು ತಿಳಿಯಬೇಕಾಗಿದೆ.

ಗ್ಯಾರಂಟಿ ಸ್ಕೀಂ ಅನುಷ್ಠಾನ ಸಮಿತಿ: ಸರ್ಕಾರದ 5 ಗ್ಯಾರಂಟಿ ಸ್ಕೀಂಗಳ ಅನುಷ್ಠಾನ ಸಮಿತಿಯನ್ನು ಅಸ್ತಿತ್ವಕ್ಕೆ ● 6ನೇ ಪುಟಕ್ಕೆ

ಎಸ್.ಎಂ.ಕೃಷ್ಣ, ಟಿ.ಎನ್.ಸೀತಾರಾಂಗೆ ಮೈಸೂರು ವಿವಿ ಗೌರವ ಡಾಕ್ಟರೇಟ್


ಮೈಸೂರು, ಫೆ.28(ಆರ್‌ಕೆ)– ರಾಜ್ಯದ ರಾಜಕೀಯ ಮುತ್ಸದ್ಧಿ, ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಮತ್ತು ಖ್ಯಾತ ಕನ್ನಡ ಚಲನಚಿತ್ರ ಹಾಗೂ ಟಿವಿ ಧಾರಾವಾಹಿ ನಿರ್ದೇಶಕ ಟಿ.ಎನ್. ಸೀತಾರಾಂ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ ನೀಡಲಾಗುತ್ತಿದೆ.

ಮಾರ್ಚ್ 3ರಂದು ಕ್ರಾಫರ್ಡ್ ಭವನದಲ್ಲಿ ನಡೆಯಲಿರುವ ವಿಶ್ವವಿದ್ಯಾನಿಲಯದ 104ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಈ ಗಣ್ಯರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದ್ದು, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವಿಶ್ರಾಂತ ನಿರ್ದೇಶಕ ಡಾ. ಸಿ.ಎನ್.ಮಂಜುನಾಥ್ ಘಟಿಕೋತ್ಸವ ಭಾಷಣ ಮಾಡುವರು.

ಸೋಮನಹಳ್ಳಿ ಮಲ್ಲಯ್ಯ ಕೃಷ್ಣ (ಎಸ್.ಎಂ. ಕೃಷ್ಣ) ಅವರಿಗೆ 2023ರಲ್ಲಿ ರಾಷ್ಟ್ರದ 2ನೇ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಪದ್ಮ ವಿಭೂಷಣ' ನೀಡಲಾಗಿತ್ತು. ಇದೀಗ ಈ ವರ್ಷ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದಿಂದ ಅವರಿಗೆ ಗೌರವ ಡಾಕ್ಟರೇಟ್ ನೀಡಲು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆ ನಿರ್ಧರಿಸಿದೆ. ಕಳೆದ ವರ್ಷವೇ ಎಸ್.ಎಂ. ಕೃಷ್ಣ ಅವರಿಗೆ ಗೌರವ ಡಾಕ್ಟರೇಟ್ ನೀಡಲು ಮೈಸೂರು ವಿಶ್ವವಿದ್ಯಾನಿಲಯವು ನಿರ್ಧರಿಸಿತ್ತು ಹಲವು ಕಾರಣಗಳಿಂದಾಗಿ ಅದು ಸಾಧ್ಯವಾಗಿರಲಿಲ್ಲ ಎಂದು ಮೂಲಗಳು ತಿಳಿಸಿವೆ. ಈ ಬಾರಿ ಸಿಂಡಿಕೇಟ್ ಸಭೆಯು ಅವರ ಹೆಸರನ್ನು ಶಿಫಾರಸು ಮಾಡಿದ್ದು, ರಾಜ್ಯಪಾಲರು ಅಂತಿಮಗೊಳಿಸಿದ್ದಾರೆ ಎನ್ನಲಾಗಿದೆ.



ಎಸ್.ಎಂ.ಕೃಷ್ಣ



ಟಿ.ಎನ್.ಸೀತಾರಾಂ

ವಿಶ್ವ ಭೂಪಟದಲ್ಲಿ ಕರ್ನಾಟಕ: ಎಸ್.ಎಂ. ಕೃಷ್ಣ, ಮುಖ್ಯಮಂತ್ರಿಯಾಗಿ ಕರ್ನಾಟಕದಲ್ಲಿ ಮಾಹಿತಿ ತಂತ್ರಜ್ಞಾನ(ಐಟಿ) ಮತ್ತು ಬಯೋಟೆಕ್ನಾಲಜಿ (ಬಿಟಿ) ಕ್ಷೇತ್ರ ಅಭಿವೃದ್ಧಿ, ಇಂಧನ, ನೀರು ಸರಬರಾಜು, ರಸ್ತೆಗಳು, ಕೃಷಿ, ವಸತಿಗಳಂತಹ ಹಲವು ಯೋಜನೆಗಳ ಕಾರ್ಯಗತಗೊಳಿಸಿ ಉತ್ತಮ ಆಡಳಿತ ನೀಡಿದ್ದರು. ಬೆಂಗಳೂರು ನಗರದ ಸರ್ವಾಂಗೀಣ ಅಭಿವೃದ್ಧಿಗಾಗಿ ಟಾಸ್ಕ್ ಫೋರ್ಸ್ ರಚಿಸಿದ್ದರು.

ಬೆಂಗಳೂರಿನಲ್ಲಿ ಮತ್ತೊಂದು ಆಡಳಿತ ಸೌಧವಾದ ವಿಕಾಸಸೌಧ ನಿರ್ಮಿಸಿದ ಹೆಗ್ಗಳಿಕೆ ಎಸ್.ಎಂ.ಕೃಷ್ಣ ಅವರಿಗೆ ಸಲ್ಲುತ್ತದೆ. ಬೆಂಗಳೂರಿನ ಪ್ರತಿಷ್ಠಿತ ಐಟಿ ಹಬ್ ಎಲೆಕ್ಟ್ರಾನಿಕ್ ಸಿಟಿ ಮತ್ತು ಪ್ರತಿಷ್ಠಿತ ಬಡಾವಣೆಗಳನ್ನು ನಿರ್ಮಿಸಿದ್ದೂ ಅವರೇ.

ನಾಲ್ಕು ಪಥದ ಹೆದ್ದಾರಿ: ಈಗಿನ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ನಿರ್ಮಾಣವಾಗುವ ಮುನ್ನ ಈ ಎರಡು ಮಹಾನಗರಗಳ ನಡುವೆ ಎಸ್.ಎಂ.ಕೃಷ್ಣ ಸರ್ಕಾರದ ಅವಧಿಯಲ್ಲಿ ಸುಸಜ್ಜಿತ 4 ಪಥದ ಹೆದ್ದಾರಿ ನಿರ್ಮಿಸಲಾಗಿತ್ತು. ಅವರ ಅವಧಿಯಲ್ಲೇ ಮೈಸೂರಿನಂತಹ ಟಯರ್–2 ಮತ್ತು ಟಯರ್–3 ನಗರಗಳ ಅಭಿವೃದ್ಧಿಗೆ ಅಡ್ಡಿಯಾಗಿದ್ದ ವಿಷಯಗಳಿಗೆ ಪರಿಹಾರವೂ ಸಿಕ್ಕಿತ್ತು. ಎಸ್.ಎಂ. ಕೃಷ್ಣರ ಪರಿಶ್ರಮದಿಂದಾಗಿಯೇ ಮೈಸೂರಿನ ಹೆಬ್ಬಾಳಿನಲ್ಲಿ ಇನ್‌ಫೋಸಿಸ್ ಗ್ಲೋಬಲ್ ಟ್ರೈನಿಂಗ್ ಸೆಂಟರ್ ಆರಂಭವಾಗಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ರಿಂಗ್ ರಸ್ತೆ: ಭವಿಷ್ಯದ ಮೈಸೂರಿನ ಜನಸಂಖ್ಯೆ, ವಾಹನದ ದಟ್ಟಣೆಯನ್ನು ಗಮನದಲ್ಲಿರಿಸಿಕೊಂಡು ಹಾಗೂ ಅಷ್ಟರಲ್ಲಾಗಲೇ ಸಾಫ್ಟ್‌ವೇರ್ ಕಂಪನಿಗಳು ಮೈಸೂರಿನತ್ತ ಮುಖ ಮಾಡಿದ್ದರಿಂದ ಸುಗಮ ಸಂಚಾರಕ್ಕೆ ಅನುವಾಗುವಂತೆ ಎಸ್.ಎಂ.ಕೃಷ್ಣ, ಮೈಸೂರಲ್ಲಿ 42 ಕಿ.ಮೀ. ರಿಂಗ್ ರಸ್ತೆಯನ್ನು ಮುಡಾ ವತಿಯಿಂದ ನಿರ್ಮಿಸಿದ್ದರು. ಆಗ ● 6ನೇ ಪುಟಕ್ಕೆ

100 ಯೂನಿಟ್‌ಗಿಂತ ಅಧಿಕ ವಿದ್ಯುತ್ ಬಳಕೆ; ದರ ಇಳಿಕೆ



ಬೆಂಗಳೂರು, ಫೆ.28– ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು (KERC) ವಿದ್ಯುತ್ ದರ ಇಳಿಕೆ ಮಾಡಿ ಬುಧವಾರ ಆದೇಶ ಹೊರಡಿಸಿದೆ. ಆ ಮೂಲಕ ರಾಜ್ಯದ ವಿದ್ಯುತ್ ಬಳಕೆದಾರರಿಗೆ ಗುಡ್ ನ್ಯೂಸ್ ನೀಡಿದೆ. ಲೋಕಸಭೆ ಚುನಾವಣೆ ಬೆನ್ನಲ್ಲೇ ಗ್ರಾಹಕರಿಗೆ ಬಂಪರ್ ಕೊಡುಗೆ ನೀಡಿದೆ. 100 ಯೂನಿಟ್‌ಗಿಂತ ಹೆಚ್ಚು ಬಳಸುವವರಿಗೆ ಪ್ರತಿ ಯೂನಿಟ್ ಮೇಲೆ 1 ರೂಪಾಯಿ 10 ಪೈಸೆ ಇಳಿಕೆ ಮಾಡಲಾಗಿದೆ. ಅದೇ ರೀತಿಯಾಗಿ ವಾಣಿಜ್ಯ ಬಳಕೆದಾರರಿಗೆ 1 ರೂ. 25 ಪೈಸೆ ದರ ಇಳಿಕೆ ಮಾಡಲಾಗಿದೆ. ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಯೂನಿಟ್‌ಗೆ 40 ಪೈಸೆ ಕಡಿತ ಮಾಡಲಾಗಿದ್ದು, ಖಾಸಗಿ ಏತ ನೀರಾವರಿ ಬಳಕೆದಾರರಿಗೆ 2 ರೂ.ಇಳಿಕೆ ಮಾಡಲಾಗಿದೆ. 100 ಯೂನಿಟ್‌ಗಿಂತ ಹೆಚ್ಚು ಬಳಸುವವರಿಗೆ ಮಾತ್ರ ಹೊಸ ದರ ಮಾರ್ಚ್ 1ರಿಂದಲೇ ಅನ್ವಯವಾಗಲಿದೆ.

ದರ ಇಳಿಕೆಯ ಮಾಹಿತಿ ಹೀಗಿದೆ

ಎಲ್‌ಟಿ ಡೊಮೆಸ್ಟಿಕ್ ಲೈಟಿಂಗ್: 100 ಯೂನಿಟ್‌ಗಿಂತ ಹೆಚ್ಚಿನ ಬಳಕೆಗಾಗಿ ಪ್ರತಿ ಯೂನಿಟ್‌ಗೆ 1.10 ಪೈಸೆ ಕಡಿಮೆ ಮಾಡಲಾಗಿದೆ. ● 6ನೇ ಪುಟಕ್ಕೆ

ಇಂದು ಕೃತಿಗಳ ಲೋಕಾರ್ಪಣೆ; ಪ್ರಶಸ್ತಿಗಳ ಪ್ರದಾನ

ಮೈಸೂರು, ಫೆ. 28– ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ ಹಾಗೂ ಜೆಎಸ್ಎಸ್ ಮಹಾವಿದ್ಯಾಪೀಠದ ವತಿಯಿಂದ 'ಕೃತಿಗಳ ಲೋಕಾರ್ಪಣೆ ಹಾಗೂ ಪ್ರಶಸ್ತಿಗಳ ಪ್ರದಾನ' ಸಮಾರಂಭವನ್ನು ನಾಳೆ (ಫೆ. 29) ಸಂಜೆ 5.30ಕ್ಕೆ ಜೆಎಸ್ಎಸ್ ಆಸ್ಪತ್ರೆ ಆವರಣದಲ್ಲಿರುವ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಏರ್ಪಡಿಸಲಾಗಿದೆ. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಮೈಸೂರಿನ ಅರ್ಕ ಫೌಂಡೇಶನ್‌ನ ಸೆಂಟರ್ ಫಾರ್ ಕಾನ್ಷಿಯಸ್ ಅವೇರ್‌ನೆಸ್ ಸಂಸ್ಥಾಪಕರಾದ ಶ್ರೀ ಯೋಗಿ ಶ್ರೀನಿವಾಸ ಅರ್ಕ ಉಪಸ್ಥಿತರಿರುವರು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದು, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಡಾ. ಸತೀಶ್‌ಕುಮಾರ್ ಎಸ್.ಹೊಸಮನಿ ಅವರು ಕೃತಿಗಳನ್ನು ಲೋಕಾರ್ಪಣೆಗೊಳಿಸುವರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಕ್ಕಮಹಾದೇವಿ ಸಂಶೋಧನಾ ಪೀಠದ ನಿರ್ದೇಶಕರಾದ ಡಾ. ಕವಿತಾ ರೈ ಅವರು ಕೃತಿಗಳನ್ನು ಪರಿಚಯಿಸುವರು. ಮೈಸೂರಿನ ಶ್ರೀ ಕಲಾನಿಕೇತನ ದೃಶ್ಯಕಲಾ ಕಾಲೇಜಿನ ಉಪನ್ಯಾಸಕ ಡಾ. ವಿಠ್ಠಲರೆಡ್ಡಿ ಎಫ್. ಚುಳಕಿಯವರು ಪ್ರಶಸ್ತಿ ಪುರಸ್ಕೃತರ ಪರಿಚಯ ಮಾಡಿಕೊಡಲಿದ್ದಾರೆ.

ಜೆಎಸ್ಎಸ್ ಗ್ರಂಥಮಾಲೆಯಿಂದ ಪ್ರಕಟವಾಗಿರುವ Shoonyasam padane of Shivaganaprasadi Mahadevaiah, ಪ್ರಸಾದ ವರ್ಗೀಕೃತ ಪರಿಷ್ಕೃತ ಲೇಖನ ಸೂಚಿ, ಶ್ರೀ ಜಯಚಾಮರಾಜೇಂದ್ರ ಒಡೆಯರ್ ಜನ್ಮ ಶತಮಾನೋತ್ಸವ ವಿಚಾರಸಂಕಿರಣ ಕೃತಿಗಳನ್ನು ಇದೇ ಕಾರ್ಯಕ್ರಮದಲ್ಲಿ ಲೋಕಾರ್ಪಣೆಗೊಳಿಸಲಾಗುವುದು. 2022ನೇ ಸಾಲಿನ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿಯನ್ನು ಡಾ.ಎಚ್.ಎಸ್. ಅನುಪಮಾ ಅವರಿಗೆ, ಎಂ. ವೀರಪ್ಪ ದತ್ತಿ ಪ್ರಶಸ್ತಿಯನ್ನು ಎ.ಕಿರಣ್ ಸುಬ್ಬಯ್ಯನವರಿಗೆ ಹಾಗೂ ಡಿ.ವಿ. ಹಾಲಭಾವಿ ಪ್ರಶಸ್ತಿಯನ್ನು ದಿ. ಶ್ರೀ ಪ್ರಕಾಶ ಗಡಕರ ಅವರ ಪರವಾಗಿ ಅವರ ಕುಟುಂಬದವರಿಗೆ ಪ್ರದಾನ ಮಾಡಲಾಗುವುದು.

ಗಿಡ ನೆಡುವ ಮೂಲಕ ಯುವಕರಲ್ಲಿ ಪರಿಸರ ಜಾಗೃತಿ

ಮೈಸೂರು ಫೆ.28–ಇಂದು ಚೋರನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ



ಆವರಣದಲ್ಲಿ 50ಕ್ಕೂ ಹೆಚ್ಚು ಗಿಡಗಳನ್ನು ನೆಡುವ ಮೂಲಕ ಸ್ಥಳೀಯ ಯುವಜನರು ಪರಿಸರದ ಮೇಲಿನ ಕಾಳಜಿಯನ್ನು ವ್ಯಕ್ತಪಡಿಸಿದರು. ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ, ವಿಣಾ ಗ್ರಾಮ ಪಂಚಾಯಿತಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಚೋರನಹಳ್ಳಿ ಇವರ ಸಹಯೋಗದಲ್ಲಿ ಅಲ್ಲಿನ ಯುವಜನರು ಖಾಲಿಯಿದ್ದ ಶಾಲಾ ಮೈದಾನವನ್ನು ಸ್ವಚ್ಛಗೊಳಿಸಿ, ಬೇವು, ಬೀಲ, ಹೊಂಗೆ, ಸಂಪಿಗೆ, ನೇರಳೆ, ಹಲಸು, ಸೀತಾಫಲ, ಬುಗುರಿ, ದಾಳಿಂಬೆ ಮುಂತಾದ ಗಿಡಗಳನ್ನು ನೆಟ್ಟು ನೀರೆರೆದರು. ಊರಿನ ಗ್ರಾಮಸ್ಥರು, ಯುವಕರು ಹಾಗೂ ಶಾಲೆಯ ಮಕ್ಕಳು ಪ್ರತಿಯೊಂದು ಗಿಡದ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಮೂಲಕ ಗಿಡಗಳ ಸಂರಕ್ಷಣೆಯನ್ನು ಮಾಡುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಯ ಶಾಲಿನಿ, ವೀಣಾ, ಗ್ರಾಮ ಪಂಚಾಯಿತಿ ಸದಸ್ಯರು, ಊರಿನ ಗ್ರಾಮಸ್ಥರು, ಶಾಲಾ ಶಿಕ್ಷಕರು ಯುವಕರು ಹಾಗೂ ಮಕ್ಕಳು ಸೇರಿದ್ದರು.

ಮಹಿಳೆಯರ ಅಭಿವೃದ್ಧಿಗೆ ಸ್ವ-ಉದ್ಯೋಗ ಬ್ಯೂಟಿಷಿಯನ್ ಸಹಕಾರಿ



ಮೈಸೂರು, ಫೆ.28–ಮಹಿಳೆಯರು ಅಭಿವೃದ್ಧಿ ಹೊಂದಲು ಸ್ವ-ಉದ್ಯೋಗ ಬ್ಯೂಟಿಷಿಯನ್ ಸಹಕಾರಿಯಾಗಲಿದೆ. ಪ್ರಸ್ತುತ ದಿನಮಾನಗಳಲ್ಲಿ ಬ್ಯೂಟಿಷಿಯನ್‌ಗೆ ಬಹುಬೇಡಿಕೆ ಇದ್ದು, ಈ ಕೆಲಸದಿಂದ ಮಹಿಳೆಯರು ಜೀವನದಲ್ಲಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಬಹುದು ಎಂದು ಮಾಜಿ ಕಾರ್ಪೋರೇಟರ್ ಪ್ರಮೀಳಾ ಭರತ್ ಹೇಳಿದರು.

ನಗರದ ಶಾರದಾದೇವಿನಗರದಲ್ಲಿ ಸಮೃದ್ಧಿ ಸೇವಾ ಸಮಿತಿ ಟ್ರಸ್ಟ್ ವತಿಯಿಂದ 50 ದಿನದ ಬ್ಯೂಟಿಷಿಯನ್ ಉಚಿತ ತರಬೇತಿ ಕಾರ್ಯಾಗಾರವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿದ ಅವರು, ಸ್ನಾತಕೋತ್ತರ ಪದವೀಧರರು ಸಹ ಈ ಬ್ಯೂಟಿಷಿಯನ್ ತರಬೇತಿ ಪಡೆದು ಮದುವೆ ಸಮಾರಂಭಗಳಲ್ಲಿ ತಮ್ಮದೇ ಆದ ಕೈಚಳಕ ತೋರಿ ಉತ್ತಮ ಆದಾಯ ಪಡೆಯುತ್ತಿದ್ದಾರೆ. ಈ ಹುಡುಗಿಯರು ಬ್ಯೂಟಿಷಿಯನ್ ಆಗಿ ಸ್ವಂತ ದುಡಿಮೆ ಆರಂಭಿಸಿದರೆ ಅವರು ಹೊರಗೆ ಹೋಗಿ ಬೇಕಾದ ಅಗತ್ಯವಿಲ್ಲ ಎಂದು ತಿಳಿಸಿದರು.

ಅಲ್ಪ ಅವಧಿಯ ತರಬೇತಿ ಮೂಲಕ ಕಾಲೇಜು ಅವಧಿ ನಂತರ ಮನೆಯಲ್ಲೇ ಕೇಶವಿನ್ಯಾಸ, ಐಬ್ರೋ, ಫೇಷಿಯಲ್, ಬ್ಲೀಚಿಂಗ್ ಸೇರಿದಂತೆ ಅನೇಕ ಸೌಂದರ್ಯ ವೃದ್ಧಿಸುವ ಕೆಲಸ ಮಾಡಿಕೊಳ್ಳಬಹುದಾಗಿದೆ. ಕಲಿಯಲು ಆಸಕ್ತಿ ಇರುವ ಯುವತಿಯರು ಹಾಗೂ ಮಹಿಳೆಯರು 99648 74954 ನಂಬರಿಗೆ ಸಂಪರ್ಕಿಸಬಹುದು. ಇದೇ ಸಂದರ್ಭದಲ್ಲಿ ಸಮೃದ್ಧಿ ಸೇವಾ ಸಮಿತಿ ಟ್ರಸ್ಟ್ ಅಧ್ಯಕ್ಷರು ಪ್ರಮೀಳಾ ಭರತ್, ಭರತ್, ಚರಣ್, ಕೃಷ್ಣ, ರುಕ್ಮಿಣಿ, ಇಂದು ಕುಮಾರಿ, ದಾಕ್ಷಾಯಿಣಿ, ಇಂದ್ರಾಕ್ಷಿ, ಹಾಗೂ ಇನ್ನಿತರರು ಹಾಜರಿದ್ದರು.



ಸೆಂಟ್ ಜೋಸೆಫ್ ಮಹಿಳೆಯರ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಮಹಿಳೆಯರ ಅಂತರ ಕಾಲೇಜು ಥ್ರೋಬಾಲ್ ಪಂದ್ಯಾವಳಿಯಲ್ಲಿ, ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು ಭಾಗವಹಿಸಿ ಪ್ರಥಮ ಸ್ಥಾನಗಳಿಸಿದೆ. ಚಿತ್ರದಲ್ಲಿ (ಎಡದಿಂದ ಬಲಕ್ಕೆ ಕುಳಿತಿರುವವರು): ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್. ಮಧುಸೂದನ, ಶೈಕ್ಷಣಿಕ ಡೀನ್ ಡಾ. ಶ್ರೀಧರ ಹೆಚ್, ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ತಂಡದ ನಾಯಕಿ ಪರಿಣಿತ, (ಎಡದಿಂದ ಬಲಕ್ಕೆ ನಿಂತಿರುವವರು): ಸೋಮಶೇಖರ್ ಕೆ, ಕನ್ನಿಕಾ, ಲೇನಿಟಾ, ಸಂಜನಾ, ಭೂಮಿಕಾ ಪಟೇಲ್, ಸಂಗೀತ, ಕವಿತಾ ಹಾಗೂ ಸಾಗರಿ ಪೊನ್ನಮ್ಮ ಅವರನ್ನು ಕಾಣಬಹುದು.



ಮೈಸೂರು ವಿಶ್ವವಿದ್ಯಾನಿಲಯ ಆಯೋಜಿಸಿದ್ದ, ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರತಿಭಾ ವೇದಿಕೆಯ ವಿದ್ಯಾರ್ಥಿಗಳು ಭಾಗವಹಿಸಿ ಸಮೂಹ ಗಾಯನದಲ್ಲಿ ದ್ವಿತೀಯ ಸ್ಥಾನ, ಪಾಶ್ಚಾತ್ಯ ಸಂಗೀತ ತೃತೀಯ ಸ್ಥಾನ, ಭಾಷಣ ಸ್ಪರ್ಧೆಯಲ್ಲಿ ತೃತೀಯ ಸ್ಥಾನ, ಶಾಸ್ತ್ರೀಯ ನೃತ್ಯದಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ. ಚಿತ್ರದಲ್ಲಿ (ಎಡದಿಂದ ಬಲಕ್ಕೆ ಕುಳಿತಿರುವವರು): ಪ್ರತಿಭಾ ವೇದಿಕೆಯ ಸಹ ಸಂಚಾಲಕರಾದ ಶ್ರೀಮತಿ ಹಂಸವೇಣಿ ಎನ್.ಸಿ., ಶೈಕ್ಷಣಿಕ ಡೀನ್ ಡಾ. ಶ್ರೀಧರ ಹೆಚ್, ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಮತ್ತು ಪ್ರತಿಭಾ ವೇದಿಕೆ ಸಂಚಾಲಕರಾದ ನಾಗೇಶ ಎಂ, (ಎಡದಿಂದ ಬಲಕ್ಕೆ ನಿಂತಿರುವವರು): ಪಿ.ಬಿ.ಅಕ್ಷೋಭ್ಯಭಟ್, ಶುಭಾಷಿತ, ಹರ್ಷಿತಾ, ಸಾಗರಿಪೊನ್ನಮ್ಮ, ನಿಹಾರಿಕಹೆಗ್ಡೆ, ಹಂಸ ಕೆ.ಎಂ. ಮತ್ತು ಮೋಹನ್‌ರಾಜ್ ಅವರನ್ನು ಕಾಣಬಹುದು.

ಕೃಷಿ ಕ್ಷೇತ್ರದಲ್ಲಿ ರೈತರೇ ನಿಜವಾದ ವಿಜ್ಞಾನಿಗಳು

ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್

ಮೈಸೂರು,ಫೆ.28(ಎಂಟಿವೈ)–ಕೃಷಿ ಕ್ಷೇತ್ರದಲ್ಲಿ ರೈತರೇ ನಿಜವಾದ ವಿಜ್ಞಾನಿಗಳಾಗಿದ್ದು, ಅವಧಿಗೆ ಮುನ್ನ ಬರುವ ರೋಗಬಾಧೆ, ಕೀಟಗಳ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾಹಿತಿ ಹೊಂದಿರುತ್ತಾರೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜಯನಗರದ ಇಸ್ಕಾನ್ ಸಂಸ್ಥೆಯ ಶ್ರೀಧಾಮ ಸಭಾಂಗಣದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ರಸಗೊಬ್ಬರ, ಬಿತ್ತನೆ ಬೀಜ ಹಾಗೂ ಕ್ರಿಮಿನಾಶಕ ಮಾರಾಟಗಾರರ ಸಂಘದ ಜಿಲ್ಲಾಮಟ್ಟದ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು, ಚಾಮರಾಜನಗರ ಸೇರಿದಂತೆ ವಿವಿಧೆಡೆ ಕೃಷಿ ಪರಿಕರಗಳ ಮಾರಾಟ ಕ್ಷೇತ್ರದಲ್ಲಿ ಕಳೆದ ಐದು ವರ್ಷದಲ್ಲಿ ಸಾಕಷ್ಟು ಬದಲಾವಣೆ ಆಗಿವೆ. ಈ ಹಿಂದೆ ಹೋಬಳಿ ಅಥವಾ ತಾಲೂಕು ಕೇಂದ್ರಗಳಲ್ಲಿ ಕೃಷಿ ಪರಿಕರಗಳ ಮಾರಾಟಗಾರರು ರೈತರಿಗೆ ಸೇವೆ ಒದಗಿಸುತ್ತಿದ್ದರು. ಆದರೆ, ಐದು ವರ್ಷಗಳಿಂದ ರಸಗೊಬ್ಬರ, ಬಿತ್ತನೆ ಬೀಜ, ಕ್ರಿಮಿನಾಶಕ ಮಾರಾಟಗಾರರ ಸಂಖ್ಯೆ ಹೆಚ್ಚಾಗಿದೆ. ರೈತರ ಸಂಖ್ಯೆಯನ್ನು ಹೋಲಿಸಿದರೆ, ಈಗಿರುವ ಪರಿಕರ ಮಾರಾಟಗಾರರ ಸಂಖ್ಯೆ ಕಡಿಮೆ ಎನಿಸುತ್ತದೆ. ಆದರೂ, ರೈತರಿಗೆ ಹೊಸ ಹೊಸ ತಂತ್ರಜ್ಞಾನ ತಲುಪಿಸಲು ಕೃಷಿ ಪರಿಕರ ಮಾರಾಟಗಾರರ ಸಂಘ ಶ್ರಮಿಸುತ್ತಿರುವುದು ಶ್ಲಾಘನೀಯ ಎಂದರು.



ಮೈಸೂರಿನ ಜಯನಗರದ ಇಸ್ಕಾನ್ ಸಂಸ್ಥೆಯ ಶ್ರೀಧಾಮ ಸಭಾಂಗಣದಲ್ಲಿ ಆಯೋಜಿಸಿದ್ದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ರಸಗೊಬ್ಬರ, ಬಿತ್ತನೆ ಬೀಜ ಹಾಗೂ ಕ್ರಿಮಿನಾಶಕ ಮಾರಾಟಗಾರರ ಸಂಘದ ಜಿಲ್ಲಾಮಟ್ಟದ ಸಮಾವೇಶವನ್ನು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್ ಉದ್ಘಾಟಿಸಿದರು.

ಪರಿಕರ ಮಾರಾಟಗಾರರು ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕ ಮಾತ್ರ ಮಾರಾಟ ಮಾಡುವುದಕ್ಕೆ ಮಾತ್ರ ಸೀಮಿತವಾಗಿರದೇ ಆವಿಷ್ಕಾರಗೊಂಡ ಹೊಸ ಹೊಸ ತಂತ್ರಜ್ಞಾನ ಯಾವ ರೀತಿ ಬಳಕೆ ಮಾಡಿಕೊಳ್ಳಬೇಕು ಎಂಬುದನ್ನು ರೈತರಿಗೆ ತಿಳಿ ಹೇಳುವ ಕಾರ್ಯದಲ್ಲೂ ತೊಡಗಿಸಿಕೊಂಡಿದ್ದಾರೆ. ಹೊಸ ತಂತ್ರಜ್ಞಾನ, ಹೊಸ ಕೀಟನಾಶಕ ಸೇರಿದಂತೆ ಇನ್ನಿತರ ವಸ್ತುಗಳನ್ನು ಬಳಸುವುದು ಹೇಗೆ ಎಂದು ಇಲಾಖೆಯ ಅಧಿಕಾರಿಗಳಾಗಲೀ, ವಿಜ್ಞಾನಿಗಳಾಗಲಿ, ಕೃಷಿ ಅಧ್ಯಯನ ಕೇಂದ್ರ ವಿಜ್ಞಾನಿಗಳು, ನಿವೃತ್ತಿ ಹೊಂದಿರುವ ಅಧಿಕಾರಿಗಳಾಗಲೀ, ಕೃಷಿ ವಿವಿ ವಿಜ್ಞಾನಿಗಳಾಗಲೀ ರೈತರಿಗೆ ಮನವರಿಕೆ ಮಾಡಿಕೊಡುವುದಕ್ಕಿಂತ ಮೊದಲೇ ಆ ಕೆಲಸವನ್ನು ಪರಿಕರ ಮಾರಾಟಗಾರರೇ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಮಾರುಕಟ್ಟೆಗೆ ಬರುವ ಹೊಸ ಕೀಟನಾಶಕ, ರಸಗೊಬ್ಬರ ಹಾಗೂ ಇನ್ನಿತರ ಫೆಸ್ಟಿಸೈಡ್ ಬಗ್ಗೆ ರೈತರಿಗೆ ಮಾಹಿತಿ ನೀಡುವುದು. ಅವುಗಳು ಮಾಡುವ ಕೆಲಸ, ಯಾವ ಬೆಳೆಗೆ ಶಿಫಾರಸ್ಸು ಮಾಡಬೇಕು. ಯಾವ ಪ್ರಮಾಣದಲ್ಲಿ ಶಿಫಾರಸ್ಸು ಮಾಡಬೇಕೆಂಬ ಮಾಹಿತಿ ಪರಿಕರ ಮಾರಾಟಗಾರರಲ್ಲಿರುತ್ತದೆ. ಯಾವುದಾದರೂ ತಳಿ ಕುರಿತು ಸಂಶೋಧನೆ ಮಾಡಿ 10 ವರ್ಷ ಆದ ನಂತರ ತಳಿ ಬಿಡುಗಡೆ ಮಾಡಿದರೆ, ಆಗ ತಳಿ ಸಾಮರ್ಥ್ಯ ಕಡಿಮೆಯಾಗುತ್ತದೆ. ಇಂತಹ ಸಂದರ್ಭದಲ್ಲಿ ತಳಿಯೊಂದಿಗೆ ಯಾವ ಯಾವ ರಸಗೊಬ್ಬರ, ಯಾವ ಹೆಚ್ಚು ಇಳುವರಿಗೆ ಬಳಸಬೇಕಾದ ವಸ್ತುಗಳ ಬಗ್ಗೆ ಶಿಫಾರಸ್ಸು ಮಾಡುವ ಕಾರ್ಯವನ್ನು ರಸಗೊಬ್ಬರ ಮಾರಾಟಗಾರರು ಮಾಡುತ್ತಿರುವುದರಿಂದ, ವಿವಿಧೆಡೆ ಹೊಸ ಪ್ರಯೋಗಗಳೂ ನಡೆಯಲು ಸಹಕಾರಿಯಾಗಿದೆ ಎಂದರು.

ಕೃಷಿ ಇಲಾಖೆ ಅಧಿಕಾರಿಗಳಿಗೆ ಮಾರುಕಟ್ಟೆಯಲ್ಲಿ ಲಭ್ಯವಿರುವ ಹೊಸ ಹೊಸ ರಸಗೊಬ್ಬರ, ಕೀಟನಾಶಕ ಶಿಫಾರಸ್ಸು ಮಾಡುವ ಅಧಿಕಾರವಿಲ್ಲ. ಇತ್ತೀಚಿನ ವರ್ಷಗಳಲ್ಲಿ ಒಂದಕ್ಕಿಂತ ಹೆಚ್ಚು ಕೀಟನಾಶಕ ಮಿಶ್ರಣ ಆಗಿರುವ ಕೀಟನಾಶಗಳು ಶಿಫಾರಸ್ಸಾಗಿ ಬರುತ್ತಿವೆ. ಇಲಾಖೆಯ ಅಧಿಕಾರಿಗಳು ಶಿಫಾರಸ್ಸು ಮಾಡುವುದಕ್ಕಿಂತ ಮೊದಲೇ ಮಾರಾಟಗಾರರು ರೈತರಿಗೆ ಶಿಫಾರಸ್ಸು ಮಾಡುತ್ತಿದ್ದಾರೆ. ಇಲಾಖೆಯ ಅಧಿಕಾರಿಗಳು ಕ್ಷೇತ್ರ ವೀಕ್ಷಣೆಗೆ ಹೋದಾಗ ರೈತರಲ್ಲಿ ಯಾವ ರಾಸಾಯನಿಕ, ರಸಗೊಬ್ಬರ, ಕೀಟನಾಶಕ ಬಳಸುತ್ತೀರಿ ಎಂದು ಮಾಹಿತಿ ಕೇಳಿ ಫೀಡ್ ಬ್ಯಾಕ್ ತೆಗೆದುಕೊಳ್ಳುತ್ತಿದ್ದೇವೆ. ಕೃಷಿ ಕ್ಷೇತ್ರದಲ್ಲಿ ರೈತರೇ ಮೊದಲ ವಿಜ್ಞಾನಿಗಳಾಗಿದ್ದು, ನಾವು–ನೀವು ಏನೇ ಶಿಫಾರಸ್ಸು ಮಾಡಿದರೂ, ಯಾವುದು ಬಳಕೆ ಮಾಡಬೇಕು ಎಂದು ನಿರ್ಧರಿಸುವುದು ರೈತರೇ ಆಗಿದ್ದಾರೆ. ನಾವು ರೈತರಲ್ಲಿ ಫೀಡ್ ಬ್ಯಾಕ್ ತೆಗೆದುಕೊಂಡಾಗ ಬಳಸಿದ ಪ್ರಾಡಕ್ಟ್ ಹಾಗೂ ಅವಧಿಗೆ ಮುನ್ನವೇ ಬರುವ ರೋಗ, ಬಾಧೆಗಳಿಗೆ ನಿಯಂತ್ರಣ ಮಾಡುವ ವಿಧಾನವನ್ನು ರೈತರಿಂದ ತಿಳಿದುಕೊಂಡು ಫೋರ್ಕಾಸ್ಟ್ ಮಾದರಿಯಲ್ಲಿ ಇತರರಿಗೂ ಮಾಹಿತಿ ಕೊಡಲು ನೆರವಾಗುತ್ತದೆ ಎಂದು ತಿಳಿಸಿದರು.

ಬೇಡಿಕೆಗಳು: ಮಳಿಗೆಗಳಲ್ಲಿ ರಸಗೊಬ್ಬರ ಹಾಗೂ ಬಿತ್ತನೆ ಬೀಜ ದಾಸ್ತಾನು ಮಾಡಲು ಪರವಾನಗಿ ಇದ್ದು, ಇದೀಗ ಕ್ರಿಮಿನಾಶಕ ದಾಸ್ತಾನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಪ್ರತ್ಯೇಕ ಪರವಾನಗಿ ಪ್ರಸ್ತಾಪ ಕೈಬಿಡಬೇಕು. ಮಾರಾಟಗಾರರಿಗೆ ಕಡ್ಡಾಯವಾಗಿ ಪಿಓಎಸ್ ಮಿಷನ್‌ನಿಂದ ಬಿಲ್ ತೆಗೆಯಬೇಕೆಂಬ ನಿಯಮದಿಂದ ತೊಂದರೆಯಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ನೆಟ್ವರ್ಕ್ ಸಮಸ್ಯೆಯಿಂದಾಗಿ ತೊಂದರೆಯಾಗುತ್ತಿದ್ದು, ಅದನ್ನು ಸರಿಪಡಿಸಬೇಕು. ರಸಗೊಬ್ಬರ, ಬಿತ್ತನೆ ಬೀಜ, ಕೀಟನಾಶಕ ಮಾರಾಟಕ್ಕೆ ನಿಗದಿ ಮಾಡಿರುವ ವಿದ್ಯಾರ್ಹತೆಯನ್ನು ಪಾಲಿಸುತ್ತಿದ್ದು, ದಾಸ್ತಾನು ಮಳಿಗೆ ನಿರ್ವಹಣೆಗೂ ವಿದ್ಯಾರ್ಹತೆ ನಿಗದಿ ಮಾಡಿರುವುದನ್ನು ಹಿಂಪಡೆಯುವುದು ಸೇರಿದಂತೆ 10 ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ, ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರಿಗೆ ಮನವಿ ಸಲ್ಲಿಸಲು ನಿರ್ಧರಿಸಲಾಯಿತು. ಸಭೆಯಲ್ಲಿ ಚಾಮರಾಜನಗರ ಜಿಲ್ಲೆಯ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಡಾ.ಎಸ್.ಎಸ್. ಅಬೀಬ್,ಜಾಗೃತ ಕೋಶದ ಜಂಟಿ ನಿರ್ದೇಶಕ ಡಾ.ಕೆ.ಮಧುಸೂಧನ್, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ರಸಗೊಬ್ಬರ, ಬಿತ್ತನೆ ಬೀಜ ಹಾಗೂ ಕ್ರಿಮಿನಾಶಕ ಮಾರಾಟಗಾರರ ಸಂಘದ ಅಧ್ಯಕ್ಷ ಬಿ.ಪಿ.ಶಿವಪ್ರಕಾಶ್, ಗೌರವಾಧ್ಯಕ್ಷ ಎಂ.ಎ.ನಂಜಪ್ಪ, ಉಪಾಧ್ಯಕ್ಷ ಜಿ.ಸಿದ್ದರಾಮಣ್ಣ, ವಿ.ಅನಂತಬಾಬು, ಕಾರ್ಯದರ್ಶಿ ಕೆ.ಸಿ.ಸತೀಶ್, ಜಂಟಿ ಕಾರ್ಯದರ್ಶಿ ಎಂ.ಎಸ್ ಉಮೇಶ್, ಎಸ್.ಅರಸ್, ಖಜಾಂಚಿ ಎಸ್.ಎಂ.ಶಿವಮಾದಪ್ಪ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ವಿಧಾನಸೌಧದಲ್ಲಿ ಪಾಕಿಸ್ತಾನ ಬಾವುಟ ಹಾರಿಸಿದರೆ ಏನ್ಮಾಡ್ತೀರಿ?

ಸರ್ಕಾರದ ವಿರುದ್ಧ ಆರ್.ಅಶೋಕ್ ವಾಗ್ದಾಳಿ

ಬೆಂಗಳೂರು: ವಿಧಾನಸೌಧದಲ್ಲಿ ನಾಳೆ ಪಾಕಿಸ್ತಾನ ಬಾವುಟ ಹಾರಿಸಿದರೆ ಏನು ಮಾಡ್ತೀರಿ ಎಂದು ರಾಜ್ಯ ಸರ್ಕಾರದ ವಿರುದ್ಧ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ವಾಗ್ದಾಳಿ ನಡೆಸಿದರು.

ವಿಧಾನಸಭೆಯಲ್ಲಿ ಮಾತನಾಡಿದ ಅವರು, ಯಾರನ್ನು ಕಾಪಾಡಲು ಸರ್ಕಾರ ಮೌನ ವಹಿಸಿದೆ. ಈ ಘಟನೆ ನಡೆದ ಬೆನ್ನಲ್ಲೇ ಸಚಿವರು ಸಭೆ ನಡೆಸಿ ಅಧಿಕಾರಿಗಳನ್ನು ಬೆಂಡೆತ್ತಬೇಕಿತ್ತು. ಆದರೆ ಬಂಧನಕ್ಕೆ ಏಕೆ ಹಿಂದೇಟು ಹಾಕ್ತಿದ್ದೀರಿ. ಘಟನೆಯ ಬಗ್ಗೆ ನಾಸಿರ್ ಹುಸೇನ್ ಏಕೆ ಸುಮ್ಮನಿದ್ದಾರೆ ಎಂದು ಕಿಡಿಕಾರಿದರು.

ಪವಿತ್ರ ಶಕ್ತಿ ಕೇಂದ್ರದಲ್ಲಿ 'ಪಾಕಿಸ್ತಾನ ಜಿಂದಾಬಾದ್' ಘೋಷಣೆ ಕೂಗುವ ಮೂಲಕ ಅಪವಿತ್ರ ಮಾಡಿದ್ದಾರೆ. ಹೀಗಿರುವಾಗ ನಾವು ಹೇಗೆ ಇಲ್ಲಿ ಕೂರಲು ಸಾಧ್ಯ, ಕಾನೂನು ಸುವ್ಯವಸ್ಥೆ ವಿಧಾನಸೌಧದಲ್ಲೇ ಇಲ್ಲ ಅಂದರೆ ರಾಜ್ಯದಲ್ಲಿ ಹೇಗಿರಲು ಸಾಧ್ಯ ಎಂದು ಪ್ರಶ್ನಿಸಿದರು.



ಆಕ್ಷೇಪಾರ್ಹ ಪದ ಬಳಕೆ ಮಾಡಿ ಯತ್ನಾಳ್ ವಾಗ್ದಾಳಿ: ಇದೇ ವಿಚಾರವಾಗಿ ಮಾತನಾಡಿದ ಬಿಜೆಪಿ ಸದಸ್ಯ ಬಸನಗೌಡ ಪಾಟೀಲ್ ಯತ್ನಾಳ್, ವಿಧಾನಸೌಧದಲ್ಲಿ ನಡೆದ ಪ್ರಕರಣವನ್ನು ಮುಚ್ಚಿಹಾಕುವ ಪ್ರಯತ್ನ ಮಾಡಬಾರದು. ಯಾವ ದೇಶದ ಅನ್ನ ಗಾಳಿ ಸೇವಿಸಿ ಆ ದೇಶದ ವಿರುದ್ಧ ನಡೆದರೆ ಶಿಕ್ಷೆ ಆಗಬೇಕು. ಹಿಂದೂ, ಮುಸ್ಲಿಂ, ಕ್ರೈಸ್ತ ಯಾರೇ ಇರಲಿ, ದೇಶದ ವಿರುದ್ಧ ಮಾತನಾಡಿದರೆ ಅವರಿಗೆ ಶಿಕ್ಷೆ ಆಗಬೇಕು ಎಂದರು. ಯಾರು ಭಾರತದ ವಿರುದ್ಧ, ಪಾಕಿಸ್ತಾನದ ಪರವಾಗಿ ಇದ್ದಾರೋ ನಮಕ್ ಹರಾಮಿಗಳು ಎಂದು ಹೇಳಿ ಆಕ್ಷೇಪಾರ್ಹ ಪದ ಪ್ರಯೋಗ ಮಾಡಿದರು.

ಯಾವುದೇ ಪದ ಬಳಕೆಗೆ ಅವಕಾಶ ಇದೆ ಎಂದ ಸ್ಪೀಕರ್

ಪಾಕಿಸ್ತಾನದ ಪರವಾಗಿದ್ದವರ ವಿರುದ್ಧ ಯಾವ ಪದ ಬಳಕೆ ಮಾಡಿದರೂ ಅದಕ್ಕೆ ಅನುಮತಿ ಇದೆ ಎಂದು ಸ್ಪೀಕರ್ ಯು.ಟಿ.ಖಾದರ್ ಅವರು ಯತ್ನಾಳ್‌ಗೆ ಅನುಮತಿ ನೀಡಿದರು. ಆದರೆ ಯಾವ ಶಬ್ಧ ಬಳಕೆ ಮಾಡಬಹುದು, ಯಾವ ಪದ ಬಳಕೆ ಮಾಡಬಾರದು ಎಂಬುದಕ್ಕೆ ಸದನದಲ್ಲಿ ನಿಯಮ ಇದೆ ಎಂದು ಕಾಂಗ್ರೆಸ್ ಸದಸ್ಯ ಬಸವರಾಜ ರಾಯರೆಡ್ಡಿ ಆಕ್ಷೇಪ ವ್ಯಕ್ತಪಡಿಸಿದರು.

ಪಾಕಿಸ್ತಾನ ಪರ ಘೋಷಣೆಯ ನೈತಿಕ ಹೊಣೆ ಸಿದ್ದರಾಮಯ್ಯ ಹೊರಬೇಕು

ಬೆಂಗಳೂರು: ವಿಧಾನಸೌಧದಲ್ಲಿ



ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗಿರುವ ಆರೋಪದ ಹೊಣೆಯನ್ನು ಸಿಎಂ ಸಿದ್ದರಾಮಯ್ಯ ಹೊರಬೇಕು ಎಂದು ಬಿಜೆಪಿ ಸದಸ್ಯ ಸುನೀಲ್‌ಕುಮಾರ್ ಆಗ್ರಹಿಸಿದರು.

ವಿಧಾನಸಭೆಯಲ್ಲಿ ಮಾತನಾಡಿದ ಅವರು, ಘೋಷಣೆ ಕೂಗಿದವರನ್ನು ವಿಧಾನಸಭೆ ಹೊರಗಡೆ ಹೋಗಲು ಪೊಲೀಸರು ಹೇಗೆ ಬಿಟ್ಟರು, ಏಕೆ ಅವರ ಬಂಧನ ಈವರೆಗೆ ಆಗಿಲ್ಲ, ಇದರ ವಿರುದ್ಧ ಕ್ರಮ ಕೈಗೊಳ್ಳಬೇಡಿ ಎಂದು ಒತ್ತಡ ಹೇರುವ ಶಕ್ತಿ ಯಾವುದು ಎಂದು ಪ್ರಶ್ನಿಸಿದರು.

ಘಟನೆಯ ಬಗ್ಗೆ ಎಫ್‌ಎಸ್‌ಎಲ್ ವರದಿ ಬಗ್ಗೆ ನಾನು ಅನುಮಾನ ವ್ಯಕ್ತಪಡಿಸುತ್ತಿಲ್ಲ. ಆದರೆ ಎಫ್‌ಎಸ್‌ಎಲ್ ವರದಿ ಬರಲು ತಿಂಗಳುಗಟ್ಟಲೆ ಕಾಯಬೇಕು ಎಂದ ಅವರು, ಕಳೆದ ಒಂಬತ್ತು ತಿಂಗಳಲ್ಲಿ ಸರ್ಕಾರದ ಧೋರಣೆಯಿಂದ ಇಂತಹ ಘಟನೆ ನಡೆಯುತ್ತದೆ. ಈ ನಿಟ್ಟಿನಲ್ಲಿ ಪಾಕಿಸ್ತಾನ್ ಜಿಂದಾಬಾದ್ ಘೋಷಣೆ ಘಟನೆಯ ನೈತಿಕ ಹೊಣೆ ಸಿದ್ದರಾಮಯ್ಯ ಹೊರಬೇಕು ಎಂದು ಆಗ್ರಹಿಸಿದರು.

ವಿಜಯೋತ್ಸವದ ಸಂದರ್ಭದಲ್ಲಿ ಪಾಕಿಸ್ತಾನದ ಪರ ಘೋಷಣೆ ಕೂಗಿದರೆ ದೊಡ್ಡ ಅಪರಾಧ. ಪಾಕಿಸ್ತಾನದ ಪರವಾಗಿ ಮಾನಸಿಕತೆ ಇರುವ ವ್ಯಕ್ತಿಗಳು ಯಾರೇ ಇದ್ದರೂ ಇದನ್ನು ಖಂಡಿಸಬೇಕು. ಇದರ ವಿರುದ್ಧ ಕಠಿಣ ಶಿಕ್ಷೆ ಆಗಬೇಕು ಎಂದು ಆಗ್ರಹಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ– ಮೈಸೂರಿನ ಎನ್. ರವಿಶಂಕರ್, 6.40 ಪದಸಂಸ್ಕೃತಿ, ಪ್ರಸ್ತುತಿ– ಡಾ. ಸಂಗಮೇಶ ಸವದತ್ತಿ ಮಠ, 7.15 ಹಸಿರು ಹೊನ್ನು–ಪ್ರಾಯೋಜಿತ ಕಾರ್ಯಕ್ರಮ, 10.00 ಶ್ರೀವಲ್ಸನ್ ಜೆ. ಮೆನನ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30ದೇವರ ನಾಮ–ಎನ್. ಹೇಮಾ, 1.20 ಭಾವಗೀತೆ–ಟಿ.ಎನ್. ಸ್ನೇಹಾ, 6.50 ಕೃಷಿರಂಗ–ಕೃಷಿ ಪ್ರವಾಸೋದ್ಯಮ, ಅವಕಾಶಗಳು ಹಾಗೂ ಸವಾಲುಗಳು ಕುರಿತು ಮಾತನಾಡುತ್ತಾರೆ ಡಾ. ಕೆ.ಸಿ. ಗುಮ್ಮಗೋಳ್ ಮಠ್, 8.00 ಯುವವಾಣಿ–ಸಣ್ಣಕಥೆ "ಮಳೆ ಬಿದ್ದ ಸಂಜೆ" ಬರೆದು ಪ್ರಸ್ತುತಪಡಿಸುತ್ತಾರೆ ಮೈಸೂರಿನ ಕೀರ್ತಿ ಎಸ್., ಸ್ವರಚಿತ ಕವನ ವಾಚನ–ಪವನ್ ಗೌಡ ಎಸ್.ಆರ್. ಅವರಿಂದ, 9.30 ಕಾಲಗತಿ–ಶಬ್ದಚಿತ್ರ, ರಚನೆ– ರೋಹಿತ ಚಕ್ರತೀರ್ಥ, ನಿರೂಪಣೆ– ದಿವಾಕರ ಹೆಗಡೆ ಮತ್ತು ಕೆ.ಬಿ.ಮೀನಾ, ನಿರ್ಮಾಣ– ಜಿ.ಎನ್. ಮಂಜುನಾಥ್, 10.00 ನಾಟಕ "ಆತ್ಮ ಸಾಕ್ಷಿಯ ಬೆನ್ನು ಹತ್ತಿ", ರಚನೆ ಮತು ನಿರ್ಮಾಣ– ಪ್ರಭುಸ್ವಾಮಿ ಮಳಿಮಠ, 10.30 ಸವಿನೆನಪು

ಇಂದಿನ ಪಂಚಾಂಗ

29.2.2024 ಗುರುವಾರ, ಮಳೆ ನಕ್ಷತ್ರ: ಶತಭಿಷ 20.2.2024ರಿಂದ 03.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ಚಿತ್ತ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ :** ಸ್ವಾತಿ ನಕ್ಷತ್ರ ಪ್ರಯುಕ್ತ ವಿಶೇಷ ಪೂಜೆ, ಬೆಳಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮ. 12.30ಕ್ಕೆ ಶಾತ್ತುಮೊರೈ, 1ಕ್ಕೆ ತೀರ್ಥಪ್ರಸಾದ ವಿನಿಯೋಗ, ಸಂಜೆ 7.30ಕ್ಕೆ ಪ್ರಾಕಾರೋತ್ಸವ, ಸ್ಥಳ: ದೇವಸ್ಥಾನ, ಕಾಳಿದಾಸ ರಸ್ತೆ.

■ **ಪೋಡಾರ್ ಇಂಟರ್‌ನ್ಯಾಷನಲ್ ಸ್ಕೂಲ್ :** ಬದಲಾವಣೆಗಾಗಿ ಬದಲಾಗೋಣ ಪೋದಾರ್ ಶಾಲೆಯ ಮಕ್ಕಳಿಂದ ಜಾಗೃತಿ ಜಾಥಾ, ಸ್ಥಳ: ವಿಜಯನಗರ 3ನೇ ಹಂತ, ಬೆಳಗ್ಗೆ 10ಕ್ಕೆ.

■ **ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ :** ವಿಶ್ವ ಶ್ರವಣ ದಿನದ ಅಂಗವಾಗಿ ಉಚಿತ ಶ್ರವಣ ತಪಾಸಣಾ ಶಿಬಿರ, ಮುಖ್ಯ ಅತಿಥಿಗಳು : ಡಾ. ತಾಶಿ ತೋಬ್‌ಗೇ, ಡಾ. ಮೊಹಮದ್ ಅಶೀಲ್, ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್. ರಾಜು, ಪ್ರೊ. ಬಿ.ಕೆ. ಜಗದೀಶ್, ಎಂ.ಬಿ. ಶ್ರೀಕಂಠಸ್ವಾಮಿ, ಅಧ್ಯಕ್ಷತೆ : ಸಂಸ್ಥೆ ನಿರ್ದೇಶಕ ಡಾ. ಪುಷ್ಪಾವತಿ, ಸ್ಥಳ: ಮಾನಸಗಂಗೋತ್ರಿ ಸ್ಕೂಲ್, ಮಾನಸಗಂಗೋತ್ರಿ, 10ಕ್ಕೆ.

■ **ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯ :** ಔಷಧ ವಿಜ್ಞಾನ ವಿದ್ಯಾರ್ಥಿಗಳ ಸಮ್ಮೇಳನ 'ಅವಿಸ್ಕಾನ್', ಮುಖ್ಯ ಅತಿಥಿಗಳು : ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಪ್ರಾಂಶುಪಾಲ ಡಾ. ಎಚ್. ಬಸವನಗೌಡಪ್ಪ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಡೀನ್ ಡಾ. ಪ್ರಶಾಂತ್ ವಿಶ್ವನಾಥ್, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಡಾ. ಟಿ.ಎಂ. ಪ್ರಮೋದ್ ಕುಮಾರ್, ಸ್ಥಳ: ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯದ ಶ್ರೀ ರಾಜೇಂದ್ರ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ :** ನಿವೃತ್ತ ಪ್ರಾಧ್ಯಾಪಕ ಡಾ. ಎನ್.ಜಿ. ಸತೀಶ್ ಅವರಿಂದ 17ನೇ ಡಿಜಿಟಲ್ ಲೈಬ್ರರಿ ಕುರಿತು ಮಾಹಿತಿ ದತ್ತಿ ಉಪನ್ಯಾಸ, ಗೌರವ ಅತಿಥಿಗಳು : ಇನ್‌ಫಾರ್‌ಮೆಟಿಕ್ಸ್ ಇಂಡಿಯಾ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಎನ್.ವಿ. ಸತ್ಯನಾರಾಯಣ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸ್ಥಳ: ಯೂನಿವರ್ಸಿಟಿ ಕೆರಿಯರ್ ಹಬ್ಬ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ನಿವೃತ್ತ ಪ್ರಾಂಶುಪಾಲರಾದ ಕೆ. ಅಣ್ಣೇಗೌಡ ರಚಿಸಿರುವ 'ತಿರುವುಗಳು' ಕೃತಿ ಲೋಕಾರ್ಪಣಾ ಸಮಾರಂಭ, ಕೃತಿ ಬಿಡುಗಡೆ : ವಿಶ್ರಾಂತ ಪ್ರಾಂಶುಪಾಲ ಎಸ್. ಕುಮಾರಸ್ವಾಮಿ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಸಹಾಯಕ ಪ್ರಾಧ್ಯಾಪಕ ಡ. ಹೆಚ್.ಕೆ. ಮರೀಗೌಡ, ನಿವೃತ್ತ ಪೊಲೀಸ್ ಅಧಿಕಾರಿ ಸಿ.ಎಸ್. ಮಂಜೇಗೌಡ, ಕೃತಿ ಲೇಖಕ ಕೆ. ಅಣ್ಣೇಗೌಡ, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘ, ತ್ಯಾಗರಾಜ ರಸ್ತೆ, ಮ. 12.30ಕ್ಕೆ

■ **ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ಭಾರತ ಸರ್ಕಾರ :** ಓಬಿಸಿ ವಸತಿ ಹಾಸ್ಟೆಲ್ಸ್ ಉದ್ಘಾಟನಾ ಸಮಾರಂಭ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಡಾ. ವೀರೇಂದ್ರ ಕುಮಾರ್, ಉಪಸ್ಥಿತರು : ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವರಾದ ರಾಮದಾಸ್ ಅಥವಲೆ, ಎ. ನಾರಾಯಣಸ್ವಾಮಿ, ಪ್ರತಿಮಾ ಭೌಮಿಕ್, ಸಂಸದ ಪ್ರತಾಪ್ ಸಿಂಹ, ಶಾಸಕ ಜಿ.ಟಿ. ದೇವೇಗೌಡ, ಸ್ಥಳ: 437/ಎ, ಹೆಬ್ಬಾಳು ಕೈಗಾರಿಕಾ ಪ್ರದೇಶ, ಮ. 1ಕ್ಕೆ.

■ **ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಪಿಸಿಯೋಥೆರಪಿ ವಿಭಾಗ, ಇಂಡಿಯನ್ ಸೈಕಿಯಾಟ್ರಿ ಸೊಸೈಟಿ – ಕರ್ನಾಟಕ ಚಾಪ್ಟರ್ :** IV ಇಂಡೋ–ಯೂರೋಪಿಯನ್ ಆನ್ ಕೋಎರ್ಸನ್ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಗೌರವ ಅತಿಥಿಗಳು : ಆದಿಚುಂಚನಗಿರಿ ವಿಶ್ವವಿದ್ಯಾನಿಲಯ ಉಪಕುಲಪತಿ ಡಾ. ಎಂ.ಎ.ಶೇಖರ್, ಮುಖ್ಯ ಅತಿಥಿಗಳು : ಡಾ. ಟಾಮ್ ಪಾಮ್‌ಸ್ಟೀಯರ್ನ, ಅಧ್ಯಕ್ಷತೆ : ಎಂಎಂಸಿ ಮತ್ತು ಆರ್‌ಐ ನಿರ್ದೇಶಕರಾದ ಡಾ. ಕೆ.ಆರ್. ದಾಕ್ಷಾಯಿಣಿ, ಸ್ಥಳ: ಮಿಲೇನಿಯಂ ಸಭಾಂಗಣ, ಜೆ.ಕೆ. ಮೈದಾನ, ಮ. 3.30ಕ್ಕೆ.

■ **ಶ್ರೀ ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್ :** ಶ್ರೀ ಸುಬ್ರಹ್ಮಣ್ಯಸ್ವಾಮಿ ಪ್ರತಿಷ್ಠಾ ಮಹೋತ್ಸವ, ಬೆಳಗ್ಗೆ 8.30ಕ್ಕೆ ಶ್ರೀ ವೀರಭದ್ರಸ್ವಾಮಿ ಸನ್ನಿಧಿಯಿಂದ ಅಗ್ರತೀರ್ಥ ಸಂಗ್ರಹ, ಸವತ್ಸಧೇನು ಸಹಿತ, ಯಾಗಶಾಲಾ ಪ್ರವೇಶ, ಪುಣ್ಯಾಹ ನಾಂದೀ ಪಂಚಗವ್ಯ ಸಾದನ–ಪ್ರೋಕ್ಷಣೆ, ರಕ್ಷಾಪೂಜೆ, ಬಂಧನ, ಜಲಾಭಿವಾಸ, ಗಣಹೋಮ, ಕಲಶಾಭಿವಾಸ, ಸಂಜೆ 4.30ಕ್ಕೆ ವಾಸ್ತು ರಕ್ಷೋಘ್ನ ಪೂಜೆ ಧಾನ್ಯಾಭಿವಾಸ, ಅಂಕುರಾರ್ಪಣ, ಕಲಶ ಪೂಜೆ, ಘೃತಾಧಿವಾಸಗಳು, ಶಯ್ಯಾಧಿವಾಸ, ಯಂತ್ರ, ನವರತ್ನನ್ಯಾಸ, ಅಷ್ಟಬಂಧ, ಮ. 12.40ಕ್ಕೆ ತೀರ್ಥಪ್ರಸಾದ ವಿನಿಯೋಗ, ಮಧ್ಯಾಹ್ನ 1ಕ್ಕೆ ಮಹಾಪ್ರಸಾದ ವಿನಿಯೋಗ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಮಹಾರಾಜ ಸಂಸ್ಕೃತ ಪಾಠಶಾಲೆ ನಿವೃತ್ತ ಪ್ರಾಧ್ಯಾಪಕ ಪ್ರೊ. ವಿದ್ವಾನ್ ಎಂ. ಮಲ್ಲಣ್ಣ, ಸ್ಥಳ: ಗಣಪತಿ ದೇವಸ್ಥಾನ, ತ್ಯಾಗರಾಜ ವೃತ್ತ, ಕೆ.ಆರ್. ಮೊಹಲ್ಲಾ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠ :** 'ಕೃತಿಗಳ ಲೋಕಾರ್ಪಣೆ ಹಾಗೂ 2022ನೇ ಸಾಲಿನ ಪ್ರಶಸ್ತಿಗಳ ಪ್ರದಾನ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ : ಅರ್ಕ ಫೌಂಡೇಶನ್‌ನ ಸೆಂಟರ್ ಫಾರ್ ಕಾನ್ಷಿಯಸ್ ಅವೇರ್‌ನೆಸ್ ಸಂಸ್ಥಾಪಕ ಶ್ರೀ ಯೋಗಿ ಶ್ರೀನಿವಾಸ ಅರ್ಕ, ಅಧ್ಯಕ್ಷತೆ : ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಪ್ರಶಸ್ತಿ ಪ್ರದಾನ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಕೃತಿ ಲೋಕಾರ್ಪಣೆ : ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಡಾ. ಸತೀಶ್‌ಕುಮಾರ್ ಎಸ್. ಹೊಸಮನಿ, ಕೃತಿ ಪರಿಚಯ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಕ್ಕಮಹಾದೇವಿ ಸಂಶೋಧನಾ ಪೀಠದ ನಿರ್ದೇಶಕರಾದ ಡಾ. ಕವಿತಾ ರೈ, ಪ್ರಶಸ್ತಿ ಪುರಸ್ಕೃತರ ಪರಿಚಯ: ಮೈಸೂರಿನ ಶ್ರೀ ಕಲಾನಿಕೇತನ ದೃಶ್ಯಕಲಾ ಕಾಲೇಜಿನ ಉಪನ್ಯಾಸಕ ಡಾ. ವಿಠ್ಠಲರೆಡ್ಡಿ ಎಫ್. ಚುಳಕಿ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಸಂಜೆ 5.30ಕ್ಕೆ

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ನಂಜನಗೂಡಿನಲ್ಲಿಂದು

■ **ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ನಂಜನಗೂಡು :** ವಿಶ್ವಗುರು ಬಸವಣ್ಣ ಕರ್ನಾಟಕ ಸಾಂಸ್ಕೃತಿಕ ನಾಯಕ ಸರಣಿ ಉಪನ್ಯಾಸ ಮಾಲಿಕೆ ಉದ್ಘಾಟನೆ ಹಾಗೂ ದತ್ತಿ ಉಪನ್ಯಾಸ ಸಮಾರಂಭ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಡಾ. ಎಸ್. ಶಿವರಾಜಪ್ಪ ಅವರಿಂದ ಬಸವಣ್ಣನವರ ಸಾಮಾಜಿಕ ಚಿಂತನೆಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಆಶಯ ನುಡಿ : ನಿಕಟಪೂರ್ವ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಜೆಎಸ್‌ಎಸ್ ಕಾಲೇಜು ಸಭಾಂಗಣ, ದೇವೀರಮ್ಮನಹಳ್ಳಿ, ನಂಜನಗೂಡು, ಬೆಳಗ್ಗೆ 11ಕ್ಕೆ.

ಮುಡಾ ಎದುರು ಅಪಾಯಕ್ಕೆ ಕಾದಿದೆ ಮರದ ಒಣ ರಂಬೆ



ಮೈಸೂರು ಮುಡಾದ ಮುಖ್ಯದ್ವಾರದ ರಸ್ತೆ ಬದಿಯಲ್ಲಿರುವ ಮರದ ರಂಬೆ ಒಣಗಿ ಬೀಳುವ ಹಂತದಲ್ಲಿರುವುದು.

ಮೈಸೂರು, ಫೆ28(ಪಿಎಂ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಮುಖ್ಯದ್ವಾರದ ರಸ್ತೆಬದಿಯಲ್ಲಿರುವ ಮರದ ರಂಬೆಯೊಂದು ಒಣಗಿದ್ದು, ಬೀಳುವ ಸ್ಥಿತಿಯಲ್ಲಿದೆ. ಜೋರಾದ ಗಾಳಿ ಬೀಸಿದಲ್ಲಿ ರಂಬೆ ಮುರಿದು ಬಿದ್ದು ಅಪಾಯ ತಂದೊಡ್ಡುವ ಸನ್ನಿವೇಶ ನಿರ್ಮಾಣವಾಗಲಿದೆ.

ಯಾವಾಗ ಅಪಾಯ ತಂದೊಡ್ಡುತ್ತದೆ ಎಂದು ಹೇಳಲಾಗದ ಪರಿಸ್ಥಿತಿ ಇದೆ. ಇತ್ತೀಚೆಗಷ್ಟೇ ಮೈಸೂರಿನ ಬೋಗಾದಿ ರಸ್ತೆಯ ಕುಕ್ಕರಹಳ್ಳಿ ಕೆರೆ ಬಳಿ ಮರದ ಒಣ ರಂಬೆ ಬಿದ್ದು ಹಿರಿಯ ನಾಗರಿಕರೊಬ್ಬರು ಪ್ರಾಣವನ್ನೇ ಕಳೆದುಕೊಳ್ಳಬೇಕಾಯಿತು. ಹಾಗಾಗಿ ಇದನ್ನು ಗಂಭೀರವಾಗಿ ಪರಿಗಣಿಸಿ ತುರ್ತಾಗಿ ಈ ಒಣ ರಂಬೆ ತೆರವಿಗೆ ಮೈಸೂರು ಮಹಾ ನಗರ ಪಾಲಿಕೆ ಕ್ರಮ ವಹಿಸಬೇಕೆಂಬ ಒತ್ತಾಯ ನಾಗರಿಕರಿಂದ ಕೇಳಿ ಬಂದಿದೆ.

ಮುಡಾ ಕಚೇರಿಗೆ ಪ್ರತಿದಿನ ನೂರಾರು ಮಂದಿ ಭೇಟಿ ನೀಡಲಿದ್ದು, ಈ ಸಂದರ್ಭದಲ್ಲಿ ಹಲವರು ಸ್ವಲ್ಪ ಸಮಯದ ವಿಶ್ರಾಂತಿಗಾಗಿ ಮುಖ್ಯದ್ವಾರದ ಎದುರಿನಲ್ಲಿ ಇರುವ ಮರಗಳಿಗೆ ನಿರ್ಮಿಸಿರುವ ಸಿಮೆಂಟ್ ಕಟ್ಟೆಯಲ್ಲಿ ಆಸಿನರಾಗುವುದು ಸಾಮಾನ್ಯ. ಅಂತೆಯೇ ಸದರಿ ಒಣ ರಂಬೆ ಹೊಂದಿರುವ ಮರದ ಕಟ್ಟೆಯಲ್ಲೂ ಕೂರುತ್ತಾರೆ. ಹಾಗಾಗಿ ಶೀಘ್ರವೇ ಪಾಲಿಕೆ ಈ ಒಣ ರಂಬೆ ತೆರವಿಗೆ ಮುಂದಾಗಬೇಕು ಎಂದು ನಾಗರಿಕರು ಒತ್ತಾಯಿಸಿದ್ದಾರೆ.



ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಬೆಂಗಳೂರಿನ ಧವಳಗಿರಿ ನಿವಾಸದಲ್ಲಿ ಮೈಸೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಕೇಬಲ್ ಮಹೇಶ್ ಮತ್ತು ಮಹೇಶ್ ಮಡವಾಡಿ ಅವರು ಯಡಿಯೂರಪ್ಪನವರನ್ನು ಹುಟ್ಟುಹಬ್ಬದ ಅಂಗವಾಗಿ ಅಭಿನಂದಿಸಿದರು.

ಮೈಸೂರಲ್ಲಿ ಶ್ರೀ ಸಂತ ಸೇವಾಲಾಲ್ ಜಯಂತಿ

ಪ್ರಕೃತಿಯನ್ನೇ ದೇವರೆಂದು ಪೂಜಿಸಿದವರು ಸೇವಾಲಾಲರು



ಮೈಸೂರಿನ ಕಲಾಮಂದಿರದಲ್ಲಿ ಶ್ರೀ ಸಂತ ಸೇವಾಲಾಲ್ ಜಯಂತಿ ಆಚರಿಸಲಾಯಿತು. ತಿ.ನರಸೀಪುರ ಪಿಂಜರಾಪೋಲ್ ಗೋ ಶಾಲೆಯ ಶ್ರೀ 1008 ಚೇತನಗಿರಿ ಸ್ವಾಮೀಜಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗೀಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮೀಜಿ, ರಂಗಭೂಮಿ ಕಲಾವಿದ ಡಾ.ಎ.ಆರ್.ಗೋವಿಂದಸ್ವಾಮಿ ಮತ್ತಿತರರಿದ್ದರು.

ಮೈಸೂರು, ಫೆ28(ಎಂಕೆ)– ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬುಧವಾರ ಶ್ರೀ ಸಂತ ಸೇವಾಲಾಲ್ ಜಯಂತಿ ಆಚರಿಸಲಾಯಿತು.

ವೇದಿಕೆಯಲ್ಲಿ ದೀಪ ಬೆಳಗಿಸಿದ ತಿ.ನರಸೀಪುರ ಪಿಂಜರಾಪೋಲ್ ಗೋ ಶಾಲೆಯ ಶ್ರೀ 1008 ಚೇತನ ಗಿರಿ ಸ್ವಾಮೀಜಿ, ಶ್ರೀ ಸಂತ ಸೇವಾಲಾಲ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು. ಜಯಂತಿಯ ಮುಖ್ಯ ಭಾಷಣ ಮಾಡಿದ ರಂಗಭೂಮಿ ಕಲಾವಿದ ಡಾ.ಎ.ಆರ್.ಗೋವಿಂದಸ್ವಾಮಿ, ಕಾಲಜ್ಞಾನಿ ಶ್ರೀ ಸಂತ ಸೇವಾಲಾಲ್ ಅವರು, ಬಂಜಾರ ಸಮುದಾಯದ ಗುರುವಾಗಿ, ವಿವಿಧತೆಯಲ್ಲಿ ಏಕತೆ ಸಾರಿದ ಸಾಂಸ್ಕೃತಿಕ ನಾಯಕರೂ ಆಗಿದ್ದಾರೆ. ಗುರು ಮತ್ತು ಸಮುದಾಯವನ್ನೇ ದೇವಾಲಯವೆಂದು ಕರೆದ ಸೇವಾಲಾಲ್ ಅವರು, ಪ್ರಕೃತಿಯನ್ನೇ ದೇವರೆಂದು ಪೂಜಿಸಿದವರು. ಅವರ ಬಗ್ಗೆ ಇನ್ನಷ್ಟು ಅಧ್ಯಯನಗಳಾಗಬೇಕಾಗಿದ್ದು, ಸರ್ಕಾರ ಸಹಕಾರ ನೀಡಬೇಕು ಎಂದು ಒತ್ತಾಯಿಸಿದರು.

ಬಂಜಾರ ಸಮುದಾಯ ಮೂಲ ಕಸುಬು ಗೋ ಪಾಲನೆಯಾಗಿದೆ. ಆದರೆ, ಇಂದು ಯಾರ್ಯಾರೋ ನಾವು ಗೋ ಪಾಲಕರೆಂದು ಹೇಳಿಕೊಂಡು ಗೋವುಗಳನ್ನು ಕೂಡಿ ಹಾಕುತ್ತಿದ್ದಾರೆ. ಕೃಷ್ಣನಿಗೆ ಕೊಳಲು ಕೊಟ್ಟಿದ್ದೆ ಬಂಜಾರರು ಎಂಬ ಪ್ರತೀತಿ ಇದೆ. ಹಸುಗಳನ್ನು ಕೊಲ್ಲುವುದು ನಮ್ಮ ಸಮುದಾಯ ಒಪ್ಪುವುದಿಲ್ಲ. ಗೋವುಗಳನ್ನು ಸಾಕುವುದೇ ನಮ್ಮ ಕಾಯಕ ಎಂದರು.

ಪರಿಶ್ರಮಕ್ಕೆ ಬೆಲೆ ಇಲ್ಲ: ದೇಶದ ಬಂಜಾರ ಸಮುದಾಯದ ಕಲೆಯನ್ನು, ಕಸೂತಿಯನ್ನು ವಿಶ್ವಕ್ಕೆ ತೋರಿಸುತ್ತಿದೆ. ಆದರೆ, ಅದರ ಹಿಂದಿರುವ ಮಹಿಳೆಯರ ಪರಿಶ್ರಮಕ್ಕೆ, ಬಡತನವನ್ನು ತೋರಿಸುತ್ತಿಲ್ಲ. ವಸ್ತ್ರಾಲಂಕಾರ, ವಿನ್ಯಾಸ, ಕೈಮಗ್ಗ, ವ್ಯಾಪಾರ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಮೊದಲಿಗರಾಗಿರುವ ಬಂಜಾರ ಸಮುದಾಯವನ್ನು ಮೊದಲಿನಿಂದಲೂ ಕಡೆಗಣಿಸಲಾಗಿದೆ.

ಬಂಜಾರ ಸಮುದಾಯದಲ್ಲಿ ಒಗ್ಗಟ್ಟು ಮೂಡಿಸಿ ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದಲ್ಲಿ ಉನ್ನತ ಸ್ಥಾನದಲ್ಲಿರಬೇಕು ಎಂಬ ಕನಸನ್ನು ಕಂಡವರು ಸೇವಾಲಾಲ್ ಅವರು. ಆದರೆ, ಇಂದು ನಮ್ಮ ಸಮುದಾಯದಲ್ಲಿ ಒಗ್ಗಟ್ಟಿನ ಪರಸ್ಪರ ನಂಬಿಕೆ, ಪ್ರೀತಿ, ಸಹಬಾಳ್ವೆಯ ಕೊರತೆಯಿಂದಾಗಿ ಸೌಲಭ್ಯಗಳಿಂದ ವಂಚಿತರಾಗಿದ್ದೇವೆ. ಹಾಗಾಗಿ ಮುಂದಿನ ದಿನಗಳಲ್ಲಿ ಎಲ್ಲರೂ ಒಗ್ಗಟ್ಟಾಗಿ ಸಂತ ಸೇವಾಲಾಲರ ಆದರ್ಶ ಹಾಗೂ ಅವರ ನಡೆಯನ್ನು ಅನುಸರಿಸಿ ಅವರು ಕಂಡ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಹೋರಾಡೋಣ ಎಂದರು.

ಅದ್ಧೂರಿ ಮೆರವಣಿಗೆ: ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ಡಿ.ದೇವರಾಜು ಅರಸು ರಸ್ತೆ ಮಾರ್ಗವಾಗಿ ಕಲಾಮಂದಿರದವರೆಗೆ ಕಲಾತಂಡಗಳೊಂದಿಗೆ ಅದ್ಧೂರಿ ಮೆರವಣಿಗೆ ನಡೆಸಲಾಯಿತು. ಬಂಜಾರ ಸಮುದಾಯದ ನೂರು ಮಂದಿ ಮೆರವಣಿಗೆಯಲ್ಲಿ ಭಾಗಿಯಾಗಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗೀಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಎಂ.ಡಿ. ಸುದರ್ಶನ್, ಬಂಜಾರ ಸೇವಾ ಸಂಘದ ಅಧ್ಯಕ್ಷ ಸುಂದರ್, ಉಪಾಧ್ಯಕ್ಷ ಓಂಕಾರ್ ನಾಯಕ್, ಕಾರ್ಯದರ್ಶಿ ಚಂದ್ರನಾಯಕ್, ಜಂಟಿ ಕಾರ್ಯದರ್ಶಿ ಕೃಷ್ಣ ನಾಯಕ್, ಖಜಾಂಚಿ ಮುನಿಸ್ವಾಮಿ, ಸಂತ ಸೇವಾಲಾಲ್ ಸಮುದಾಯದ ಮುಖಂಡರು ಹಾಗೂ ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳ ಮುಖಂಡರು ಉಪಸ್ಥಿತರಿದ್ದರು.

ಬಹುರೂಪಿ ನಂತರ ಬಂಜಾರ ಸಮುದಾಯದ ಸಂಸ್ಕೃತಿ ಅನಾವರಣ...!

ಮೈಸೂರು ರಂಗಾಯಣದಲ್ಲಿ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಬಳಿಕ ಬಂಜಾರ ಸಮುದಾಯ ಸಂಸ್ಕೃತಿಯನ್ನು ಸಂಗೀತ ರಸಸ್ವಾದವನ್ನೊಳಗೊಂಡ ವಿಶೇಷ ರಂಗಪ್ರಯೋಗದ ಮೂಲಕ ಅನಾವರಣಗೊಳಿಸಲು ವೇದಿಕೆ ಸಿದ್ಧಪಡಿಸಲಾಗುತ್ತಿದೆ.

ರಂಗಾಯಣ ಮಾಜಿ ನಿರ್ದೇಶಕ ಹಾಗೂ ಹಿರಿಯ ರಂಗನಿರ್ದೇಶಕ ಸಿ.ಬಸವಲಿಂಗಯ್ಯ ಅವರ ನಿರ್ದೇಶನದಲ್ಲಿ 'ಗೋರ್‌ಮಾಟಿ' ಶೀರ್ಷಿಕೆಯಡಿ ಬಂಜಾರ ಸಮುದಾಯದ ಏಳು–ಬೀಳುಗಳನ್ನು ಪರಿಚಯಿಸುವ ವಿಶಿಷ್ಟ ಪ್ರಯೋಗವನ್ನು ಮಾಡಲಾಗುತ್ತಿದೆ. ಬಂಜಾರ ಸಮುದಾಯದ ಮೂಲ ಪುರುಷರೆನ್ನಲಾದ ಸಂತ ಸೇವಾಲಾಲ್ ಅವರನ್ನೊಳಗೊಂಡು ರಂಗಕರ್ಮಿ ಬಿ.ಟಿ.ಲಲಿತಾನಾಯಕ್ ಸೇರಿದಂತೆ ಸಮುದಾಯದ ಪ್ರಮುಖ ನಾಯಕರ ಕೊಡುಗೆ, ಸಮುದಾಯ ಮೂಲ ಕಸುಬಾದ ಕಸೂತಿ, ಗೋ ಪಾಲನೆ, ಭಾಷೆ, ಸಮುದಾಯದ ದೈನಂದಿನ ಜೀವನ ಶೈಲಿ ಸೇರಿದಂತೆ ಬಂಜಾರ ಸಮುದಾಯದ ಕಲೆ–ಸಂಸ್ಕೃತಿಯನ್ನು ವ್ಯವಸ್ಥಿತವಾಗಿ ರಂಗಾಸಕ್ತರ ಮುಂದಿಡುವ ಪ್ರಯತ್ನ ಮಾಡಲಾಗುತ್ತಿದೆ.

ಮಾ.2ಕ್ಕೆ ಟ್ರಯಲ್ ಶೋ: ರಂಗಾಯಣದ ಭೂಮಿಗೀತದಲ್ಲಿ 'ಗೋರ್‌ಮಾಟಿ' ನಾಟಕ ಟ್ರಯಲ್ ಶೋ ನಡೆಯಲಿದ್ದು, ನಾಟಕದ ನಿರ್ದೇಶಕರು ಸೇರಿದಂತೆ ಬಂಜಾರ ಸಮುದಾಯದ ಪ್ರಮುಖರು ಭಾಗವಹಿಸಲಿದ್ದಾರೆ. ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಬಳಿಕ ರಂಗಾಸಕ್ತರು ಬಂಜಾರ ಸಮುದಾಯ ಕಲೆ–ವೈಶಿಷ್ಟ್ಯತೆಯ ಬಗ್ಗೆ ತಿಳಿದುಕೊಳ್ಳಬಹುದಾಗಿದೆ

ಮೈಸೂರು ಮೃಗಾಲಯ ಸ್ಥಳಾಂತರಕ್ಕೆ ಎಂಎಲ್‌ಸಿ ಸಿ.ಎನ್.ಮಂಜೇಗೌಡ ಒತ್ತಾಯ

ಬೆಂಗಳೂರು, ಫೆ.28–ಮೈಸೂರಿನ ಹೃದಯ ಭಾಗದಲ್ಲಿರುವ ಚಾಮರಾಜೇಂದ್ರ ಮೃಗಾಲಯವನ್ನು ಹೊರ ವಲಯಕ್ಕೆ ಸ್ಥಳಾಂತರಿಸುವ ಮೂಲಕ ಪ್ರವಾಸೋದ್ಯಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು ಎಂದು ವಿಧಾನ ಪರಿಷತ್ ಜೆಡಿಎಸ್ ಸದಸ್ಯ ಸಿ.ಎನ್. ಮಂಜೇಗೌಡ ಸರ್ಕಾರವನ್ನು ಒತ್ತಾಯಿಸಿದರು.



ವಿಧಾನ ಪರಿಷತ್‌ನಲ್ಲಿ ಮೈಸೂರು ಮತ್ತು ಚಾಮರಾಜನಗರ ಅಭಿವೃದ್ಧಿ ಬಗ್ಗೆ ಮಾತನಾಡಿದ ಅವರು, ಹಾಲಿ ಮೃಗಾಲಯವು ನಗರದ ಮಧ್ಯದಲ್ಲಿದ್ದು, ಮೃಗಾಲಯದ ಸುತ್ತಮುತ್ತಲಿನ ರಸ್ತೆಗಳಲ್ಲಿ ವಾಹನ ಸಂಚಾರ ಹೆಚ್ಚಾಗಿರುವುದರಿಂದ ಅದರ ಶಬ್ದದಿಂದ ಪ್ರಾಣಿಗಳು ಪಕ್ಷಿಗಳಿಗೆ ಹಾಗೂ ಪ್ರವಾಸಿಗರಿಗೂ ತೊಂದರೆಯಾಗುತ್ತಿದ್ದು, ಈ ಮೃಗಾಲಯವನ್ನು ಹೊರವಲಯದ ವಿಶಾಲವಾದ ಸ್ಥಳಕ್ಕೆ ಸ್ಥಳಾಂತರಿಸಿದರೆ ಪ್ರಾಣಿ–ಪಕ್ಷಿಗಳಿಗೂ ತೊಂದರೆ ತಪ್ಪುತ್ತದೆ ಪ್ರವಾಸಿಗರಿಗೂ ಅನುಕೂಲ ವಾಗುತ್ತದೆ ಎಂದರು.

ಮೈಸೂರಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಇಲ್ಲದೇ ಇರುವುದರಿಂದ ಆರ್ಥಿಕವಾಗಿ ಹಿಂದುಳಿದಿರುವ ಬಡ ಮಕ್ಕಳಿಗೆ ಅನಾನುಕೂಲವಾಗಿದೆ. ಹೀಗಾಗಿ ಮೈಸೂರಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಬೇಕು. ಮೈಸೂರು ವಿಮಾನ ನಿಲ್ದಾಣದ ಬಳಿ ಇರುವ ಮಂಡಕಳ್ಳಿ ಕೆರೆಗೆ ದೇಶ–ವಿದೇಶಗಳಿಂದ ಪಕ್ಷಿಗಳು ವಲಸೆ ಬರುತ್ತಿವೆ. ಆದ್ದರಿಂದ ಈ ಕೆರೆಯನ್ನು ಅಭಿವೃದ್ಧಿಪಡಿ ಸಿದರೆ ಅದು ಅತ್ಯುತ್ತಮ ಪ್ರವಾಸಿ ತಾಣವಾಗುವುದರಲ್ಲಿ ಸಂಶಯವಿಲ್ಲ ಎಂದರು.

ಚಾಮರಾಜನಗರ ಜಿಲ್ಲೆಯಲ್ಲಿ ಹೆಚ್ಚಿನ ಉದ್ಯೋಗ ಅವಕಾಶಗಳು ಇಲ್ಲದ ಕಾರಣ ಅಲ್ಲಿನ ಜನರು ಉದ್ಯೋಗಕ್ಕಾಗಿ ಬೆಂಗಳೂರು ಸೇರಿದಂತೆ ವಿವಿಧ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಚಾಮರಾಜನಗರದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ ಉದ್ಯೋಗ ಸೃಷ್ಟಿಸುವ ಮೂಲಕ ಅಲ್ಲಿನ ಜನರ ವಲಸೆಯನ್ನು ತಡೆಯಬೇಕು ಎಂದು ಹೇಳಿದರಲ್ಲದೆ, ಗ್ರಾಮಾಂತರ ಪ್ರದೇಶಕ್ಕೆ ಬಸ್ ಸೌಕರ್ಯ ಸರಿಯಾಗಿ ಇಲ್ಲದೇ ಇರುವುದರಿಂದ ಶಾಲಾ ಮಕ್ಕಳು ತೀವ್ರ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ವಿದ್ಯುತ್ ಸರಬರಾಜು ಸಮರ್ಪಕವಾಗಿ ಇಲ್ಲದ ಕಾರಣ ರೈತರು ತಮ್ಮ ಬೆಳೆಗಳಿಗೆ ನೀರು ಹರಿಸಲು ತೊಂದರೆಯಾಗುತ್ತಿದ್ದು, ಬೆಳೆಗಳು ಕೈತಪ್ಪುವ ಭೀತಿ ಎದುರಾಗಿದೆ. ಹೀಗಾಗಿ ರೈತರು ಮತ್ತು ಶಾಲಾ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕು. ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ನೀಗಿಸಬೇಕು. ಸರ್ಕಾರಿ ಅಧಿಕಾರಿಗಳು ಕಿರುಕುಳ ಕ್ಕೊಳಗಾಗಿ ಕೆಲವರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಅವರಿಗೆ ಆಗುತ್ತಿರುವ ಕಿರುಕುಳ ತಪ್ಪಿಸಬೇಕು ಹಾಗೂ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು. 7ನೇ ವೇತನ ಆಯೋಗ ಅನುಷ್ಠಾನಗೊಳಿಸುವ ಬಗ್ಗೆ ಕೇವಲ ಭರವಸೆಗಳನ್ನು ಕೊಡುವ ಬದಲು ಕೂಡಲೇ ಅನುಷ್ಠಾನಗೊಳಿಸಬೇಕು ಎಂದು ಒತ್ತಾಯಿಸಿದರು.

ನಾಳೆಯಿಂದ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭ

ಯಾವುದೇ ಲೋಪವಾಗದಂತೆ ಎಚ್ಚರ ವಹಿಸಲು ಎಡಿಸಿ ಸೂಚನೆ

ಮೈಸೂರು, ಫೆ.28(ಎಂಕೆ)– ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ಲೋಪ ದೋಷಗಳವಾಗದಂತೆ ಪರೀಕ್ಷೆ ನಡೆಸಬೇಕು. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಮುಂಜಾಗ್ರತೆ ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬುಧವಾರ ಪದವಿ ಪೂರ್ವ ಶಿಕ್ಷಣ ಇಲಾಖೆ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿದ ಅವರು, ಮಾ.1 ರಿಂದ ಮಾ.22ರವರೆಗೆ ನಡೆಯುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಜಿಲ್ಲೆಯ 49 ಕೇಂದ್ರಗಳಲ್ಲಿ ಜರುಗಲಿದ್ದು, ಯಾವುದೇ ಲೋಪದೋಷವಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಮೈಸೂರು ನಗರದಲ್ಲಿನ 26 ಪರೀಕ್ಷಾ ಕೇಂದ್ರಗಳಲ್ಲಿ ಹಾಗೂ ಗ್ರಾಮಾಂತರ ವ್ಯಾಪ್ತಿಯಲ್ಲಿ 23 ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 31,628 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದು, ಎಲ್ಲಾ ಪರೀಕ್ಷಾ ಕೇಂದ್ರಗಳ ಮೇಲೆ ತೀವ್ರ ನಿಗಾ ವಹಿಸುವಂತೆ ಸೂಚಿಸಿದರು.



ಜಿಲ್ಲಾಧಿಕಾರಿ ಕಚೇರಿಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಸಂಬಂಧ ಪದವಿ ಪೂರ್ವ ಶಿಕ್ಷಣ ಇಲಾಖೆ ಅಧಿಕಾರಿಗಳೊಂದಿಗೆ ಎಡಿಸಿ ಪಿ.ಶಿವರಾಜು ಪೂರ್ವಭಾವಿ ಸಭೆ ನಡೆಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಸೂಕ್ತ ಆಸನ ಹಾಗೂ ಪರೀಕ್ಷೆ ಬರೆಯಲು ಡೆಸ್ಕ್ ವ್ಯವಸ್ಥೆ, ಕುಡಿಯುವ ನೀರು, ಶೌಚಾಲಯದ ಸೇರಿದಂತೆ ಮೂಲ ಸೌಕರ್ಯದ ವ್ಯವಸ್ಥೆ ಅಚ್ಚುಕಟ್ಟಾಗಿರಬೇಕು. ಕೊಠಡಿಗಳಲ್ಲಿ ಗಡಿಯಾರ, ಸಿ.ಸಿ.ಟಿ.ವಿ ಕಡ್ಡಾಯ ವ್ಯವಸ್ಥೆಯೊಂದಿಗೆ ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಸೂಕ್ತ ಪೊಲೀಸ್ ಭದ್ರತೆ ಇರುವಂತೆ ಗಮನಿಸಬೇಕು. ಹಾಗೆಯೇ ಪರೀಕ್ಷೆ ನಡೆಯುವ ದಿನಗಳಂದು ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀ. ಸುತ್ತಳತೆಯಲ್ಲಿ 144 ಸೆಕ್ಷನ್ ಜಾರಿ ಇರಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಮುಚ್ಚಿಸಬೇಕು ಎಂದರು.

ಪರೀಕ್ಷಾ ಕೇಂದ್ರಕ್ಕೆ ಮುಖ್ಯ ಅಧೀಕ್ಷಕರುಗಳನ್ನು ನೇಮಕ ಮಾಡಲಾಗಿದೆ. ಮುಖ್ಯ ಅಧೀಕ್ಷಕರನ್ನು ಹೊರತುಪಡಿಸಿ ಕೊಠಡಿ ಮೇಲ್ವಿಚಾರಕರು, ಇತರೆ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಮೊಬೈಲ್ ಇತ್ಯಾದಿ ಎಲೆಕ್ಟ್ರಾನಿಕ್ ಸಾಧನಗಳನ್ನು ಬಳಸುವುದನ್ನು ಕಡ್ಡಾಯವಾಗಿ ನಿಷೇಧಿಸಬೇಕು. ಜಿಲ್ಲಾ ಖಜಾನೆಯಿಂದ ಸಂಬಂಧಿಸಿದ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆ ವಿತರಿಸಲು ಪ್ರಶ್ನೆ ಪತ್ರಿಕೆ ಮಾರ್ಗಾಧಿಕಾರಿ ತಂಡಗಳಿಗೆ ಅಗತ್ಯವಿರುವ ವಾಹನಗಳ ಸೌಕರ್ಯ ಒದಗಿಸಿ. ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಹಾಜರಾತಿಯನ್ನು ಆನ್‌ಲೈನ್‌ನಲ್ಲಿ ಅಪಲೋಡ್ ಮಾಡುವುದ ರಿಂದ ವಿದ್ಯುತ್ ಸಂಪರ್ಕ ಸರಬರಾಜಿನಲ್ಲಿ ವ್ಯತ್ಯಯವಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಮಾರ್ಗದರ್ಶನ ನೀಡಿದರು. ಸಭೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಎಂ.ಮರಿಸ್ವಾಮಿ ವಿವಿಧ ಕಾಲೇಜಿನ ಪ್ರಾಂಶುಪಾಲರು ಉಪಸ್ಥಿತರಿದ್ದರು.

ಮೈಸೂರಿಗೆ ಆಗಮಿಸಿದ್ದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು



ಮೈಸೂರಿನಲ್ಲಿ ವಿವಾಹ ಆರತಕ್ಷತೆಯೊಂದರಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಪತ್ನಿ ಶ್ರೀಮತಿ ಚೆನ್ನಮ್ಮ ಅವರೊಂದಿಗೆ ಪಾಲ್ಗೊಂಡರು.

ಮೈಸೂರು,ಫೆ.28(ಪಿಎಂ)– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ತಮ್ಮ ಪತ್ನಿ ಶ್ರೀಮತಿ ಚೆನ್ನಮ್ಮ ಅವರೊಂದಿಗೆ ಖಾಸಗಿ ಕಾರ್ಯಕ್ರಮ ನಿಮಿತ್ತ ಬುಧವಾರ ಮೈಸೂರಿಗೆ ಆಗಮಿಸಿದ್ದರು.

ಬೆಂಗಳೂರಿನಿಂದ ರಸ್ತೆ ಮೂಲಕ ಬುಧವಾರ ರಾತ್ರಿ ಸುಮಾರು 7.45ರ ವೇಳೆಗೆ ಮೈಸೂರಿಗೆ ಆಗಮಿಸಿದ್ದ ಮಾಜಿ ಪ್ರಧಾನಿಗಳು, ಮೈಸೂರಿನ ವಿಜಯನಗರದ 2ನೇ ಹಂತದಲ್ಲಿರುವ ಸಂಭ್ರಮ ಕನ್ವೆಂಷನ್ ಹಾಲ್‌ನಲ್ಲಿ ನಡೆದ ಮದುವೆ ಆರತಕ್ಷತೆ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಬಳಿಕ ರಸ್ತೆ ಮೂಲಕ ಬೆಂಗಳೂರಿಗೆ ಮರಳಿದರು.

ಗ್ರಾಪಂ ವ್ಯಾಪ್ತಿ ಕುಡಿಯುವ ನೀರಿಗೆ ಸಮಸ್ಯೆ ಆಗದಂತೆ ಎಚ್ಚರ ವಹಿಸಲು ಮೈಸೂರು ಜಿಪಂ ಸಿಇಓ ಸೂಚನೆ

ಮೈಸೂರು, ಫೆ.28(ಎಂಕೆ)– ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ ಸೂಚಿಸಿದರು.

ತಿ.ನರಸೀಪುರ ತಾಲೂಕಿನ ಸೋಮನಾಥಪುರ ಗ್ರಾಮ ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಸದಸ್ಯರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಬಾಕಿ ಇರುವ ಜಲ ಜೀವನ್ ಮಿಷನ್ ಕಾಮಗಾರಿಗಳನ್ನು ತ್ವರಿತವಾಗಿ ಮುಂದಿನ ಒಂದು ತಿಂಗಳೊಳಗೆ ಪೂರ್ಣಗೊಳಿಸಲು ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಇಂಜಿನಿಯರ್‌ಗೆ ತಿಳಿಸಿದರು. ಹಾಗೆಯೇ ಮಾ.3 ರಂದು ನಡೆಯುವ ಪಲ್ಸ್ ಪೋಲಿಯೋ ಕಾರ್ಯಕ್ರಮ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವೈದ್ಯಾಧಿಕಾರಿಗಳಿಗೆ ಸೂಚಿಸಿದರು.



ತಿ.ನರಸೀಪುರ ತಾಲೂಕಿನ ಸೋಮನಾಥಪುರ ಗ್ರಾಪಂ ಸಭಾಂಗಣದಲ್ಲಿ ಗ್ರಾಪಂ ಅಧ್ಯಕ್ಷರು, ಸದಸ್ಯರ ಹಾಗೂ ಸಿಬ್ಬಂದಿಯೊಂದಿಗೆ ಜಿಪಂ ಸಿಇಓ ಕೆ.ಎಂ.ಗಾಯತ್ರಿ ಸಭೆ ನಡೆಸಿದರು.

ನರೇಗಾ ಯೋಜನೆಯಡಿ ಸಮುದಾಯ ಕಾಮಗಾರಿಗಳಿಗೆ ಹೆಚ್ಚಿನ ಒತ್ತು, ಹೆಚ್ಚಿನ ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಡುವುದು, ಕಾಮಗಾರಿಗಳಲ್ಲಿ ಮಹಿಳೆಯರು ಹೆಚ್ಚಾಗಿ ಭಾಗವಹಿಸುವಂತೆ ಅರಿವು ಮೂಡಿಸುವುದು, ಬಾಕಿ ತೆರಿಗೆ ಸಂಗ್ರಹ, ಮಹಿಳೆಯರ ಸ್ವಂಯಂ ಉದ್ಯೋಗಕ್ಕೆ ಅವಕಾಶ, ಗ್ರಂಥಾಲಯಗಳ ನಿರ್ವಹಣೆ, ಬೇಸಿಗೆಯಾಗಿರುವುದರಿಂದ ಜಾನುವಾರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವಂತೆ ತಾಕೀತು ಮಾಡಿದರು. ತಾಪಂ ಇಓ ಸಿ.ಕೃಷ್ಣ, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಎಇಇ ಕೈಲಾಶ್ ಮೂರ್ತಿ, ಎಇ ಮಂಜುನಾಥ್, ಪಿಆರ್ ಇಡಿ ಎಇಇ ಚರಿತ, ಪಿಡಿಓ ಶಶಿಕುಮಾರ್, ಕಾರ್ಯದರ್ಶಿ ಸುಧೀರ್, ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು ಸೇರಿದಂತೆ ಇತರರು ಹಾಜರಿದ್ದರು.

ನಿವೃತ್ತ ಐಎಎಸ್ ಅಧಿಕಾರಿ, ನಟ ಕೆ.ಶಿವರಾಮ್‌ಗೆ ಹೃದಯಾಘಾತ

ಆಸ್ಪತ್ರೆಗೆ ದಾಖಲು

ಬೆಂಗಳೂರು: ಕನ್ನಡದಲ್ಲಿ ಪ್ರಪ್ರಥಮ ಬಾರಿಗೆ ಐಎಎಸ್ ಬರೆದು ಭಾರತೀಯ ಆಡಳಿತಾ ಸೇವೆಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದ ಹಾಗೂ 'ಬಾ ನಲ್ಲೆ ಮಧು ಚಂದ್ರಕೆ' ಸೇರಿದಂತೆ ಹಲವು ಚಿತ್ರಗಳ ಮೂಲಕ ಕನ್ನಡ ಸಿನಿ ರಸಿಕರಿಗೆ ಪರಿಚಿತರಾಗಿದ್ದ ಕೆ. ಶಿವರಾಮ್ ಅವರಿಗೆ ಹೃದಯಾಘಾತವಾಗಿದೆ ಸದ್ಯ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ನಗರದ ಎಚ್‌ಸಿಜಿ ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ವರದಿಯಾಗಿದೆ.



ರಾಮನಗರ ಜಿಲ್ಲೆಯ ಬಿಡದಿ ಬಳಿಯ ಹಳ್ಳಿಯೊಂದರಲ್ಲಿ ಬಡ ಕುಟುಂಬದಲ್ಲಿ ಏಪ್ರಿಲ್ 6, 1953 ರಂದು ಜನಸಿದ ಕೆ. ಶಿವರಾಮು 1985ರಲ್ಲಿ ಕೆಎಎಸ್ ಪರೀಕ್ಷೆ ಬರೆದು ಉತ್ತೀರ್ಣರಾದರು. ಬಳಿಕ ಕನ್ನಡ ಭಾಷೆಯಲ್ಲಿ ಐಎಎಸ್ ಪರೀಕ್ಷೆ ಬರೆದು, ತೇರ್ಗಡೆಯಾದ ಭಾರತದ ಮೊದಲ ಕನ್ನಡಿಗ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

1993 ರಲ್ಲಿ ತೆರೆಗೆ ಬಂದ ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಬಾ ನಲ್ಲೆ ಮಧು ಚಂದ್ರಕೆ' ಸಿನಿಮಾ ಮೂಲಕ ಬಣ್ಣದ ಲೋಕ ಪ್ರವೇಶಿಸಿದ್ದ ಕೆ. ಶಿವರಾಮ್, 'ವಸಂತ ಕಾವ್ಯ', 'ಸಾಂಗ್ಲಿಯಾನಾ ಪಾರ್ಟ್ 3', 'ಪ್ರತಿಭಟನೆ', 'ಯಾರಿಗೆ ಬೇಡ ದುಡ್ಡು', 'ಗೇಮ್ ಫಾರ್ ಲವ್', 'ಟೈಗರ್' ಮುಂತಾದ ಕನ್ನಡ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

ರಾಜಕೀಯಕ್ಕೂ ಧುಮುಕ್ಕಿದ್ದ ಶಿವರಾಮ್: 2013ರಲ್ಲಿ ಐಎಎಸ್‌ನಿಂದ ಸ್ವಯಂ ನಿವೃತ್ತಿ ಪಡೆದ ನಂತರ ಕಾಂಗ್ರೆಸ್ ಪಕ್ಷದ ಮೂಲಕ ರಾಜಕೀಯ ಜೀವನ ಆರಂಭಿಸಿದ ಶಿವರಾಮ್, 2014ರಲ್ಲಿ ವಿಜಯಪುರ ಲೋಕಸಭೆ ಕ್ಷೇತ್ರದಲ್ಲಿ ಚುನಾವಣೆಗೆ ಸ್ಪರ್ಧಿಸಿ ಸೋತರು. ನಂತರ ಅದೇ ವರ್ಷ ದಲಿತರಿಗೆ ಸಿ.ಎಂ ಪಟ್ಟ ಸಿಗಬೇಕೆಂದು ಪರಮೇಶ್ವರ್ ಬೆಂಬಲಿಸಿ ಕಾಂಗ್ರೆಸ್ ಸೇರಿದರು. ಆದರೆ ಕಾಂಗ್ರೆಸ್‌ನಲ್ಲಿ ಸೂಕ್ತ ಸ್ಥಾನಮಾನ ಸಿಗದೇ ಬಿಜೆಪಿ ಸೇರಿದರು. ಛಲವಾದಿ ಮಹಸಭಾ ಅಧ್ಯಕ್ಷರಾಗಿದ್ದರು.

ಮೈಸೂರಲ್ಲಿ ಭಿಕ್ಷುಕರ ಜೀವನೋಪಾಯಕ್ಕೆ ವ್ಯವಸ್ಥೆ ಅವಶ್ಯ

ಸ್ಮೈಲ್–75 ತರಬೇತಿ ಕಾರ್ಯಕ್ರಮದಲ್ಲಿ ಹಿರಿಯ ನ್ಯಾಯಾಧೀಶ ಬಿ.ಜಿ.ದಿನೇಶ್ ಸಲಹೆ

ಮೈಸೂರು, ಫೆ28(ಆರ್‌ಕೆ)– ಮೈಸೂರಿನಂತಹ ಸಾಂಸ್ಕೃತಿಕ ನಗರಿಯಲ್ಲಿ ಭಿಕ್ಷುಕರ ಗುರುತಿಸಿ, ಪುನರ್ವಸತಿ ಕಲ್ಪಿಸುವ ಮೂಲಕ ಅವರ ಜೀವನೋಪಾಯಕ್ಕೆ ಅವಕಾಶ ಮಾಡಿಕೊಡುವುದು ಅತ್ಯವಶ್ಯ ಎಂದು ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯರೂ ಆದ ನ್ಯಾಯಾಧೀಶರಾದ ಬಿ.ಜಿ.ದಿನೇಶ್ ಸಲಹೆ ನೀಡಿದರು.

ಮೈಸೂರು ಮಹಾನಗರ ಪಾಲಿಕೆಗಳೇ ಕೌನ್ಸಿಲ್ ಸಭಾಂಗಣದಲ್ಲಿ ಆಯೋಜಿಸಿದ್ದ ಸ್ಮೈಲ್–75 ಯೋಜನೆಯಡಿ ಗಣತಿದಾರರಿಗೆ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಾಂಸ್ಕೃತಿಕ, ಪಾರಂಪರಿಕ ಹಾಗೂ ಸ್ವಚ್ಛ ನಗರವೆಂದು ಪ್ರಸಿದ್ಧಿಯಾಗಿರುವ ಮೈಸೂರಿಗೆ ದೇಶ–ವಿದೇಶಗಳಿಂದ ಪ್ರವಾಸಿಗರು ಬರುತ್ತಿದ್ದಾರೆ. ಅದೇ ಕಾರಣಕ್ಕಾಗಿ ದೇಶದ 75 ನಗರಗಳ ಪೈಕಿ ಕರ್ನಾಟಕದಲ್ಲಿ ಮೈಸೂರು ಸ್ಮೈಲ್–75 ಯೋಜನೆಗೆ ಆಯ್ಕೆಯಾಗಿರುವುದು ಸಂತಸದ ವಿಷಯ ಎಂದರು.



ಮೈಸೂರು ಮಹಾನಗರ ಪಾಲಿಕೆ ಕಚೇರಿ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಸ್ಮೈಲ್–75 ಗಣತೀಕರಣದಾರರಿಗೆ ತರಬೇತಿ ಕಾರ್ಯಕ್ರಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಜಿ.ದಿನೇಶ್ ಅವರು ಉದ್ಘಾಟಿಸಿದರು. ಪಾಲಿಕೆ ಅಪರ ಆಯುಕ್ತರಾದ ಎಂ.ಎಸ್.ಕುಸುಮಾ ಕುಮಾರಿ, ಶುಭ, ರಂಗೇಗೌಡ, ಕೆ.ಸಿ.ಶ್ರೀಧರ್ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು ನಗರದಲ್ಲಿರುವ ಭಿಕ್ಷುಕರ ಗುರುತಿಸಿ, ಅವರಿಗೆ ಪುನರ್ವಸತಿ ಕಲ್ಪಿಸಿ, ಅವರ ಜೀವನೋಪಾಯಕ್ಕೆ ಅವಕಾಶ ನೀಡುವುದು ಯೋಜನೆ ಉದ್ದೇಶವಾಗಿದೆ. ಈ ಕಾರ್ಯಕ್ಕೆ ಬೆಂಗಳೂರು ಮೂಲದ ಕ್ಯಾಡ್ ಎಂ.ಎಸ್.ಟ್ರಸ್ಟ್ ಎಂಬ ಎನ್‌ಜಿಓಗೆ ಜವಾಬ್ದಾರಿ ನೀಡಲಾಗಿದೆ. ಸಮೀಕ್ಷೆ ಸಮಯದಲ್ಲಿ ಎದುರಾಗುವ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸಲು ಪಾಲಿಕೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಇನ್ನಿತರ ಸ್ಥಳೀಯ ಸಂಸ್ಥೆ ಅಧಿಕಾರಿಗಳು ನೆರವಾಗುವುದು ಅವಶ್ಯ ಎಂದು ನ್ಯಾಯಾಧೀಶರು ಸಲಹೆ ನೀಡಿದರು.

ಮೈಸೂರು ನಗರ ಪಾಲಿಕೆ ಅಪರ ಆಯುಕ್ತೆ ಎಂ.ಎಸ್.ಕುಸುಮಾ ಕುಮಾರಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿಯಾದ ಸ್ಮೈಲ್–75 ಯೋಜನೆ ನೋಡಲ್ ಅಧಿಕಾರಿ ಶುಭ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಕ್ಯಾಡ್ ಎಂ.ಎಸ್.ಟ್ರಸ್ಟ್ ಮುಖ್ಯಸ್ಥ ಕೆ.ಸಿ.ಶ್ರೀಧರ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮಾರ್ಚ್ 3ರಂದು ಬೆಳಗ್ಗೆ 8 ಗಂಟೆಗೆ ಪಾಲಿಕೆ ಪ್ರಧಾನ ಕಚೇರಿ ಆವರಣದಲ್ಲಿ ಸ್ಮೈಲ್ ಸಮೀಕ್ಷೆಗಾಗಿ ನಿಯೋಜಿತರಾಗಿರುವ ತಂಡಗಳ ಕಾರ್ಯಕ್ಕೆ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರು ಚಾಲನೆ ನೀಡುವರು. ಪೂಜಾ ಸ್ಥಳ, ಪ್ರೇಕ್ಷಣೀಯ ಸ್ಥಳ, ಟ್ರಾಫಿಕ್ ಸಿಗ್ನಲ್, ರೈಲು, ಬಸ್ ನಿಲ್ದಾಣ, ಮಾರುಕಟ್ಟೆ, ಸರ್ಕಲ್, ರಸ್ತೆಗಳಲ್ಲಿ ಸಮೀಕ್ಷೆ ನಡೆಸಿ ಭಿಕ್ಷುಕರ ಮಾಹಿತಿ ಕಲೆ ಹಾಕಲಾಗುವುದು.

ರೈತರಿಂದ ಕಮಿಷನ್ ವಸೂಲಿ ಕಂಡುಬಂದಲ್ಲಿ ಲೈಸೆನ್ಸ್ ಅಮಾನತು

ಮೈಸೂರು.ಫೆ.28– ತಿ.ನರಸೀಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣ ಹಾಗೂ ಬನ್ನೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರ ನಡೆಸುತ್ತಿರುವ ದಲ್ಲಾಳರು ಸಂಬಂಧಪಟ್ಟ ಖರೀದಿದಾರರುಗಳಿಂದ ಮಾತ್ರ ನಿಗದಿತ ಕಮಿಷನ್ ಪಡೆಯಲು ಅವಕಾಶವಿದ್ದು, ದಲ್ಲಾಳರು ರೈತರಿಂದ ಯಾವುದೇ ರೀತಿಯ ಕಮಿಷನ್ ವಸೂಲಿ ಮಾಡಲು ಅವಕಾಶವಿರುವುದಿಲ್ಲ.

ಈ ಕುರಿತು ರೈತರಿಂದ ಸಮಿತಿಗೆ ಕಮಿಷನ್ ಪಡೆದ ಬಗ್ಗೆ, ಬಿಳಿ ಚೀಟಿಗೆ ಸಂಬಂಧಿಸಿದಂತೆ ಇತರೆ ಯಾವುದೇ ದೂರುಗಳು ಬಂದರು ಅಂತಹವರ ಪರವಾನಗಿಯನ್ನು ರದ್ದುಪಡಿಸಲು ಕಾನೂನು ರೀತಿಯ ಕ್ರಮಕೈಗೊಳ್ಳಲಾಗುತ್ತದೆ ಎಂದು ತಿ. ನರಸೀಪುರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಗುರುವಾರ 29 ಫೆಬ್ರವರಿ 2024

ನಕ್ಕರೆ ಅದೇ ಸ್ವರ್ಗ

ಪತ್ನಿ : "ನೀವು ಇದ್ದೀರಾ. ಏನು ಪ್ರಯೋಜನ? ಪಕ್ಕದ ಮನೆಯವರನ್ನು ನೋಡಿ, ಅವರೇ ಹೆಂಡತಿಯನ್ನು ಹೂವುಗಳಲ್ಲಿ ಮುಳುಗಿಸ್ತಾರೆ!"

ಗಂಡ : "ನೀನೂ ಹೀಗೆ ಹೇಳ್ತೀಯಲ್ಲ. ಅವರದು ಹೂವಿನ ವ್ಯಾಪಾರ, ನಂದು ಕಾಳುಮೆಣಸಿನ ವ್ಯಾಪಾರ, ಅದರಲ್ಲೇ ಮುಳುಗಿಸಲಾ?'

ಮೈಸೂರು ಮಿತ್ರ

ಗುರುವಾರ, 29 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಶಾಂತಿಯಿಂದ ಸಂಪಾದಿಸಬಹುದಾದ ವಿಜಯ, ಸಂಗ್ರಾಮದಿಂದ ಸಾಧಿಸಬಹುದಾದುದಕ್ಕಿಂತ ಕಡಿಮೆಯದ್ದೇನಲ್ಲ. –ಜಾನ್ ಮಿಲ್ಟನ್

ವೇದ ಸುಳ್ಳಾದರೂ { ಹತ್ತು ಆಡಬಹುದು,
ಗಾದೆ ಸುಳ್ಳಾಗದು { ಒಂದು ಬರೆಯಲಾಗದು

ನಿಮ್ಮ ಪತ್ರಗಳು

■ ಧನ್ಯವಾದ ಧನ್ವಂತರಿ



ಮಾನ್ಯರೆ,

ಗೋಧೂಳಿ ಸಂಜೆಯಲಿ 'ಧನ್ಯವಾದ ಧನ್ವಂತರಿ' ಕಾರ್ಯಕ್ರಮ ಅಂದ್ರೇ ಜಾತಸ್ಥರು ಮುಂದಿನ ರಾಜಕೀಯ ಭವಿಷ್ಯ ನಿರ್ಧಾರ ಮಾಡೋ ಯಾವ್ರದೋ ಪಕ್ಷದ ಕಾರ್ಯಕ್ರಮ ಅನ್ಕೊಂಡು ಹೋಗಲೊ ಬೇಡವೋ ಅನ್ನಿದ್ರು ಡಾಕ್ಟರ್ ಮೇಲಿನ ಪ್ರೀತ್ಯಾಭಿಮಾನಕ್ಕೆ ತಲೆಬಾಗಿ ಹೋಗೋಣ ಅಂದೆನಿಸಿ ಕಲಾಮಂದಿರದ ಕಡೆ ಹೊರಟೆ ಮುಖ್ಯ ದ್ವಾರದಲ್ಲೇ ಸಾಕಷ್ಟು ವಾಹನ ದಟ್ಟಣೆ, ಹೊರಗಡೆ ರಸ್ತೆಯಲ್ಲೂ ಸಹ ಯಶಸ್ವಿ ಛತ್ರದ ಮುಂದೆ ಇರೋ ಹಾಗೇ ಕಾರೋ ಕಾರುಗಳು. ಸರಿ ಒಳಗೇನೂ ಅಂತ ಜನ ಇರೋಲ್ಲ ಆರಾಮವಾಗಿ ಸ್ವಲ್ಪ ಹೊತ್ತು ನೋಡಿ ಹೋಗೋಣ ಅನಿಸಿ ಒಳಗೆ ಹೋದರೆ ಕಲಾಮಂದಿರದ ಒಳಗಿರಲಿ, ಹೊರಗೇ ದೊಡ್ಡ ಸ್ಕ್ರೀನ್‌ನಲ್ಲಿ ಕಾರ್ಯಕ್ರಮ ನೋಡೋಕೆ ಹಾಕಿದ್ದ ಪರದೆ ಬಳಿ ಕೂಡಾ ಜಾಗ ಭರ್ತಿ ಆಗಿತ್ತು. ಸರಿ ಹೇಗೋ ಸ್ವಲ್ಪ ಹೊತ್ತಿನ ನಂತರ ಒಂದು ಖುರ್ಚಿ ಸಿಕ್ತು. ಕಾರ್ಯಕ್ರಮ ಶುರು ಆಯ್ತು, ಸ್ವಾಗತ ಭಾಷಣ ಆನಂತರ ಅಭಿನಂದನಾ ಭಾಷಣ ಪಬ್ಲಿಕ್ ಟಿವಿ ರಂಗಣ್ಣ ಅವರಿಂದ ಶುರು ಆಯ್ತು. ಇನ್ನೂ ಈ ಯಪ್ಪ ರಾಜಕೀಯ ಹಿನ್ನೆಲೆ ತಗೊಂಡು ಸಹಸ್ರನಾಮ ಮಾಡ್ತಾರೆ ಅನ್ಕೊಂಡ್ರೆ, ಅವರ ಮಾರ್ಮಿಕ ನುಡಿಗಳು, ಕೃತಜ್ಞತಾ ಭಾವಗಳು ಈ ಮನುಷ್ಯ ಕೂಡಾ ಇಷ್ಟು ಮೃದುವಾಗಿ ಹೊಗಳಿ ಅಟ್ಟಕ್ಕೇರಿಸದೆ, ತೆಗಳಿ ಸಣ್ಣವರಾಗದೆ ಅತೀ ಮೃದುವಾಗಿ ಡಾಕ್ಟರ್ ಅವರ ಬಗ್ಗೆ ಮಾತನಾಡಿ, ಸೂಕ್ಷ್ಮವಾಗಿ ಮುಂದಿನ ನಡೆ ಬಗ್ಗೆ ತಮ್ಮ ಅಭಿಪ್ರಾಯ ಹಂಚಿಕೊಂಡು ತಮಗೆ ನೀಡಿದ್ದ ಜವಾಬ್ದಾರಿಯನ್ನು ನಿಭಾಯಿಸಿದರು.

ಇನ್ನು ಕಾರ್ಯಕ್ರಮದ ಬಗ್ಗೆ ಹೇಳೋದಾದ್ರೆ ಎಷ್ಟೆಷ್ಟೋ ಖರ್ಚು ಮಾಡಿ ಡಿಜೆ, ಸಿನಿಮಾ ನಟರು, ಹೆಸರಾಂತ ಗಾಯಕರು ಯಾರ್ಯಾರ್ನೋ ಕರಕೊಂಡು ಬಂದು ಬಿರಿಯಾನಿ, ಪಲಾವ್ ಹಂಚಿ, ಹಣ–ಹೆಂಡ ಹೊಂದಿಸಿ ಲಾರಿ, ಬಸ್ಸಲ್ಲಿ ಜನ ಕರಕೊಂಡು ಬಂದಿದ್ದಲ್ಲ. ಜನ ತಾವೇ ಸ್ವ ಇಚ್ಛೆಯಿಂದ ಡಾಕ್ಟರ್ ಅವರನ್ನು ನೋಡಿ, ನಾವೂ ದೂರದಿಂದ್ಲೇ ಬಂದು ಅಭಿನಂದನೆ ನೋಟ ಬೀರೋಣ, ಮನಸಲ್ಲೇ ಹರಸೋಣ, ಕಣ್ತುಂಬ ನೋಡಿ ಧನ್ಯರಾಗೋಣ ಅನ್ಕೊಂಡು ಬಂದಿದ್ದ ಜನಗಳಿಗೆ ಲೆಕ್ಕವಿಲ್ಲ. ಇನ್ನು ಆಯೋಜನೆ ಮಾಡಿದವರು ಇವರು ನಮ್ಮ ಜಾತಿಯವರು ಅದಕ್ಕೆ ಅದ್ದೂರಿಯಾಗಿ ಸನ್ಮಾನ ಮಾಡಬೇಕು ಅನ್ನೋತರ ಗೌಡ್ರ ಗದ್ದಲವಾಗಿರಲಿಲ್ಲ. ಎಲ್ಲಾ ಪಕ್ಷಗಳ ಪ್ರಭಾವಿ ನಾಯಕರು ಕೂಡಾ ಸಾಮಾನ್ಯರಲ್ಲಿ ಸಾಮಾನ್ಯರಂತೆ ಒಳಗೆ–ಹೊರಗೆ ಪಕ್ಷಾತೀತರಾಗಿ ಕಾರ್ಯಕ್ರಮದ ಸಾಕ್ಷಿಗಳಾಗಿದ್ದರು. ಯಾವುದೇ ಜೈಕಾರವಿಲ್ಲ–ಗದ್ದಲವಿಲ್ಲ, ಗೊಂದಲಗಳಿರಲಿಲ್ಲ. ಯಾವುದೋ ಧ್ಯಾನ ಮಂದಿರದ ರೀತಿ ಕಲಾಮಂದಿರವಾಗಿತ್ತು. ಈ ಕಾರ್ಯಕ್ರಮದ ಆಯೋಜಕರು ಮುಂದೆ ಇನ್ನಾವುದೇ ಅದ್ದೂರಿ ಕಾರ್ಯಕ್ರಮ ಮಾಡಿದರೂ ಈ ಕಾರ್ಯಕ್ರಮಕ್ಕೆ ಸಾಟಿಯಾಗುವುದಿಲ್ಲ. ಸನ್ಮಾನಿತ ಪದ್ಮಶ್ರೀ ಡಾ. ಮಂಜುನಾಥ್‌ರ ಬಗ್ಗೆ ಹೇಳೋದೇನಿದೆ. ಏನಿಲ್ಲ... ಏನಿಲ್ಲಾ... ನಾನು ಮಾಡಿರೋದು ಏನೂ ಅಲ್ಲ.. ಏನೇನೂ ಅಲ್ವೇ ಅಲ್ಲ.. ಅನ್ನೋ ರೀತಿ ಕುಳಿತಿದ್ದರು. ಪತ್ನಿಯವರಂತೂ ಮಾಜಿ ಪ್ರಧಾನಿ ಮಗಳು ಇಂಥಹ ಪ್ರಸಿದ್ಧ ವೈದ್ಯರ ಹೆಂಡತಿ... ಊಹುಂ ಅದೇನೂ ಇಲ್ಲ. ಸಾಮಾನ್ಯರಲ್ಲಿ ಸಾಮಾನ್ಯ ಸರಳ ಸ್ತ್ರೀ ಮಹಾಸತಿ ಅನುಸೂಯೆಯೇ. ಇಂತಹ ಮಗನನ್ನು ನೀಡಿದ ತಾಯಿಯಂತೂ ಸಾಸಿವೆ ಕಾಳಷ್ಟು ಅಹಂಭಾವವಿಲ್ಲದೆ ಭೂಮಿ ತೂಕದ ದೇವತೆ. ಇಂತಹ ಕಾರ್ಯಕ್ರಮದ ಭಾಗವಾಗಿದ್ದು ನನ್ನ ಜೀವನದ ಧನ್ಯತಾಭಾವ, ಧರ್ಮಸ್ಥಳದ ಮಂಜುನಾಥನ ಆಶೀರ್ವಾದವೇ ಲಭಿಸಿದಷ್ಟು ಕೃತಾರ್ಥತೆ. "ಧನ್ಯೋಸ್ಮಿ ಧನ್ವಂತರಿ" ಹೇಳಲು ಬಹಳ–ನೀವಂತೂ ಸರಳ–ನಿಮ್ಮಂಥವರು ವಿರಳಾತಿ ವಿರಳ.

–ವಿಶ್ವ ಸ್ಪಂದನ, ಮೈಸೂರು.

■ ನಾಲ್ಕು ವರ್ಷಕ್ಕೊಮ್ಮೆ ಬರುವ ಫೆಬ್ರವರಿ 29ಅನ್ನು ಸ್ವಾಗತಿಸಿ

ಮಾನ್ಯರೆ,

ನಮ್ಮಲ್ಲಿ ಸಮಯದ ಅಳತೆಯನ್ನು (ಕಾಲಚಕ್ರ) ವೈಜ್ಞಾನಿಕ ಆಧಾರದ ಮೇಲೆ ರೂಪಿಸಿ ಅನುಸರಿಸಿಕೊಂಡು ಬರಲಾಗುತ್ತಿದೆ. ಭೂಮಿ ತನ್ನ ಅಕ್ಷದ ಮೇಲೆ ಒಂದು ಸುತ್ತು ಹಾಕುವ ಸಮಯವನ್ನು ಅಂದರೆ ಸೂರ್ಯೋದಯದಿಂದ ಸೂರ್ಯೋದಯವರೆಗಿನ ಸಮಯವನ್ನು ಒಂದು ದಿನ ಎಂದು ಕರೆಯಲಾಗಿದೆ.

ಭೂಮಿಯು ಸೂರ್ಯನ ಸುತ್ತ ಒಂದು ಸುತ್ತು ಹಾಕುವ ಸಮಯವನ್ನು ಅಂದರೆ ಎಲ್ಲ ಒಂದು ಸರಣಿಯನ್ನು (ಬೇಸಿಗೆಕಾಲ, ಮಳೆಗಾಲ ಮತ್ತು ಚಳಿಗಾಲ) ಒಂದು ವರ್ಷ ಎಂದು ಆಚರಿಸಲಾಗುತ್ತದೆ.

ಭೂಮಿ ಮತ್ತು ಸೂರ್ಯನ ಆಧಾರದ ಮೇಲೆ ದಿನ ಮತ್ತು ವರ್ಷವನ್ನು ಗುರುತಿಸಬಹುದು. ಆದರೆ ಈ ಆಧಾರದ ಮೇಲೆ ಒಂದು ತಿಂಗಳನ್ನು ಗುರುತಿಸುವುದು, ನಿಗದಿಪಡಿಸುವುದು ಕಷ್ಟ. ಬದಲಿಗೆ ಚಂದ್ರನು ಭೂಮಿಯ ಸುತ್ತ ಒಂದು ಸುತ್ತು ಹಾಕುವ ಸಮಯವನ್ನು ಅಮಾವಾಸ್ಯೆಯಿಂದ ಅಮಾವಾಸ್ಯೆಗೆ ಅಥವಾ ಹುಣ್ಣಿಮೆಯಿಂದ ಹುಣ್ಣಿಮೆಗೆ ಒಂದು ತಿಂಗಳು ಎಂದು ಕರೆಯಬಹುದು.

ಈ ಮೂರು ಸಮಯಗಳ ಸಮನ್ವಯದ ಆಧಾರದ ಮೇಲೆ ಗ್ರೆಗೋರಿಯನ್ ಕ್ಯಾಲೆಂಡರ್ ಬಳಕೆಗೆ ಬಂದಿತು. ಭೂಮಿಯು ಸೂರ್ಯನ ಸುತ್ತ ಸುತ್ತಲು 365 ದಿನಗಳು ಮತ್ತು 6 ಗಂಟೆಗಳನ್ನು ತೆಗೆದುಕೊಳ್ಳುತ್ತದೆ. ಪ್ರತಿ ವರ್ಷ 6 ಹೆಚ್ಚುವರಿ ಗಂಟೆಗಳನ್ನು ತೆಗೆದುಕೊಳ್ಳುವುದರಿಂದ, ನಾಲ್ಕು ವರ್ಷಗಳ ನಂತರ 24 ಗಂಟೆಗಳಾಗಿ ಒಂದು ದಿನಕ್ಕೆ ಪರಿವರ್ತಿತವಾಗುತ್ತದೆ. ಹಾಗಾಗಿ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಫೆಬ್ರವರಿಯಲ್ಲಿ 29 ದಿನಗಳು ಇರುತ್ತವೆ ಹಾಗೂ ಇದನ್ನು ಅಧಿಕ ವರ್ಷ ಎಂತಲೂ ಕರೆಯುತ್ತಾರೆ. ಇನ್ನು ಸ್ವಾಗತಿಸೋಣ...

–ಕೆ ಎಸ್ ಸುರೇಶ್, ಶಿಕ್ಷಕರು, ಕೆ.ಜಿ.ಹಳ್ಳಿ, ಹೆಚ್.ಡಿ.ಕೋಟೆ.

■ ಚಂಡೀಘಡ ಮೇಯರ್ ಚುನಾವಣೆ, ಸಾಂವಿಧಾನಿಕ ಗೆಲುವು

ಮಾನ್ಯರೆ,

ಚಂಡೀಘಡ ಮೇಯರ್ ಆಗಿ ಎಎಪಿಯ ಕುಲದೀಪ್ ಕುಮಾರ್ ಅವರನ್ನು ಸುಪ್ರೀಂ ಕೋರ್ಟ್ ವಿಜಯಿ ಎಂದು ತೀರ್ಪು ನೀಡಿರುವುದು ಪ್ರಜಾತಂತ್ರ ವ್ಯವಸ್ಥೆಯ ಸಾಂವಿಧಾನಿಕ ಗೆಲುವಾಗಿದೆ.

ಪ್ರಜಾಸತ್ತಾತ್ಮಕ ತತ್ವಗಳನ್ನು ಸಂರಕ್ಷಿಸುವಲ್ಲಿ ಚುನಾವಣಾಧಿಕಾರಿ ಅನಿಲ್ ಮಸೀಹ್ ತಪ್ಪೆಸಗಿದ್ದಾರೆ. ಅಲ್ಲದೆ ಒಂದು ರಾಜಕೀಯ ಪಕ್ಷದ ಪರವಾಗಿ ಕೆಲಸ ಮಾಡಿದ್ದಾರೆ. ಇವರಿಗೆ ಕಾನೂನಿನ ಪ್ರಕಾರ ಶಿಕ್ಷೆಯಾಗಬೇಕು. ಈ ಕೃತ್ಯಕ್ಕೆ ಕುಮ್ಮಕ್ಕು ನೀಡಿದವರಿಗೂ ಶಿಕ್ಷೆಯಾಗಬೇಕು.

ಈ ಹಿಂದೆ ಲೋಕಸಭಾ ಚುನಾವಣೆಯಲ್ಲಿ ಇವಿಎಂಗಳ ಬಗ್ಗೆ ಹಲವು ರಾಜಕೀಯ ಪಕ್ಷಗಳು ಅನುಮಾನ ವ್ಯಕ್ತಪಡಿಸಿದ ವಿಚಾರಗಳು ನಮ್ಮ ಮುಂದಿರುವಾಗ ಇಂತಹ ಘಟನೆಗಳು ನಡೆದರೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಅಕ್ರಮ ನಡೆಯುವುದಿಲ್ಲ ಎಂದು ನಂಬುವುದಾದರು ಹೇಗೆ ಎನ್ನುವ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಸಹಜವಾಗಿ ಮೂಡುತ್ತದೆ. ಆದ್ದರಿಂದ ಚುನಾವಣಾ ಅಕ್ರಮ ತಡೆಯಲು ಕೋರ್ಟ್ ಮುಂದಾಗಬೇಕಿದೆ.ಚಂಡೀಘಡ ತೀರ್ಪು ನೀಡಿದ ನ್ಯಾಯಪೀಠಕ್ಕೆ ಧನ್ಯವಾದಗಳು.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

ಮಂಥನ



ನಿವೇದಿತಾ ಎಚ್
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು

ವೈದ್ಯಾ ನಾರಾಯಣೀ ರಮಾ...?!



ಆನಂದಿ ಗೋಪಾಲ್ ಜೋಶಿ



ಕಾದಂಬಿನಿ ಗಂಗೂಲಿ



ರುಕ್ಮಾಬಾಯಿ



ಹೈಮಬತಿ ಸೇನ್



ಮೇರಿ ಪೂನೆನ್ ಲುಕೋಸ್

ಮಾರ್ಚ್ 8ರಂದು ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲು ನಾವೆಲ್ಲ ಸನ್ನದ್ಧರಾಗಿದ್ದೇವೆ. Invest in Women: Accelerate Progress, ಅಂದರೆ, "ಮಹಿಳೆಯರಿಗಾಗಿ ತೊಡಗಿಸಿ, ಪ್ರಗತಿಯನ್ನು ತ್ವರಿತಗೊಳಿಸಿ" ಎಂಬ ಘೋಷವಾಕ್ಯದೊಂದಿಗೆ, ವಿಶ್ವಸಂಸ್ಥೆ 2024ರ ಮಹಿಳಾ ದಿನವನ್ನು ಆಚರಿಸಲು ಕರೆ ನೀಡಿದೆ.

ಮಹಿಳೆಯರನ್ನು ಹೊರಗಿಟ್ಟು ಪ್ರಗತಿಯ ಕನಸು ಕಾಣುವುದು ಎಷ್ಟು ಅಸಂಬದ್ಧ ಎಂಬುದು ಈಗ ಸರ್ವವೇದ್ಯವಾಗಿದೆ. ಆದರೂ ಮಹಿಳೆಯರು ತಮ್ಮ ಹಕ್ಕಿಗಾಗಿ ಇನ್ನೂ ಹೋರಾಡುವಂತಹ ಪರಿಸ್ಥಿತಿ ಇರುವುದು ಶೋಚನೀಯ ಸಂಗತಿ ಅಲ್ಲವೆ? ಇದು ನಮ್ಮ ದೇಶದ ಕಥೆ ಮಾತ್ರವಲ್ಲ, ಅಂತಾರಾಷ್ಟ್ರೀಯ ದಿನಾಚರಣೆಯಲ್ಲವೇ? ಆದ್ದರಿಂದ ಸಮಸ್ಯೆ ಕೂಡಾ ಅಂತರಾಷ್ಟ್ರೀಯವಾಗಿಯೇ ಪ್ರಬಲವಾಗಿದೆ.

ಕೇವಲ 20–30ವರ್ಷಗಳ ಹಿಂದಿನ ಪರಿಸ್ಥಿತಿಗೆ ಹೋಲಿಸಿದಲ್ಲಿ, ಇಂದು ಮಹಿಳೆಯರ ಸ್ಥಿತಿಗತಿ ಎದ್ದು ಕಾಣುವಷ್ಟು ಸುಧಾರಿಸಿದೆ. ಈಗ ಮಹಿಳೆ ಕಾಲಿರಿಸದ ಕ್ಷೇತ್ರವೇ ಇಲ್ಲ. ಶಿಕ್ಷಣ, ವಿಜ್ಞಾನ, ಸಂಶೋಧನೆ, ಬ್ಯಾಂಕಿಂಗ್, ಆಡಳಿತ, ರಾಜಕೀಯ, ವೈದ್ಯಕೀಯ, ಕೈಗಾರಿಕೆ, ಬಾಹ್ಯಾಕಾಶ... ಎಲ್ಲೆಡೆಯೂ ಮಹಿಳೆಯಿದ್ದಾಳೆ. ಅಂಟಾರ್ಟಿಕದಂತಹ ಕ್ಷುದ್ರ ವಾತಾವರಣವಿರುವೆಡೆಯಲ್ಲಿಯೂ ಸತತವಾಗಿ ಯಶಸ್ವಿಯಾಗಿ ಕೆಲಸ ಮಾಡಿಬಂದ ಸಾಧಕಿಯರಿದ್ದಾರೆ.

ಎಲ್ಲಾ ಅಡೆತಡೆಗಳನ್ನು ಲಂಘಿಸಿ ಸಾಧನೆಯ ಶಿಖರವನ್ನು ಏರಿ ಗೆಲುವಿನ ಪತಾಕೆ ಹಾರಿಸಿರುವ ಈ ಎಲ್ಲಾ ಮಹಿಳೆಯರ ಹಾದಿ ಈ 21ನೇ ಶತಮಾನದಲ್ಲೂ ಸುಲಭವಾದುದೇನಾಗಿರಲಿಲ್ಲ ಎಂಬುದು ಎಲ್ಲರಿಗೂ ಗೊತ್ತು. ಹಾಗಾದರೆ ಇವರಲ್ಲಿ 'ಏನಾದರೂ ಸಾಧಿಸಬಹುದು' ಎಂಬ ಹುರುಪು ಧೈರ್ಯ ಉತ್ಸಾಹ ತುಂಬಿ ಮಾದರಿಯಾಗಿ ನಿಂತ ಆದ್ಯ ಪ್ರವರ್ತಕ ಮಹಿಳೆಯರ ಸಂಕಷ್ಟಗಳು ಮತ್ತು ಕೋಟಲೆಗಳ ಬಗ್ಗೆ ಸಾಕಷ್ಟು ಕೇಳಿದ್ದೇವೆ. ವಿದೇಶಗಳಲ್ಲಿ ಮಾತ್ರವಲ್ಲ, ಗಾರ್ಗಿ, ಮೈತ್ರೇಯಿ, ಅನಸೂಯೆ, ಭಾರತೀ, ಕಿತ್ತೂರು ಚೆನ್ನಮ್ಮ ಮತ್ತು ಝಾನ್ಸಿ ರಾಣಿಯರಿದ್ದ ನಮ್ಮ ನೆಲದಲ್ಲೂ ಮಹಿಳೆಯರು ತಮ್ಮ ಸಾಧನೆಗಾಗಿ ಬೇಕಾದ್ದನ್ನು ಮಾಡುವ, ಕೇಳುವ, ಓದುವ, ನೋಡುವ, ಆಡುವ ಸ್ವಾತಂತ್ರ್ಯ ಪಡೆಯಲು ಹೆಣಗಿದ್ದಾರೆ, ಸೆಣಸಿದ್ದಾರೆ, ಹೋರಾಡಿದ್ದಾರೆ, ಅವಮಾನಗಳನ್ನು ಸಹಿಸಿದ್ದಾರೆ. ಪ್ರತಿ ಕ್ಷೇತ್ರದಲ್ಲೂ ಇದೇ ಕಥೆ.

ನನಗೆ ಈ ಸಂದರ್ಭದಲ್ಲಿ ನೆನಪಾಗುತ್ತಿರುವುದು ಮಹಿಳಾವೈದ್ಯರು. ವೈದ್ಯೋ ನಾರಾಯಣೋ ಹರಿಃ ಎನ್ನುವ ನಾಣ್ನುಡಿ ಇದೆಯಾದರೂ, ಅದು ವೈದ್ಯನೇ ಆಗಿರಬೇಕು, ವೈದ್ಯೆ ಅಲ್ಲ ಎನ್ನುವ ಮನಃಸ್ಥಿತಿಯಲ್ಲಿದ್ದ ಸಮಾಜದಲ್ಲಿ, ತಾನೂ ಸಮರ್ಥ ವೈದ್ಯೆಯಾಗಬಲ್ಲೆ ಎಂಬುದನ್ನು ಸಾಧಿಸಿ ತೋರಿಸಲು ಮಹಿಳೆಯರು ಸವೆಸಿದ ಹಾದಿ ಅಕ್ಷರಶಃ ಮುಳ್ಳಿನದ್ದೇ ಆಗಿತ್ತು.

ಇಂದು ನಾವೇ ಕಂಡಂತೆ ಚಿಕಿತ್ಸೆಯ ಪಥವನ್ನೇ ಬದಲಿಸಿದ ಹಲವಾರು ವೈದ್ಯೆಯರು ಪ್ರಾಣ ರಕ್ಷಕರಾಗಿದ್ದಾರೆ. ಪದ್ಮಾವತಿ ಐಯ್ಯರ್, ಇಂದಿರಾ ಅಹುಜಾ, ಗಗನ್ ದೀಪ್ ಕಾಂಗ್, ಮಂಜುಳಾ ಅನಗಾನಿ, ಶಾಂತಾ, ಅಜಿತಾ ಚಕ್ರವರ್ತಿ, ಕೇತಾಯುನ್ ಮತ್ತು ನಮ್ಮ ಕರ್ನಾಟಕದವರೇ ಆದ ಅನುಪಮಾ ನಿರಂಜನ, ಎಚ್.ಗಿರಿಜಮ್ಮ, ಆಶಾ ಬೆನಕಪ್ಪ, ಲೀಲಾವತಿ ದೇವದಾಸ್, ಕಾಮಿನಿ ರಾವ್, ನಿರ್ಮಲಾ ಕೇಸರಿ, ಶೋಭಾ ಬಾಣಾಪುರಮಠ್, ವಿಜಯಲಕ್ಷ್ಮಿ ಬಾಳೇಕುಂದ್ರಿ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇವರೆಲ್ಲರಿಗೂ ಈ ವೈದ್ಯ ವೃತ್ತಿಗೆ ಧುಮುಕಲು ಧೈರ್ಯ ನೀಡಿದ ಮಹಿಳೆಯರ ಸ್ಥೈರ್ಯ ಮತ್ತು ಹೋರಾಟದ ಕತೆ ಅಚ್ಚರಿ ಮೂಡಿಸುತ್ತದೆ. ಹೊಸತೇನನ್ನೋ ಮಾಡುತ್ತಿದ್ದೇನೆ ಎಂಬ ಯಾವುದೇ ಹುಂಬತನ ತೋರದೆ ಇಡೀ ಸಮಾಜವನ್ನು ಎದುರು ಹಾಕಿಕೊಂಡು ಸಮಾಜದ ಒಳಿತಿಗಾಗಿ ವೈದ್ಯರಾಗಿ ಸೇವೆ ಸಲ್ಲಿಸಿದ ಪ್ರವರ್ತಕರ ಕಿರು ಪರಿಚಯ ನಮಗಿದ್ದರೆ ಅದೇ ನಾವು ಅವರಿಗೆ ಸಲ್ಲಿಸುವ ಗೌರವ.

Multi Tasking ಸಾಮರ್ಥ್ಯವನ್ನು ಹುಟ್ಟುತ್ತಲೇ ಪಡೆದು ಬಂದಿರುವ ಮಹಿಳೆಯರು ಅಡುಗೆಮನೆಯ ಪದಾರ್ಥಗಳನ್ನು ಬಳಸಿಕೊಂಡೇ ಮನೆವೈದ್ಯ ಮಾಡುತ್ತಿದ್ದರು. ನಾಟಿವೈದ್ಯ ಕಲಿತು, ಸೊಪ್ಪು ಸೆದೆ ನಾರು ಬೇರುಗಳನ್ನು ಬಳಸಿ, ಮನೆ ಮಾತ್ರವಲ್ಲದೆ ತಮ್ಮ ನೆರೆಹೊರೆಯವರ ಸಣ್ಣ–ಪುಟ್ಟ ರೋಗರುಜಿನಗಳಿಗೆ ಚಿಕಿತ್ಸೆ ನೀಡುತ್ತಿದ್ದವರ ಸಂಖ್ಯೆ ಖಂಡಿತಾ ಕಡಿಮೆ ಇರಲಿಲ್ಲ. ಆದರೆ ಭಾರತಕ್ಕೆ ಬ್ರಿಟಿಷರು ಬಂದಮೇಲೆ, ಆರ್ಷೇಯವಾದುದೆಲ್ಲಾ, ತೆರೆಮರೆಗೆ ಸರಿಯತೊಡಗಿತು. ಇಂಗ್ಲಿಷ್ ವೈದ್ಯ ಪದ್ಧತಿ ಮುನ್ನೆಲೆಗೆ ಬಂದು ಭಾರತದಲ್ಲೂ ಆಸ್ಪತ್ರೆಗಳು ತೆರೆಯಲ್ಪಟ್ಟವು. ಆರಂಭದಲ್ಲಿ ಇಂಗ್ಲಿಷರೇ ವೈದ್ಯವೃತ್ತಿಯನ್ನು ನಿರ್ವಹಿಸುತ್ತಿದ್ದರು. ಕ್ರಮೇಣ ಭಾರತೀಯ ಪುರುಷರು ವೈದ್ಯಕೀಯ ತರಬೇತಿ ಪಡೆದು ಇಂಗ್ಲಿಷರಿಗೆ ಸಹಾಯಕರಾಗಿ ಕೆಲಸ ಮಾಡತೊಡಗಿದರು. ಸೂಲಗಿತ್ತಿಯರು ಇರುತ್ತಿದ್ದರೇ ವಿನಃ ಮಹಿಳಾ ವೈದ್ಯರ ಪರಿಕಲ್ಪನೆಯೇ ಇರಲಿಲ್ಲ. ಆದರೆ ವೈದ್ಯೆಯರ ಅಗತ್ಯವಂತೂ ಖಂಡಿತಾ ಇತ್ತು.

1920ರ ಸುಮಾರಿನಲ್ಲಿ ಕೇರಳದಲ್ಲಿ ವೈದ್ಯರಾಗಿದ್ದ ಥಿಯೋಡರ್ ಹಾವರ್ಡ್ ಸಮರ್ವೆಲ್ಲ್, ತಮ್ಮ Knife and Life in India: Being the Story of a Surgical Missionary at Neyyoor ಎಂಬ ತಮ್ಮ ಅನುಭವ ಕಥನದಲ್ಲಿ ಒಂದು ಘಟನೆ ಹೇಳುತ್ತಾರೆ. ಒಬ್ಬ ಸುಶಿಕ್ಷಿತ ಉನ್ನತಾಧಿಕಾರಿಯ ಮಡದಿಗೆ ಅನಾರೋಗ್ಯವಿತ್ತು. ಆಕೆಯನ್ನು, ಅದಾಗಲೇ, ಮಹಿಳಾವೈದ್ಯರಿಲ್ಲದ ಕಾರಣ, ಒಬ್ಬ ಪುರುಷ ವೈದ್ಯ ಪರೀಕ್ಷಿಸಿಯಾಗಿತ್ತು. ಸುಧಾರಣೆ ಕಂಡಿರಲಿಲ್ಲವೆಂದು ಮರುಪರೀಕ್ಷೆಗೆ ಸಮರ್ವೆಲ್ಲ್ ಅವರಲ್ಲಿಗೆ ಹೋದಾಗ, ಆ ಪುರುಷ ವೈದ್ಯನಿಂದ ರೋಗಿಯ ಮಾಹಿತಿ ಕೇಳಿದರು. ಆಗ ಆತ ಹೇಳಿದ್ದೇನೆಂದರೆ, "ನಾನು ಆಕೆಯನ್ನು ಇದುವರೆಗೂ ನೋಡಿಯೇ ಇಲ್ಲ. ಮನೆಯವರು ಆಕೆಗೆ ಆಗುತ್ತಿರುವ ಸಂಕಟದ ಚಿತ್ರಣ ನೀಡಿದರು. ಸಂಪೂರ್ಣ ಪರೀಕ್ಷೆ ಮಾಡದಿದ್ದರೂ, ನಾಡಿಮಿಡಿತವನ್ನಾದರೂ ಪರೀಕ್ಷಿಸಲೇಬೇಕು ಎಂದಿದ್ದರಿಂದ, ಆಕೆಯ ಮಣಿಕಟ್ಟಿಗೆ ದಾರ ಕಟ್ಟಿ, ಅದರ ಮತ್ತೊಂದು ತುದಿಯನ್ನು ನನ್ನ ಕಿವಿಗೆ ಹಿಡಿಯುವಂತೆ ಹೇಳಿ, ನಾಡಿಮಿಡಿತ ಲೆಕ್ಕ ಹಾಕಿಕೊಳ್ಳುವಂತೆ ಹೇಳಿದರು!" ಎಂದು.

ನಾನು ಹೇಳಿದ ಘಟನೆ 1920ರ ಸುಮಾರಿನದು. ಈ ಘಟನೆ ಓದಿದ ಮೇಲೆ ಅಂದಿನ ಮಹಿಳೆಯರಿಗಿದ್ದ ಕಟ್ಟುಪಾಡುಗಳು ಎಷ್ಟು ಕಠಿಣವಾದುದೆಂಬುದನ್ನು ನೀವು ಊಹಿಸಿಕೊಳ್ಳಬೇಕು. ವೈದ್ಯೆಯಾಗುವುದಿರಲಿ, ಚಿಕಿತ್ಸೆ ಪಡೆಯುವುದಕ್ಕೇ ಈ ಪಾಡು! ಹೆಣ್ಣು ಅಕ್ಷರ ಕಲಿತರೆ ಅದು ಮನೆಗೆ ಕೆಡುಕನ್ನುಂಟುಮಾಡುತ್ತದೆ, ಅವಳು ವಿಧವೆಯಾಗುತ್ತಾಳೆ, ನರಕಕ್ಕೆ ಹೋಗುತ್ತಾಳೆ ಎಂದು ಬಲವಾಗಿ ನಂಬಿದ್ದ ಆ ಕಾಲದಲ್ಲಿ ವೈದ್ಯಕೀಯ ಶಿಕ್ಷಣ?! ಕನಸಿನ ಮಾತಲ್ಲವೇ?!

ಆದರೆ ಆಶ್ಚರ್ಯಕರ ಸಂಗತಿಯೆಂದರೆ, ಅದಕ್ಕೂ 35 ವರ್ಷಗಳ ಹಿಂದೆಯೇ ಭಾರತ ತನ್ನ ಮೊದಲ ಮಹಿಳಾ ವೈದ್ಯೆಯನ್ನು ಕಂಡಿತ್ತು ಎಂಬುದು!!!

ಹೌದು, ಎಲಿಜ಼ಬೆತ್ ಬ್ಲಾಕ್‌ವೆಲ್, 1849ರಲ್ಲಿ ಪದವಿ ಪಡೆದು ಮೊದಲ ವೈದ್ಯೆಯಾದ 36 ವರ್ಷಗಳ ನಂತರ ಭಾರತದಲ್ಲಿಯೂ ವೈದ್ಯೆಯರ ಸಂತತಿ ಬೆಳೆಯುವ ಎಲ್ಲ ಪ್ರಖರ ಲಕ್ಷಣಗಳೂ ಗೋಚರಿಸಿದವು. ಅಂತಹ 6 ಪ್ರಮುಖ ದಿಗ್ದರ್ಶಕ ಮಹಿಳೆಯರ ಬಗ್ಗೆ ನಾನೀಗ ಹೇಳುವವಳಿದ್ದೇನೆ.

* **ಆನಂದಿ ಗೋಪಾಲ ಜೋಶಿ:** 13 ಮಾರ್ಚ್ 1865 ರಲ್ಲಿ ಮಹರಾಷ್ಟ್ರದ ಕಲ್ಯಾಣದಲ್ಲಿನ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಆನಂದಿ ಅವರ ಹುಟ್ಟುಹೆಸರು ಯಮುನಾ. ಆಗಿನ ಕಾಲದ ಸಂಪ್ರದಾಯದಂತೆ 9 ವರ್ಷ ಆಗುತ್ತಿದ್ದಂತೆಯೇ 26 ವರ್ಷದ ವಿದುರ ಗೋಪಾಲ ಜೋಶಿ ಎಂಬ ಅಂಚೆ ಇಲಾಖೆಯ ಗುಮಾಸ್ತನಿಗೆ ಮದುವೆ ಮಾಡಿಕೊಡಲಾಗುತ್ತದೆ. ಪ್ರಗತಿಪರ ಚಿಂತನೆ ಹೊಂದಿದ್ದ ಗೋಪಾಲ ಜೋಶಿ ಹೆಂಡತಿಗೆ ಶಿಕ್ಷಣ ಕೊಡಿಸುವ ನಿರ್ಧಾರ ಮಾಡುತ್ತಾರೆ. ಕುಟುಂಬ ಮತ್ತು ಸಮಾಜದ ಕಟು ವಿರೋಧವನ್ನೂ ಲೆಕ್ಕಿಸದೆ, ಹೆಂಡತಿಯನ್ನು ಮಿಷನರಿ ಶಾಲೆಗೆ ಕಳಿಸುತ್ತಾರೆ. ಆನಂದಿಗೆ 14ವರ್ಷ ವಯಸ್ಸಾದಾಗ, ಆಕೆಗೆ ಜನಿಸುವ ಮಗು ಸರಿಯಾದ ಚಿಕಿತ್ಸೆ ದೊರಕದೆ ಅಕಾಲ ಮರಣಕ್ಕೀಡಾಗುತ್ತದೆ. ಆಗ ವೈದ್ಯಳಾಗಬೇಕೆಂಬ ದೃಢ ನಿಶ್ಚಯ ಮಾಡಿದ ಆನಂದಿಯ ಬೆಂಬಲಕ್ಕೆ ನಿಂತು ಆಕೆಯನ್ನು ಅಮೆರಿಕದ ಪೆನ್ಸಿಲ್ವೇನಿಯಾ ವಿ.ವಿ.ಗೆ ಕಳುಹಿಸುತ್ತಾರೆ. ಅಮೆರಿಕಕ್ಕೆ ಹೋದರೂ ತನ್ನ ಧರ್ಮ ಮತ್ತು ಸ್ತ್ರೀ ಧರ್ಮವನ್ನೇ ಅನುಸರಿಸಿದ ಆನಂದಿ 1885ರಲ್ಲಿ ಪದವಿ ಪಡೆಯುತ್ತಾರೆ. ಅಮೆರಿಕದ ಪ್ರತಿಕೂಲ ವಾತಾವರಣ ಮತ್ತು ಶಿಶುಜನನದ ಸಮಯದಲ್ಲಿ ಉಂಟಾದ ಅನಾರೋಗ್ಯದಿಂದ ಭಾರತಕ್ಕೆ ಹಿಂತಿರುಗಿದ ಕೆಲವೇ ದಿನಗಳಲ್ಲಿ, 1887ರ ಫೆಬ್ರವರಿ 26ರಂದು ತಮ್ಮ 22ನೇ ವಯಸ್ಸಿಗೆ ಇಹಲೋಕ ತ್ಯಜಿಸುತ್ತಾರೆ. ಅದಮ್ಯ ಉತ್ಸಾಹದಿಂದ ಗಳಿಸಿದ ಪದವಿಯ ಉಪಯೋಗ ಭಾರತದ ಮಹಿಳೆಯರಿಗೆ ದಕ್ಕದಿದ್ದುದು ದುರದೃಷ್ಟವೇ ಸರಿ.

* **ಕಾದಂಬಿನಿ ಗಂಗೂಲಿ:** ಭಾರತದ ಮೊದಲ ಮಹಿಳಾ ಪದವಿ ಕಾಲೇಜು ಬೆತೂನ್ ಮಹಿಳಾ ಪದವಿ ಕಾಲೇಜಿನಲ್ಲಿ ಬಿ.ಎ ಪದವಿ ಪಡೆದ ಕಾದಂಬಿನಿ ಗಂಗೂಲಿ 18 ಜುಲೈ 1861ರಲ್ಲಿ ಬ್ರಜ್ ಕಿಶೋರ್ ಬಸು ಎಂಬ ಬ್ರಹ್ಮೋ ಸಮಾಜದ ಪ್ರಮುಖ ಸದಸ್ಯರ ಮಗಳಾಗಿ ಜನಿಸುತ್ತಾರೆ. ವಿಚಾರವಾದಿ ತಂದೆಯ ಬೆಂಬಲವಿತ್ತಾದುದರಿಂದ ಇವರ ಶಿಕ್ಷಣಕ್ಕೆ ಏನೂ ತೊಂದರೆಯಾಗಲಿಲ್ಲ. ದ್ವಾರಕಾನಾಥ ಗಂಗೂಲಿ ಎಂಬ ಬ್ರಹ್ಮೋ ಸಮಾಜದ ವಿಚಾರವಾದಿಯನ್ನು ವಿವಾಹವಾಗುವ ಕಾದಂಬಿನಿ ಅವರು ಮದುವೆಯ ನಂತರವೇ ಕಲ್ಕತ್ತಾ ಮೆಡಿಕಲ್ ಕಾಲೇಜು ಸೇರುತ್ತಾರೆ. 'ಮಹಿಳೆ' ಎಂಬ ಕಾರಣಕ್ಕೆ ಕೇವಲ ಒಂದು ಅಂಕ ಕಡಿಮೆ ನೀಡಿ 1886ರಲ್ಲಿ ಅಂತಿಮ ಪರೀಕ್ಷೆಯಲ್ಲಿ ಅನುತ್ತೀರ್ಣ ಮಾಡಲಾಗುತ್ತದೆ. ಆದರೆ Graduate of Bengal Medical College ಎಂಬ ಪದವಿ ನೀಡಲಾಗುತ್ತದೆ. ವೈದ್ಯೆಯಾಗಿ ಸೇವೆ ಸಲ್ಲಿಸಲು ಈ ಪದವಿ ಸಾಕಾಗಿತ್ತಾದರೂ, ಛಲದಿಂದ ಎಡಿನ್ಬರ್ಗ್ ಮೆಡಿಕಲ್ ಕಾಲೇಜಿಗೆ ಸೇರಿ MBBS ಗೆ ಸಮನಾದ ಡಿಪ್ಲೋಮಾಗಳನ್ನು ಮಾಡಿ ಭಾರತಕ್ಕೆ ಹಿಂತಿರು ಗುತ್ತಾರೆ. ಆದರೂ "ಮಹಿಳೆ"ಗೆ 'ವೈದ್ಯೆ'ಯ ಸ್ಥಾನ ಕೊಡಲು ಇಷ್ಟಪಡದ ಜನ, ಸೂಲಗಿತ್ತಿಗೆ 150ರೂ ಹಾಗೂ ತಮಗೆ ಕೇವಲ 50ರೂ ಶುಲ್ಕ ನೀಡಿದ್ದನ್ನು ಕಾದಂಬಿನಿ ದುಃಖದಿಂದ ನೆನೆಯುತ್ತಾರೆ. ತಮ್ಮ ಕೊನೆ ಯುಸಿರಿನವರೆಗೂ ವೃತ್ತಿ ನಿರತರಾಗಿದ್ದ ಕಾದಂಬಿನಿ, ಆನಂದಿ ಜೋಶಿ ವೃತ್ತಿ ಆರಂಭ ಮಾಡುವ ಮೊದಲೇ ನಿಧನರಾದ್ದರಿಂದ ಭಾರತದ ಮೊದಲ ಸೇವೆ ಸಲ್ಲಿಸಿದ ವೈದ್ಯೆ ಎಂದು ಗೌರವಿಸಲ್ಪಡುತ್ತಾರೆ.

* **ರುಕ್ಮಾಬಾಯಿ:** 1864ರಲ್ಲಿ ಜನಿಸಿದ ರುಕ್ಮಾಬಾಯಿ ಅವರು ಕೇವಲ ಎರಡು ವರ್ಷದವರಿದ್ದಾಗಲೇ ತಂದೆಯನ್ನು ಕಳೆದುಕೊಂಡವರು. ಅವರು ಜನಿಸಿದ ಸುತಾರ ಜನಾಂಗದಲ್ಲಿ ವಿಧವಾ ಮರುವಿವಾಹ ಚಾಲ್ತಿಯಲ್ಲಿದ್ದುದರಿಂದ, ಅವರ ತಾಯಿ ಡಾ.ಸಖಾರಾಮ್ ಅರ್ಜುನ್ ಎನ್ನುವ ಒಬ್ಬ ಪ್ರಗತಿಪರ ವಿಚಾರವಾದಿ ಸಜ್ಜನರ ಕೈ ಹಿಡಿಯುತ್ತಾರೆ. ರುಕ್ಮಾಬಾಯಿ ಅವರ ಮಲತಂದೆಯೇ ಅವರ ಶಕ್ತಿಯಾಗಿದ್ದರು! ತಾವು ಬಾಲ್ಯ ವಿವಾಹವನ್ನು ವಿರೋಧಿಸುತ್ತಿದ್ದರೂ, ಮನೆಯ ವರ ಒತ್ತಾಯಕ್ಕೆ ಕಟ್ಟುಬಿದ್ದು ರುಕ್ಮಾಬಾಯಿ ಅವರಿಗೆ 9ನೆಯ ವಯಸ್ಸಿಗೆ ಮದುವೆ ಮಾಡುತ್ತಾರೆ. ಆದರೆ ಆಕೆ ಋತುಮತಿಯಾದ ನಂತರ, ಗಂಡನ ಮನೆಗೆ ಕಳುಹಿಸುವ ಷರತ್ತಿನೊಂದಿಗೆ ಮಗಳನ್ನು ಜೊತೆಯಲ್ಲಿಯೇ ಉಳಿಸಿಕೊಂಡು ಶಿಕ್ಷಣ ಮುಂದುವರೆಸುವಂತೆ ಮಾಡುತ್ತಾರೆ. ದಿನಕಳೆದಂತೆ ಅಳಿಯನ ದುರ್ಗುಣಗಳು ತೆರೆದುಕೊಳ್ಳುತ್ತವೆ. ಬೇಜವಾಬ್ದಾರಿ ಯುವಕನಾಗಿದ್ದ ಆತ, ಶಿಕ್ಷಣವನ್ನೂ ಮುಂದುವರೆಸದೆ ದುಶ್ಚಟಗಳ ಒಡೆಯನಾಗಿರುತ್ತಾನೆ. ರುಕ್ಮಾಬಾಯಿ ಪ್ರಾಪ್ತವಯಸ್ಕಳಾದರೂ ಗಂಡನ ಜೊತೆ ಹೋಗದೆ, ವಿಚ್ಛೇದನಕ್ಕೆ ಅರ್ಜಿ ಹಾಕಿದ್ದು, ಆಗಿನ ಹಿಂದೂ ಸಮಾಜದಲ್ಲಿ ಬಿರುಗಾಳಿಯನ್ನೇ ಎಬ್ಬಿಸುತ್ತದೆ. ಬಾಲಗಂಗಾಧರ ತಿಲಕರೂ ರುಕ್ಮಾಬಾಯಿ ಅವರ ವಿರುದ್ಧ ನಿಲ್ಲುತ್ತಾರೆ. ಕೋರ್ಟ್ ಆಕೆಗೆ ಗಂಡನ ಜೊತೆ ಹೋಗುವ ಅಥವಾ 6 ತಿಂಗಳು ಜೈಲುವಾಸ ಅನುಭವಿಸುವ ಶಿಕ್ಷೆ ಪ್ರಕಟಿಸಿದಾಗಲೂ ರುಕ್ಮಾಬಾಯಿ ಜಗ್ಗುವುದಿಲ್ಲ. ಮೂರು ವರ್ಷವಾದರೂ ಮುಗಿಯದ ಕೇಸಿನ ಕೊನೆಯಲ್ಲಿ ಅವರ ತಂದೆ ನಿಧನರಾಗುತ್ತಾರೆ. ಆಗ 2000 ರೂ. ಕೊಟ್ಟು ರಾಜಿಯಾದ ರುಕ್ಮಾಬಾಯಿ ಗಂಡನಿಂದ ದೂರವಾಗುತ್ತಾರೆ. ನಂತರ ಲಂಡನ್‌ಗೆ ತೆರಳಿ ವೈದ್ಯಕೀಯ ಪದವಿ ಪಡೆದು ಮರಳುತ್ತಾರೆ. ಸೂರತ್ ರಾಜ್‌ಕೋಟ್‌ಗಳಲ್ಲಿ ಸೇವೆ ಸಲ್ಲಿಸುವ ರುಕ್ಮಾಬಾಯಿ ಪ್ಲೇಗ್‌ನ ಸಮಯದಲ್ಲಿ ನಿರ್ಭಿಡೆಯಿಂದ ರೋಗಿಗಳ ಸೇವೆ ಮಾಡಿದ್ದು ಶ್ಲಾಘನೆಗೊಳಪಡುತ್ತದೆ. 90 ವರ್ಷಗಳ ತುಂಬು ಜೀವನ ನಡೆಸಿ 25 ಸೆಪ್ಟೆಂಬರ್ 1955ರಲ್ಲಿ ನಿಧನರಾಗುತ್ತಾರೆ.

* **ಮುತ್ತುಲಕ್ಷ್ಮಿ ರೆಡ್ಡಿ :** ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲ್‌ನ ಮೊದಲ ಮಹಿಳಾ ಸದಸ್ಯೆಯಾದ ಇವರು ದೇವದಾಸಿಯ ಮಗಳು. ಇವರ ತಂದೆ ಒಬ್ಬ ಶಾಲಾ ಶಿಕ್ಷಕರಾಗಿದ್ದು, ತಮ್ಮ ಕುಟುಂಬದ ವಿರುದ್ಧ ಹೋರಾಡಿ ದೇವದಾಸಿಯ ಕೈ ಹಿಡಿದಿರುತ್ತಾರೆ. ತಂದೆಯ ಬೆಂಬಲದಿಂದ ಶಿಕ್ಷಣ ಪಡೆಯುವ ಮುತ್ತುಲಕ್ಷ್ಮಿ 1902 ರಲ್ಲಿ ಮೆಟ್ರಿಕ್ಯುಲೇಶನ್ ಪಾಸ್ ಮಾಡಿದ ಹತ್ತು ವಿದ್ಯಾರ್ಥಿಗಳಲ್ಲಿ ಒಬ್ಬಳೇ ಹುಡುಗಿ! ಮದ್ರಾಸ್ ಮೆಡಿಕಲ್ ಕಾಲೇಜಿನಲ್ಲಿ ಪದವಿ ಪಡೆಯುವ ಇವರು ನಂತರ ಯಶಸ್ವೀ ವೈದ್ಯರಾದದ್ದು ಮಾತ್ರವಲ್ಲ, ರಾಜಕೀಯ ಪ್ರವೇಶಿಸಿ, ದೇವದಾಸಿ ಪದ್ಧತಿ ಮತ್ತು ಬಾಲ್ಯ ವಿವಾಹದ ವಿರುದ್ಧ ಹೋರಾಡುತ್ತಾರೆ. ಮಹಿಳೆಯರಿಗೆ ಮತದಾನದ ಹಕ್ಕನ್ನು ಕೊಡಿಸಲು ಧ್ವನಿಯೆತ್ತುತ್ತಾರೆ. ಕ್ಯಾನ್ಸರ್ ರೋಗಿಗಳಿಗೆ ಆಸ್ಪತ್ರೆಯೇಕೆ? ಹೇಗಿದ್ದರೂ ಅವರು ಸಾಯುವವರು? ಎಂದು ಹೇಳುತ್ತಿದ್ದ ಸರ್ಕಾರದ ಜೊತೆಗೆ ಸೆಣಸಿ, ಮದ್ರಾಸಿನಲ್ಲಿ ಕ್ಯಾನ್ಸರ್ ಆಸ್ಪತ್ರೆಗೆ ಅಡಿಪಾಯ ಹಾಕುತ್ತಾರೆ. 1956ರಲ್ಲಿ ಪದ್ಮವಿಭೂಷಣ ಪುರಸ್ಕೃತರಾದ ಈಕೆ 1968ರಲ್ಲಿ ನಿಧನರಾಗುತ್ತಾರೆ.

* **ಮೇರಿ ಪೂನೆನ್ ಲುಕೋಸ್ :** ಭಾರತ ಮಾತ್ರವಲ್ಲ, 1938ರಲ್ಲಿ ವಿಶ್ವದಲ್ಲಿಯೇ ಮೊದಲ ಮಹಿಳಾ ಸರ್ಜನ್ ಜನರಲ್ ಆದ ಇವರು 1920ರಲ್ಲಿ ಕೇರಳದಲ್ಲಿ ಮೊದಲ ಸಿಜೇರಿಯನ್ ಹೆರಿಗೆ ಮಾಡಿದವರು. ಕೇರಳದ ಮೊದಲ ವೈದ್ಯಕೀಯ ಪದವೀಧರರಾದ ಇವರ ತಂದೆ ಟಿ.ಇ.ಪೂನೆನ್ ಅವರಾಸೆಯಂತೆ ಲಂಡನ್ ಸ್ಕೂಲ್ ಆಫ್ ಮೆಡಿಸಿನ್‌ನಿಂದ 1915ರಲ್ಲಿ ಪದವಿ ಪಡೆದ ಇವರು ಕೇರಳದ ವೈದ್ಯಕೀಯ ರಂಗದ ಉನ್ನತೀಕರಣಕ್ಕೆ ಶ್ರಮಿಸಿದವರು. 'ವೈದ್ಯಶಾಸ್ತ್ರ ಕುಶಲಿ' ಎಂಬ ಬಿರುದನ್ನು ಪಡೆದ ಇವರು 1976ರಲ್ಲಿ ನಿಧನರಾದರು.

* **ಹೈಮಬತಿ ಸೇನ್:** ಜಮೀನ್ದಾರರ ಮಗಳಾಗಿ ಜನಿಸಿ, ಜಮೀನ್ದಾರನ ಕೈ ಹಿಡಿದು, 10 ವರ್ಷಕ್ಕೇ ವಿಧವೆಯಾಗಿ, ಬಂಧುಗಳಿಂದ ಮೋಸಹೋಗಿ, ಅಕ್ಷರಶಃ ಬೀದಿಗೆ ಬಿದ್ದು, ಪುನಃ ಹೇಗೋ ನೆಲೆ ಕಂಡುಕೊಂಡು, ಬೇಜವಾಬ್ದಾರಿಯ ಮನುಷ್ಯನೊಬ್ಬನನ್ನು ಮರುವಿವಾಹವಾಗಿ, ನಂತರ ಮೆಡಿಕಲ್ ಕಾಲೇಜು ಸೇರಿ ಅತ್ಯುನ್ನತ ಶ್ರೇಣಿಯಲ್ಲಿ ಪಾಸಾಗಿ, ಉದ್ಯೋಗ ಹಿಡಿದು, 5 ಮಕ್ಕಳನ್ನು ಹಡೆದು, ಮತ್ತೆ ವೈಧವ್ಯಕ್ಕೆ ತುತ್ತಾಗಿ ಸಹೋದ್ಯೋಗಿ ಗಂಡಸರ ನಿರಂತರ ಕಿರುಕುಳಗಳನ್ನು ಸಹಿಸಿಕೊಂಡೂ, 485 ಕ್ಕೂ ಹೆಚ್ಚಿನ ಅನಾಥ ಮಕ್ಕಳ ಜವಾಬ್ದಾರಿಯನ್ನು ಪ್ರೀತಿಯಿಂದ ನಿರ್ವಹಿಸಿದ ಹೈಮಬತಿ ಸೇನ್ ಕಷ್ಟವನ್ನೇ ಬಳುವಳಿಯಾಗಿ ಪಡೆದವರು. ಚಿನ್ನದ ಪದಕದೊಂದಿಗೆ ಉತ್ತೀರ್ಣರಾದರೂ, ಸಹಪಾಠಿ ಗಂಡು ಹುಡುಗರು ಮುಷ್ಕರ ಹೂಡಿದ್ದಕ್ಕೆ ಪದವಿ ಮಾತ್ರಕ್ಕೆ ತೃಪ್ತಿ ಪಟ್ಟುಕೊಳ್ಳಬೇಕಾದ ಅವರ ಪ್ರಕರಣ ಆ ಕಾಲದಲ್ಲಿ ಹೆಂಗಸರಿಗಿದ್ದ ಘೋರ ಅಡೆತಡೆಗಳನ್ನು ಹೇಳುತ್ತದೆ.

ಇದು ಇವರೆಲ್ಲರ ಕಿರು ಪರಿಚಯವಷ್ಟೇ. ಇವರ ಹೋರಾಟದ ಒಂದೊಂದು ಮಜಲಿನ ಬಗ್ಗೆ ತಿಳಿಯುತ್ತಾ ಹೋದರೆ, ನಾವು ಜೀವಿಸುತ್ತಿರುವ ಸುಖೀ ಜೀವನದ ಬಗೆಗೆ ನಮಗೆ ನಾಚಿಕೆಯೆನಿಸಬೇಕು. ಒಂದು ವಿಷಯವನ್ನು ಇಲ್ಲಿ ಗಮನಿಸಬೇಕೆಂದರೆ, ಹೈಮಬತಿ ಸೇನ್‌ರನ್ನು ಹೊರತುಪಡಿಸಿದರೆ, ಉಳಿದ ಐವರಿಗೂ ಪತಿ ಅಥವಾ ತಂದೆಯ ಅನಿಯಮಿತ ನಿರಂತರ ಬೆಂಬಲವಿತ್ತು. 'ಪ್ರತಿಯೊಬ್ಬ ಯಶಸ್ವೀ ಗಂಡನ ಹಿಂದೆ ಒಬ್ಬ ಸ್ತ್ರೀ ಇರುತ್ತಾಳೆ' ಎನ್ನುವುದು ಎಷ್ಟು ನಿಜವೋ, ಹಾಗೆಯೇ, ಯಶಸ್ವೀ ಸ್ತ್ರೀಯ ಹಿಂದೆಯೂ ಒಬ್ಬ ನಿಸ್ಪೃಹ ಗಂಡಸು ಇರುತ್ತಾನೆ. ಈ ಅರಿವು ಸಮಾಜದಲ್ಲಿ ಮೂಡಿದಲ್ಲಿ ಮಹಿಳಾ ದಿನಾಚರಣೆಯ ಸಂಭ್ರಮ ಹೆಚ್ಚುತ್ತದೆ.


ಮೈಸೂರು ಜಿಲ್ಲಾ ಬಿಜೆಪಿ ವಿವಿಧ ಮೋರ್ಚಾಗಳ ಪದಾಧಿಕಾರಿಗಳ ನೇಮಕ

ಮೈಸೂರು, ಫೆ.28– ಮೈಸೂರು ಜಿಲ್ಲೆಯ ವಿವಿಧ ಮಂಡಲಗಳಿಗೆ ಅಧ್ಯಕ್ಷರು ಹಾಗೂ ವಿವಿಧ ಮೋರ್ಚಾಗಳ ಪದಾಧಿಕಾರಿಗಳನ್ನು ನೇಮಕ ಮಾಡಿ ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಆದೇಶ ಹೊರಡಿಸಿದ್ದಾರೆ.

ತಿ.ನರಸೀಪುರ ಮಂಡಲಕ್ಕೆ ಶಿವಕುಮಾರ್ (ಸತ್ಯರಾಜ್), ಹುಣಸೂರು ಗ್ರಾಮಾಂತರಕ್ಕೆ ಕಾಂತರಾಜು, ಹುಣಸೂರು ನಗರಕ್ಕೆ ಟಿ.ಡಿ. ನಾರಾಯಣ್, ಪಿರಿಯಾಪಟ್ಟಣಕ್ಕೆ ರಾಜೇಂದ್ರ, ನಂಜನಗೂಡು ನಗರಕ್ಕೆ ಸಿದ್ದರಾಜು, ನಂಜನಗೂಡು ಗ್ರಾಮಾಂತರಕ್ಕೆ ಹೆಚ್.ಎಂ. ಕೆಂಡಗಣ್ಣಪ್ಪ, ಹೆಚ್.ಡಿ.ಕೋಟೆಗೆ ಶಂಭೇ ಗೌಡ, ಸರಗೂರಿಗೆ ಕೆ.ಪಿ. ಗುರುಸ್ವಾಮಿ, ಕೆ.ಆರ್. ನಗರಕ್ಕೆ ಧರ್ಮ, ಸಾಲಿಗ್ರಾಮಕ್ಕೆ ಸಾ.ರಾ.ತಿಲಕ್ ಅವರನ್ನು ಮಂಡಲ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಎಸ್‌ಟಿ ಮೋರ್ಚಾ ಅಧ್ಯಕ್ಷರಾಗಿ ವರುಣ ವಿಧಾನಸಭಾ ಕ್ಷೇತ್ರದ ಮುದ್ದುಕೃಷ್ಣ, ಪ್ರಧಾನ ಕಾರ್ಯದರ್ಶಿಗಳಾಗಿ ಹೆಚ್.ಡಿ.ಕೋಟೆಯ ನಾಗೇಶ್, ನಂಜನಗೂಡಿನ ಸಿದ್ದರಾಜು, ಯುವ ಮೋರ್ಚಾ ಅಧ್ಯಕ್ಷರಾಗಿ ತಿ.ನರಸೀಪುರದ ಸಾಮ್ರಾಟ್ ಸುಂದರೇಶ್, ಪ್ರಧಾನ ಕಾರ್ಯದರ್ಶಿಗಳಾಗಿ ನಂಜನಗೂಡಿನ ಮಧು, ಹುಣಸೂರಿನ ಕಿರಿಜಾಜಿ ಮಹದೇವ, ಮಹಿಳಾ ಮೋರ್ಚಾ ಅಧ್ಯಕ್ಷೆಯಾಗಿ ಪಿರಿಯಾಪಟ್ಟಣದ ಶ್ರೀಮತಿ ನಳಿನಿಗೌಡ, ಪ್ರಧಾನ ಕಾರ್ಯದರ್ಶಿಗಳಾಗಿ ಹೆಚ್.ಡಿ.ಕೋಟೆಯ ಶ್ರೀಮತಿ ರಾಧಿಕಾ ಶ್ರೀನಾಥ್, ನಂಜನಗೂಡಿನ ಶ್ರೀಮತಿ ನಂದಿನಿ, ಎಸ್‌ಸಿ ಮೋರ್ಚಾ ಅಧ್ಯಕ್ಷರಾಗಿ ತಿ.ನರಸೀಪುರದ ಅನಿಲ್‌ಕುಮಾರ್, ಪ್ರಧಾನ ಕಾರ್ಯದರ್ಶಿಗಳಾಗಿ ಹುಣಸೂರಿನ ಶ್ರೀಮತಿ ವೆಂಕಟಮ್ಮ, ವರುಣ ಕ್ಷೇತ್ರದ ನರಸಿಂಹ ಮೂರ್ತಿ, ಓಬಿಸಿ ಮೋರ್ಚಾ ಅಧ್ಯಕ್ಷರಾಗಿ ನಂಜನಗೂಡಿನ ಬಾಲಚಂದ್ರ, ಪ್ರಧಾನ ಕಾರ್ಯದರ್ಶಿಗಳಾಗಿ ಹುಣಸೂರಿನ ಕುಮಾರ್, ತಿ.ನರಸೀಪುರದ ಸುರೇಶ್, ರೈತ ಮೋರ್ಚಾ ಅಧ್ಯಕ್ಷರಾಗಿ ಕೆ.ಆರ್. ನಗರದ ಮಿರ್ಲೆ ಶ್ರೀನಿವಾಸಗೌಡ, ಪ್ರಧಾನ ಕಾರ್ಯದರ್ಶಿಗಳಾಗಿ ನಂಜನಗೂಡಿನ ಮಹೇಶ್‌ಬಾಬು, ತಿ.ನರಸೀಪುರದ ಗೂಳಿ ಮಹೇಶ್ ಅವರನ್ನು ನೇಮಕ ಮಾಡಲಾಗಿದೆ.

ಎಂ.ಜಿ.ನಯನ ಅವರಿಗೆ ಪಿಹೆಚ್.ಡಿ ಪದವಿ



ಮೈಸೂರು, ಫೆ.28– ಮೈಸೂರಿನ ಹೆಬ್ಬಾಳು ನಿವಾಸಿ ಹಾಗೂ ನಗರದ ಮಹಾರಾಜ ಕಾಲೇಜಿನ ಉಪನ್ಯಾಸಕಿಯಾದ ಎಂ.ಜಿ. ನಯನ ಅವರು ಡಾ.ಎಸ್.ಜೆ. ಮಂಜುನಾಥ್ ಅವರ ಮಾರ್ಗದರ್ಶನದಲ್ಲಿ ನಿರ್ವಹಣೆ ವಿಜ್ಞಾನ (Organizational Commitment and Employee Performance: A Study of Select Information Technology Companies in Bangalore) ವಿಷಯ ಕುರಿತು ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧ ವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಕುಲಸಚಿವ (ಪರೀಕ್ಷಾಂಗ) ಪ್ರೊ.ಕೆ.ಎಂ.ಮಹದೇವನ್ ತಿಳಿಸಿದ್ದಾರೆ. ನಯನ ಹೆಬ್ಬಾಳಿನ ನಿವಾಸಿ ಗಿರೀಗೌಡ ಮತ್ತು ಪ್ರಮೀಳಾ ದಂಪತಿಯ ಪುತ್ರಿ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಉತ್ತಮ ನೈರ್ಮಲ್ಯದಿಂದ ಮಾತ್ರ ಆರೋಗ್ಯ ರಕ್ಷಣೆ



ಮೈಸೂರು, ಫೆ. 28– ಬಾಸುದೇವ ಸೋಮಾನಿ ಕಾಲೇಜಿನ ಎನ್.ಎಸ್.ಎಸ್. ಹಾಗೂ ರೆಡ್ ಕ್ರಾಸ್ ವತಿಯಿಂದ ನೈರ್ಮಲ್ಯ ಹಾಗೂ ಆರೋಗ್ಯ ರಕ್ಷಣೆ ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಐ.ಇ.ಟಿ ಸಂಸ್ಥೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹಾಗೂ ಮ್ಯಾನೇಜಿಂಗ್ ಟ್ರಸ್ಟಿಗಳಾದ ಪಿ. ಗೀತಾಂಜಲಿ ನೇರವೇರಿಸಿ ಮಾತನಾಡುತ್ತಾ, ಆರೋಗ್ಯವೇ ಭಾಗ್ಯ. ಪ್ರತಿಯೊಬ್ಬರು ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ನಮ್ಮ ಸುತ್ತಮುತ್ತಲಿನ ನೈರ್ಮಲ್ಯವನ್ನು ಕಾಪಾಡಿಕೊಂಡು ನೆರೆಹೊರೆಯವರಿಗೂ ಕೂಡ ಅರಿವು ಮೂಡಿಸಬೇಕೆಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಡಾ.ಶೃತಿ.ಎಂ. ಆಯುರ್ವೇದ ಸ್ತ್ರೀರೋಗ ತಜ್ಞರು, ಶ್ರೀ ಧನ್ವಂತರಿ ಆಯುರ್ವೇದಾಲಯ ಮೈಸೂರು ಇವರು, ಆಧುನಿಕ ಕಾಲದಲ್ಲಿ ಎಲ್ಲರೂ ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ಕಾಳಜಿ ವಹಿಸುವುದು ತುಂಬಾ ಮುಖ್ಯವಾಗಿದೆ. ಪ್ರತಿಯೊಬ್ಬರು ತಮ್ಮ ಆರೋಗ್ಯ ಮತ್ತು ನೈರ್ಮಲ್ಯವನ್ನು ಕಾಪಾಡಿಕೊಳ್ಳಲು ಮುಂದಾಗಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ. ಎಂ. ಮಹದೇವಸ್ವಾಮಿ, ಪ್ರಸ್ತುತದಲ್ಲಿ ನಾನಾರೋಗಗಳು ದೇಶದಲ್ಲಿ ಹರಡುತ್ತಿವೆ. ಅದ್ದರಿಂದ ನಾವು ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು ದೊಡ್ಡ ಸವಾಲಾಗಿದೆ. ಹಾಗಾಗಿ ಪ್ರತಿಯೊಬ್ಬರು ತಮ್ಮ ಹಾಗೂ ಕುಟುಂಬದವರ ಆರೋಗ್ಯ ರಕ್ಷಣೆಗೆ ಕಾಳಜಿ ವಹಿಸುವಂತೆ ತಿಳಿಸಿದರು. ಡಾ.ಟಿ. ರಮೇಶ್. ಸ್ವಾಗತಿಸಿದರು. ವಿದ್ಯಾರ್ಥಿನಿಯಾದ ಋಷಿನಾರಾಯಣ್ ದಾಸ್ ನಿರೂಪಿಸಿದರು.

ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಸಮೀಕ್ಷೆ

ಪಾಲಿಕೆಯ 650 ಸೇರಿ ಜಿಲ್ಲೆಯಾದ್ಯಂತ 3000ಕ್ಕೂ ಹೆಚ್ಚು ಸಿಬ್ಬಂದಿಗಳಿಂದ ಮನೆ-ಮನೆಗೆ ತೆರಳಿ ಮಾಹಿತಿ ಸಂಗ್ರಹ

ಮೈಸೂರು, ಫೆ. 28(ಆರ್‌ಕೆ)– ರಾಜ್ಯ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳು ಫಲಾನುಭವಿಗಳಿಗೆ ತಲುಪುತ್ತಿರುವ ಬಗ್ಗೆ ಖಾತರಿಪಡಿಸಿಕೊಳ್ಳಲು ಸಮೀಕ್ಷಾ ಕಾರ್ಯ ಇಂದಿನಿಂದ ಆರಂಭವಾಗಿದೆ. ಲೋಕಸಭಾ ಚುನಾವಣೆಗೆ ಮುಹೂರ್ತ ನಿಗದಿಯಾಗುವ ಮೊದಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರವು ರಾಜ್ಯದಾದ್ಯಂತ ಗ್ಯಾರಂಟಿ ಯೋಜನೆಗಳ ಸಮೀಕ್ಷೆ ಆರಂಭಿಸಿದೆ. ಫೆಬ್ರವರಿ 22ರಂದು ರಾಜ್ಯ ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಫೆಬ್ರವರಿ 27ರಂದು ಅಧಿಕೃತ ಜ್ಞಾಪನ ಹೊರಡಿಸಿ ಸಮೀಕ್ಷೆ ಕಾರ್ಯ ಆರಂಭಿಸಿದ್ದಾರೆ.

ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ, ಯವನಿಧಿ ಮತ್ತು ಅನ್ನಭಾಗ್ಯ ಯೋಜನೆಗಳ ಸೌಲಭ್ಯಗಳು ಪ್ರತಿಯೊಬ್ಬ ಅರ್ಹ ಫಲಾನುಭವಿಗಳಿಗೆ ತಲುಪುತ್ತಿರುವ ಬಗ್ಗೆ ಖಾತರಿಪಡಿಸಿಕೊಳ್ಳಲು ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ 65 ವಾರ್ಡ್‌ಗಳಲ್ಲಿ ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹಿಸಿ ಸಾಫ್ಟ್‌ವೇರ್‌ಗೆ ಮೊಬೈಲ್ ಫೋನ್‌ನಿಂದ ಅಪ್‌ಲೋಡ್ ಮಾಡುವ ಕಾರ್ಯವನ್ನು ಅಧಿಕಾರಿಗಳು ಹಾಗೂ ಸಿಬ್ಬಂದಿ ಇಂದಿನಿಂದ ಆರಂಭಿಸಿದ್ದಾರೆ. ಪಾಲಿಕೆಯ ಹೆಚ್ಚುವರಿ ಆಯುಕ್ತರಾದ ಎಸ್. ಕುಸುಮಾಕುಮಾರಿ ಮೇಲುಸ್ತುವಾರಿಯಲ್ಲಿ ವಲಯ ಆಯುಕ್ತರು ಮತ್ತು ಅಭಿವೃದ್ಧಿ ಅಧಿಕಾರಿಗಳನ್ನು ಮೇಲ್ವಿಚಾರಣಾಧಿಕಾರಿಯನ್ನಾಗಿ ನಿಯೋಜಿಸಿ ಪ್ರತೀ ವಾರ್ಡ್‌ಗೆ 10 ಮಂದಿಯಂತೆ ಕಂದಾಯಾಧಿಕಾರಿಗಳು, ಇಂಜಿನಿಯರ್, ವರ್ಕ್ ಇನ್ಸ್‌ಪೆಕ್ಟರ್‌ಗಳು, ಕರ ವಸೂಲಿಗಾರರು, ಮೀಟರ್ ರೀಡರ್‌ಗಳು, ಕಂಪ್ಯೂಟರ್ ಆಪರೇಟರಗಳನ್ನು ಗ್ಯಾರಂಟಿ ಯೋಜನೆ ಸಮೀಕ್ಷಾ ಕಾರ್ಯಕ್ಕೆ ನಿಯೋಜಿಸಲಾಗಿದೆ.





ಮೈಸೂರು ನಗರದಲ್ಲಿ ಮನೆ ಮನೆಗೆ ಭೇಟಿ ನೀಡಿ, ಗ್ಯಾರಂಟಿ ಯೋಜನೆ ತಲುಪಿಸುತ್ತಿರುವ ಬಗ್ಗೆ ಅಧಿಕಾರಿಗಳು ಮಾಹಿತಿ ಕಲೆ ಹಾಕುತ್ತಿರುವುದನ್ನು ಕಾಣಬಹುದು.

ಪಾಲಿಕೆಯ 650, ಆರೋಗ್ಯ ಇಲಾಖೆಯ ಆಶಾ ಕಾರ್ಯಕರ್ತೆಯರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಅಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರು, ಪಂಚಾಯ್ತಿ, ನಗರಸಭೆ, ಪಟ್ಟಣ ಪಂಚಾಯ್ತಿ ಸಿಬ್ಬಂದಿ ಹಾಗೂ ಅಧಿಕಾರಿಗಳು ಸೇರಿದಂತೆ ಜಿಲ್ಲೆಯ ಸುಮಾರು 3000ಕ್ಕೆ ಹೆಚ್ಚು ಮಂದಿ ಸಮೀಕ್ಷಾ ಕಾರ್ಯದಲ್ಲಿ ನಿರತರಾಗಿದ್ದಾರೆ. ಪಾಲಿಕೆಯ 9 ವಲಯ ಕಚೇರಿ ವ್ಯಾಪ್ತಿಯ 65 ವಾರ್ಡ್‌ಗಳ ಮನೆಗಳಿಗೆ ತೆರಳುವ ಅವರು, ಪಂಚ ಗ್ಯಾರಂಟಿ ಯೋಜನೆಗಳ ಸೌಲಭ್ಯವು ತಲುಪುತ್ತಿದೆಯೇ ಎಂಬುದರ ಬಗ್ಗೆ ಸಾಫ್ಟ್‌ವೇರ್‌ನಲ್ಲಿ ಕೇಳಿರುವ ಮಾಹಿತಿ ಭರ್ತಿ ಮಾಡಿ ಕಳುಹಿಸಬೇಕಾಗಿರುವುದರಿಂದ ಮೊದಲ ದಿನವಾದ ಇಂದು ಮನೆ ಮನೆಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವ ಕಾರ್ಯ ಆರಂಭವಾಯಿತು. ಪರಿಣಾಮ ಮೈಸೂರು ಮಹಾನಗರ ಪಾಲಿಕೆ ಪ್ರಧಾನ ಕಚೇರಿ ಹಾಗೂ 9 ವಲಯ ಕಚೇರಿಗಳಲ್ಲಿ ಅಧಿಕಾರಿಗಳು, ಸಿಬ್ಬಂದಿಗಳಿಲ್ಲದೇ ಕಚೇರಿ ಕೆಲಸಗಳಾಗದೇ ಸಾರ್ವಜನಿಕರಿಗೂ ಯಾವುದೇ ಸೇವೆ ಲಭ್ಯವಾಗದೇ ಪರದಾಡುವಂತಾಗಿದೆ. ಎಲ್ಲರೂ ಸಮೀಕ್ಷೆಗಾಗಿ ಫೀಲ್ಡ್‌ನಲ್ಲಿರುವುದರಿಂದ ಕಚೇರಿಗಳಲ್ಲಿ ಕುರ್ಚಿಗಳು ಖಾಲಿ ಇದ್ದು ಬಿಕೋ ಎನ್ನುತ್ತಿವೆ.

ಹಿಮಾಚಲ ಪ್ರದೇಶಕ್ಕೆ ಟ್ರಬಲ್ ಶೂಟರ್ ಡಿ.ಕೆ. ಶಿವಕುಮಾರ್ ಎಂಟ್ರಿ!

ಉಳಿಯುತ್ತಾ ಕಾಂಗ್ರೆಸ್ ಸರ್ಕಾರ?



ಶಿಮ್ಲಾ: ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಸರ್ಕಾರ ಪತನದ ಅಂಚಿಗೆ ಬಂದು ನಿಂತಿದೆ. ಶತಾಯುಗತಾಯ ಹಿಮಾಚಲ ಪ್ರದೇಶದಲ್ಲಿ ಸರ್ಕಾರವನ್ನು ಉಳಿಸಿಕೊಳ್ಳಲೇಬೇಕು ಎಂದು ಪ್ರಯತ್ನಿಸುತ್ತಿರುವ ಕಾಂಗ್ರೆಸ್ ಹೈಕಮಾಂಡ್, ಟ್ರಬಲ್ ಶೂಟರ್ ಡಿಕೆ ಶಿವಕುಮಾರ್ ಅವರನ್ನು ಅಖಾಡಕ್ಕೆ ಇಳಿಸಿದೆ. ವರಿಷ್ಠರ ಆದೇಶದ ಬೆನ್ನಲ್ಲಿಯೇ ಹಿಮಾಚಲ ಪ್ರದೇಶಕ್ಕೆ ತೆರಳಿರುವ ಡಿಸಿಎಂ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಸರ್ಕಾರ ಉಳಿಸುವ ಪ್ರಯತ್ನದಲ್ಲಿದ್ದಾರೆ.

2001ರಿಂದಲೂ ಕಾಂಗ್ರೆಸ್‌ನಲ್ಲಿ ಟ್ರಬಲ್ ಶೂಟರ್ ಪಾತ್ರವನ್ನು ಡಿಕೆ ಶಿವಕುಮಾರ್ ನಿರ್ವಹಿಸುತ್ತಾ ಬಂದಿದ್ದು, ಹೈಕಮಾಂಡ್ ಈಗ ಹಿಮಾಚಲ ಪ್ರದೇಶದ ಟಾಸ್ಕ್ ಅನ್ನು ನೀಡಿದೆ. ಈಗಾಗಲೇ ಹಿಮಾಚಲ ಪ್ರದೇಶಕ್ಕೆ ತೆರಳಿರುವ ಡಿಕೆ ಶಿವಕುಮಾರ್ ಅವರು ಕಾಂಗ್ರೆಸ್ ಶಾಸಕರ ಜೊತೆ ಮಾತುಕತೆ ನಡೆಸುತ್ತಿದ್ದು, ಅವರನ್ನು ಮನವೊಲಿಸುವ ಪ್ರಯತ್ನ ನಡೆಸಿದ್ದಾರೆ. ಪ್ರಮುಖವಾಗಿ ಬುಧವಾರ ಬೆಳಗ್ಗೆಯಷ್ಟೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವ ವಿಕ್ರಮಾದಿತ್ಯ ಸಿಂಗ್ ಜೊತೆ ಡಿಕೆ ಶಿವಕುಮಾರ್ ಮಾತುಕತೆ ನಡೆಸಲಿದ್ದು, ಬಿಕ್ಕಟ್ಟನ್ನು ಬಗೆಹರಿಸುವ ವಿಶ್ವಾಸ ಹೊಂದಿದ್ದಾರೆ.


ತಮ್ಮ ಎಕ್ಸ್ ಖಾತೆಯಲ್ಲಿ ಡಿಕೆ ಶಿವಕುಮಾರ್ ಈ ಬಗ್ಗೆ ಪ್ರತಿಕ್ರಿಯಿಸಿದ್ದು, ಯಾವುದೇ ಆತಂಕ ಪಡುವ ಅಗತ್ಯವಿಲ್ಲ. ಕಾಂಗ್ರೆಸ್ ಹೈಕಮಾಂಡ್ ನಿರ್ದೇಶನದಂತೆ ಹಿಮಾಚಲ ಪ್ರದೇಶಕ್ಕೆ ತೆರಳುತ್ತಿದ್ದೇನೆ. ಕಾಂಗ್ರೆಸ್ ಶಾಸಕರು ಪಕ್ಷಕ್ಕೆ ನಿಷ್ಠರಾಗಿರುತ್ತಾರೆ ಮತ್ತು ಅವರಿಗೆ ನೀಡಿರುವ ಜನಾದೇಶವನ್ನು ಉಳಿಸಿಕೊಳ್ಳುತ್ತಾರೆ ಎಂಬ ವಿಶ್ವಾಸ ನನಗಿದೆ. ಬಿಜೆಪಿಯು ಅಧಿಕಾರ ಪಡೆಯಲು ಯಾವುದೇ ರೀತಿಯ ಅತಿರೇಕಕ್ಕೆ ಹೋಗಲು ಪ್ರಯತ್ನಿಸುತ್ತಿದೆ. ಪ್ರಜಾಪ್ರಭುತ್ವವನ್ನು ಹಾಗೂ ಜನರು ನೀಡಿರುವ ಜನಾದೇಶವನ್ನು ಹತ್ತಿಕ್ಕಲು ಬಿಜೆಪಿ ಪ್ರಯತ್ನಿಸುತ್ತಿದೆ. ಕುದುರೆ ವ್ಯಾಪಾರ ಸರಿಯಲ್ಲ ಎಂದು ಕಿಡಿಕಾರಿದ್ದಾರೆ.

2017ರಲ್ಲಿ ಗುಜರಾತ್‌ನಿಂದ ರಾಜ್ಯ ಸಭಾ ಚುನಾವಣೆಗೆ ಅಹ್ಮದ್ ಪಟೇಲ್ ಸ್ಪರ್ಧಿಸಿದ್ದರು. ಆಗ ಗುಜರಾತ್‌ನಲ್ಲಿನ ಶಾಸಕರನ್ನು ಬೆಂಗಳೂರಿಗೆ ಕರೆದುಕೊಂಡು ಬಂದು ಡಿಕೆ ಶಿವಕುಮಾರ್ ರಕ್ಷಿಸಿಕೊಂಡಿದ್ದರು. ತೆಲಂಗಾಣದಲ್ಲಿಯೂ ಡಿಕೆ ಶಿವಕುಮಾರ್ ಸ್ಟ್ರಾಟಜಿ ವರ್ಕ್ ಆಗಿದೆ. ಇದೇ ರೀತಿ ಅನೇಕ ಸಮಸ್ಯೆಗಳನ್ನು ಡಿಕೆ ಶಿವಕುಮಾರ್ ಬಗೆಹರಿಸಿದ್ದು, ಈಗ ಹೈಕಮಾಂಡ್ ಹಿಮಾಚಲ ಪ್ರದೇಶದ ಟಾಸ್ಕ್ ನೀಡಿದ್ದು, ಯಶಸ್ವಿಯಾಗುತ್ತಾರಾ ಎಂಬುದನ್ನು ಕಾದು ನೋಡಬೇಕಿದೆ.

ಹಿಮಾಚಲ ಪ್ರದೇಶದಲ್ಲಿ ಏನಾಗ್ತಿದೆ:

2022ರ ವಿಧಾನಸಭಾ ಚುನಾವಣೆಯಲ್ಲಿ 68 ಸದಸ್ಯರ ಸಂಖ್ಯಾಬಲ ಹೊಂದಿರುವ ಹಿಮಾಚಲ ಪ್ರದೇಶ ವಿಧಾನಸಭೆಯಲ್ಲಿ ಕಾಂಗ್ರೆಸ್ 40 ಸ್ಥಾನಗಳನ್ನು ಗೆದ್ದಿತ್ತು. ಅದಲ್ಲದೇ ಮೂವರು ಪಕ್ಷೇತರ ಶಾಸಕರ ಬೆಂಬಲವನ್ನು ಕೂಡ ಪಡೆದಿತ್ತು. ಆದರೆ, ಮಂಗಳವಾರ ನಡೆದ ರಾಜ್ಯಸಭಾ ಚುನಾವಣೆ ವೇಳೆ ಕಾಂಗ್ರೆಸ್‌ನ ಆರು ಶಾಸಕರು ಹಾಗೂ ಮೂವರು ಪಕ್ಷೇತರ ಶಾಸಕರು ಬಿಜೆಪಿ ಅಭ್ಯರ್ಥಿಗೆ ಅಡ್ಡ ಮತದಾನ ಮಾಡಿದ್ದಾರೆ. ಇದರಿಂದ ಸರ್ಕಾರ ಪತನದಂಚಿನಲ್ಲಿದೆ. ಹಿಮಾಚಲ ಪ್ರದೇಶದಲ್ಲಿ ಬಹುಮತಕ್ಕೆ 35 ಸ್ಥಾನಗಳ ಅಗತ್ಯವಿದೆ. ಈ 9 ಶಾಸಕರು ಅಡ್ಡಮತದಾನ ಮಾಡಿರುವುದರಿಂದ ಕಾಂಗ್ರೆಸ್‌ನ ಸಂಖ್ಯಾಬಲ 34ಕ್ಕೆ ಕುಸಿಯಲಿದ್ದು, ಸರ್ಕಾರ ಉಳಿಯುವುದು ಅನುಮಾನ ಎಂಬಂತಾಗಿದೆ.

ಕುಟುಂಬ, ಉದ್ಯೋಗ ಸ್ಥಳವು ನಮ್ಮ ಬದುಕಿನ ಮಹತ್ವದ ಸ್ಥಳಗಳು



ಮೈಸೂರು, ಫೆ. 28– ಬದುಕಿನಲ್ಲಿ ಒತ್ತಡಕ್ಕೆ ಒಳಗಾಗದೆ ಜೀವನವನ್ನು ಸರಳತೆ ಮತ್ತು ಹೊಂದಾಣಿಕೆಯಿಂದ ರೂಪಿಸಿಕೊಂಡರೆ ಕುಟುಂಬ ಮತ್ತು ಉದ್ಯೋಗ ಸ್ಥಳದಲ್ಲಿ ಸುಂದರವಾದ ಸಂಬಂಧಗಳನ್ನು ಗಳಿಸಬಹುದು ಎಂದು ಪ್ರಖ್ಯಾತ ಹಾಸ್ಯ ಕಲಾವಿದ ಮೈಸೂರು ಆನಂದ್ ಕರೆ ನೀಡಿದರು.

ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ ಉದ್ಯೋಗಿ ಕ್ಷೇಮ ಪಾಲನಾ ಸಂಘವು ಉದ್ಯೋಗಿಗಳಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡುತ್ತ, ಆಧುನಿಕ ಯುಗವು ತಂತ್ರಜ್ಞಾನದ ಯುಗವಾಗಿದ್ದು, ನಮ್ಮ ಬದುಕಿನಲ್ಲಿ ಸಂಬಂಧಗಳಿಗೆ ಬೆಲೆ ನೀಡದೆ ಎಲ್ಲವನ್ನು ವ್ಯವಹಾರಿಕ ಮನೋಭಾವನೆಯಿಂದ ಕಾಣುತ್ತಾ ನಮ್ಮ ವ್ಯಕ್ತಿತ್ವವನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಉದ್ಯೋಗ ಸ್ಥಳವು ನಮ್ಮ ಬದುಕಿಗೆ ಮಹತ್ವದ ಸ್ಥಳವಾಗಿದ್ದು, ಪ್ರೀತಿ, ವಿಶ್ವಾಸ, ಅನ್ಯೋನ್ಯತೆಯಿಂದ ಕಾರ್ಯ ನಿರ್ವಹಿಸುವ ಮನಸ್ಸು ಮಾಡಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲ ಪ್ರೊ. ಸಾಯಿನಾಥ್ ಮಲ್ಲಿಗೆಮಾಡು, ಸಂತೋಷದ ಬದುಕಿಗೆ ಎಲ್ಲರೂ ಒತ್ತಡ ರಹಿತ ಕಾರ್ಯ ನಿರ್ವಹಣೆ ಮಾಡುವುದರೊಂದಿಗೆ ಕಾರ್ಯಕ್ಷಮತೆಯನ್ನು ಹೆಚ್ಚಿಸಬಹುದು. ಪ್ರತಿದಿನವನ್ನು ನಗುವಿನೊಂದಿಗೆ ಪ್ರಾರಂಭಿಸಿ ಕಾರ್ಯನಿರ್ವಹಣೆ ಮತ್ತು ಕುಟುಂಬ ನಿರ್ವಹಣೆ ಮಾಡಿದಾಗ ಬಹುಪಾಲು ಸಮಸ್ಯೆಗಳು ದೂರವಾಗುತ್ತದೆ. ಆದ್ದರಿಂದ ಉದ್ಯೋಗಿಗಳು ಸಾಮರಸ್ಯದೊಂದಿಗೆ ಬೆರೆತು ಕೆಲಸ ಮಾಡಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಂಚಾಲಕರಾದ ಡಾ ದೇವಕಿ ಅವರು ಉಪಸ್ಥಿತರಿದ್ದರು. ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಪ್ರೊ.ಬೃಂದಾ ಕಾರ್ಯಕ್ರಮ ನಿರ್ವಹಿಸಿದರು. ಇಂಗ್ಲೀಷ್ ಉಪನ್ಯಾಸಕ ಕುಮಾರಿ ವಾಣಿ ಸ್ವಾಗತಿಸಿ, ಪ್ರತಿಮಾ ಅವರು ವ್ಯಕ್ತಿ ಪರಿಚಯ ಮಾಡಿಕೊಟ್ಟರು.

ಸಿದ್ಧ ಸಮಾಧಿ ಯೋಗ ಶಿಬಿರ

ಮೈಸೂರು, ಫೆ. 28–ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಋಷಿ ಸಂಸ್ಕೃತಿ ವಿದ್ಯಾಕೇಂದ್ರದಲ್ಲಿ ಮಾ.3ರಂದು ಸಂಜೆ 6ಕ್ಕೆ ಸಿದ್ಧ ಸಮಾಧಿ ಯೋಗ ಶಿಬಿರದ ಬಗ್ಗೆ ಉಚಿತ ಪರಿಚಯ ಕಾರ್ಯಕ್ರಮ ಏರ್ಪಡಿಸಲಾಗಿದೆ. ಮಾ. 4 ರಿಂದ 14 ದಿನಗಳ ಕಾಲ ಸಿದ್ಧ ಸಮಾಧಿ ಯೋಗ ಶಿಬಿರ ಪ್ರಾರಂಭವಾಗಲಿದೆ. ಹೆಚ್ಚಿನ ಮಾಹಿತಿಗೆ ಹೆಚ್.ಎಸ್.ರಮೇಶ್‌ಚಂದ್ರ, ಮೊ.9448458050, 8618762110 ಸಂಪರ್ಕಿಸಬಹುದು.



ಮೈಸೂರಿನ ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯದಲ್ಲಿ ಮಂಗಳವಾರ ಏರ್ಪಡಿಸಿದ್ದ ಸಾಂಸ್ಕೃತಿಕ ಉತ್ಸವವನ್ನು ಖ್ಯಾತ ರಂಗಕರ್ಮಿ ಮೈಮ್ ರಮೇಶ್ ಉದ್ಘಾಟಿಸಿದರು. ಕಾಲೇಜಿನ ಪ್ರಾಚಾರ್ಯ ಡಾ.ಕೆ.ಎಸ್.ರಾಧಾಕೃಷ್ಣ ರಾಮರಾವ್ ಹಾಗೂ ಜಾದು ಕಲಾವಿದೆ ಸುಮಾ ರಾಜಕುಮಾರ್ ಇದ್ದಾರೆ.

ದಿವ್ಯಾಂಗರ ಅಂತರ್ಗತ ಶಿಕ್ಷಣ ಕುರಿತು ಪ್ರಾಧ್ಯಾಪಕರಿಗೆ ತರಬೇತಿ ಕಾರ್ಯಾಗಾರ

ಮೈಸೂರು, ಫೆ. 28– ಶಿಕ್ಷಣವು ಸಮಾಜದ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೂ ಸಮಾನವಾಗಿ ದೊರಕುವಂತೆ ಮಾಡುವ ಜವಾಬ್ದಾರಿ ಎಲ್ಲಾ ಪ್ರಾಧ್ಯಾಪಕರ ಆದ್ಯ ಕರ್ತವ್ಯವಾಗಿದೆ ಎಂದು ಮೈಸೂರು ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕ ಪ್ರೊ. ಡಿ. ಆನಂದ್ ಹೇಳಿದರು.

ಸಮರ್ಥನಂ ಅಂಗವಿಕಲರ ಸಂಸ್ಥೆ ಹಾಗೂ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣೆ ಸಂಯುಕ್ತ ಆಶ್ರಯದಲ್ಲಿ ಮೈಸೂರಿನ ಮಹಾರಾಣಿ ಕಾಲೇಜಿನ ಸಭಾಂಗಣದಲ್ಲಿ ಮೈಸೂರು ವಿಭಾಗದ ಕಾಲೇಜು ಪ್ರಾಧ್ಯಾಪಕರಿಗೆ ಅಂತರ್ಗತ ಶಿಕ್ಷಣ ಮತ್ತು ವಿಕಲಚೇತನತೆ ಬಗ್ಗೆ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. ಅಲ್ಲದೆ ಪ್ರಾಧ್ಯಾಪಕರು ಕಲಿಸುವ ಪಾಠವು ವಿಧ್ಯುಕ್ತವಾಗಿ ತಲುಪಬೇಕು ಎಂದರು.



ಅಂಗವಿಕಲತೆ ಎಂಬುದು ಶಾಪವಲ್ಲ. ಅಂಗವಿಕಲತೆ ಎಂಬುದನ್ನು ಮರೆತು ಸಮಾಜದ ಆಸ್ತಿಯಾಗಿ ವಿದ್ಯಾರ್ಥಿಗಳನ್ನು ಪರಿವರ್ತನೆ ಮಾಡಬೇಕಾಗಿದೆ. 2015ರಲ್ಲಿ ವಿಶ್ವಸಂಸ್ಥೆ ಘೋಷಣೆ ಮಾಡಿರುವ 17 ಸುಸ್ಥಿರ ಅಭಿವೃದ್ಧಿಗಳಲ್ಲಿ ಆರ್ಥಿಕವಾಗಿ, ಶಕ್ಷಣಿಕವಾಗಿ ವಿಶೇಷ ಚೇತನ ಮಕ್ಕಳನ್ನು ಬಲಪಡಿಸುವಲ್ಲಿ ಸಹಕಾರಿಯಾಗಿದೆ ಎಂದರು.

ಸಮರ್ಥನಂ ಸಂಸ್ಥೆಯ ಟ್ರಸ್ಟಿ ಶ್ರೀಮತಿ ವಾಸಂತಿ ಸವಣೂರು ಮಾತನಾಡಿ, ಸಮರ್ಥನಂ ಅಂಗವಿಕಲರ ಸಂಸ್ಥೆಯು ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಸ್ವಯಂ ಸೇವಾ ಸಂಸ್ಥೆಯಾಗಿದ್ದು, 1997 ರಿಂದ ಭಾರತದಲ್ಲಿ ದೃಷ್ಟಿಹೀನರ ವಿಕಲಚೇತನರು ಮತ್ತು ಅವಕಾಶವಂಚಿತರ ಸಬಲೀಕರಣಕ್ಕಾಗಿ ಕಾರ್ಯನಿರ್ವಹಿಸುತ್ತಿದೆ. ಈ ಸಂಸ್ಥೆಯು ಗುಣಮಟ್ಟದ ಶಿಕ್ಷಣ, ವಸತಿ ಸೌಲಭ್ಯ, ಪೌಷ್ಟಿಕ ಆಹಾರ, ವೃತ್ತಿಪರ ತರಬೇತಿ ಮತ್ತು ಪುನರ್ವಸತೀಕರಣದ ಸೌಲಭ್ಯಗಳನ್ನು ಒದಗಿಸುವ ಮೂಲಕ ವಿಕಲಚೇತನರ ವೈಯಕ್ತಿಕ ಸ್ವಾವಲಂಬನೆಯನ್ನು ಸಾಧಿಸುವುದಾಗಿದೆ ಎಂದರು.

ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಹೇಮಂತ್ ಕುಮಾರ್ ಮತ್ತು ಡಾ. ವಿಕ್ಟರಿ ಅವರು ಅಂತರ್ಗತ ಶಿಕ್ಷಣ ಹಾಗೂ ವಿಕಲಚೇತನ ಶಿಕ್ಷಣ ಕುರಿತು ತರಬೇತಿ ನೀಡಿದರು. ಕಾರ್ಯಾಗಾರಕ್ಕೆ ಮೈಸೂರು ವಿಭಾಗದ ವಿವಿಧ ಕಾಲೇಜುಗಳಿಂದ 110ಕ್ಕೂ ಹೆಚ್ಚು ಪ್ರಾಧ್ಯಾಪಕರು ಭಾಗವಹಿಸಿದ್ದರು.

ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ.ಆರ್.ನಳಿನಿ ವಹಿಸಿದ್ದರು. ಕಾರ್ಯಕ್ರಮದಲ್ಲಿ ಐ.ಕ್ಯೂ.ಎ.ಸಿ ಸಂಚಾಲಕರಾದ ಡಾ. ಮಂಜುನಾಥ್, ದಿವ್ಯಾಂಗ ಸಬಲೀಕರಣ ಸಮಿತಿಯ ಡಾ. ನಾಗರಾಜು, ಪ್ರೊ.ಜಯಪ್ರಕಾಶ್ ಹೆಗ್ಡೆ, ಸಮರ್ಥನಂ ಸಂಸ್ಥೆಯ ಗುರು ರಾಘವೇಂದ್ರ, ರಾಘವೇಂದ್ರ, ಮೈಸೂರು ವಿಭಾಗದ ಮುಖ್ಯಸ್ಥ ಶಿವರಾಜು, ರಕ್ಷಾ, ಸುಹಾಸ್, ಜಿ.ಬಿ. ಶಿವಕುಮಾರ್, ನಿರ್ಮಲ ಮತ್ತಿತರರು ಭಾಗವಹಿಸಿದ್ದರು.

ಎಡಪಕ್ಷಗಳೊಂದಿಗೆ ಮೈತ್ರಿ, ಆದರೆ ಕೇರಳದಲ್ಲಿ ಪ್ರತ್ಯೇಕ ಸ್ಪರ್ಧೆ: ಕಾಂಗ್ರೆಸ್

ನವದೆಹಲಿ: ನಾವು ವಿವಿಧ ರಾಜ್ಯಗಳಲ್ಲಿ ಎಡಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡಿದ್ದೇವೆ. ಆದರೆ ಕೇರಳದಲ್ಲಿ ಚುನಾವಣೆಯನ್ನು ಪ್ರತ್ಯೇಕವಾಗಿ ಎದುರಿಸುತ್ತೇವೆ ಎಂದು ಕಾಂಗ್ರೆಸ್ ಹೇಳಿದೆ.

ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜ ಅವರ ಪತ್ನಿ, ಆನಿರಾಜ ಅವರನ್ನು ರಾಹುಲ್ ಗಾಂಧಿ ಪ್ರತಿನಿಧಿಸುತ್ತಿರುವ ವಯನಾಡು ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಸಿರುವ ಬಗ್ಗೆ ಕಾಂಗ್ರೆಸ್ ಹೀಗೆ ಪ್ರತಿಕ್ರಿಯೆ ನೀಡಿದೆ. ಈ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಎಡಪಕ್ಷಗಳು ಇಂಡಿಯಾ ಮೈತ್ರಿಕೂಟದ ಬಹುದೊಡ್ಡ ಪಾಲುದಾರರು. ಆದರೆ ಇದು ರಾಜ್ಯಗಳಲ್ಲಿ, ವಿಶೇಷವಾಗಿ ಕೇರಳದಲ್ಲಿ ಪರಸ್ಪರ ಸ್ಪರ್ಧಿಸುವುದನ್ನು ತಡೆಯುವುದಿಲ್ಲ ಎಂದು ಹೇಳಿದರು. ವಯನಾಡು ಕ್ಷೇತ್ರಕ್ಕೆ ಕಾಂಗ್ರೆಸ್ ತನ್ನ ಅಭ್ಯರ್ಥಿಯನ್ನು ಘೋಷಿಸಿಲ್ಲ. ಈ ಕ್ಷೇತ್ರದಿಂದ ರಾಹುಲ್ ಗಾಂಧಿ ಸ್ಪರ್ಧೆ ಮಾಡಲಿದ್ದಾರೆಯೇ ಎನ್ನುವ ಪ್ರಶ್ನೆಗೆ ಉತ್ತರಿಸಿದ್ದ ಆನಿರಾಜಾ, ಪ್ರತಿಪಕ್ಷದ ನಿರ್ಧಾರ ಅವರಿಗೆ ಬಿಟ್ಟಿದ್ದು ಎಂದರು.

ಬೆಂಗಳೂರು ಸುತ್ತಾಡಿದ ಬ್ರಿಟನ್‌ನ ಪ್ರಥಮ ಮಹಿಳೆ ಅಕ್ಷತಾ ಮೂರ್ತಿ

ಸರಳತೆಗೆ ವ್ಯಾಪಕ ಮೆಚ್ಚುಗೆ, ಭದ್ರತೆ ಬಗ್ಗೆ ನೆಟ್ಟಿಗರ ಕಳವಳ





ಬೆಂಗಳೂರು: ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರ ಪತ್ನಿ, ಬ್ರಿಟನ್‌ನ ಪ್ರಥಮ ಮಹಿಳೆ ಅಕ್ಷತಾ ಮೂರ್ತಿ ಅವರು ಇತ್ತೀಚೆಗೆ ಬೆಂಗಳೂರಿಗೆ ಭೇಟಿ ನೀಡಿದ್ದು, ಈ ವೇಳೆ ಪುಸ್ತಕ ಮೇಳವೊಂದರಲ್ಲಿ ಸಾಮಾನ್ಯ ಮಹಿಳೆಯಂತೆ ಪುಸ್ತಕಗಳ ಹುಡುಕಾಟ ನಡೆಸಿದ್ದಕ್ಕೆ ವ್ಯಾಪಕ ಮೆಚ್ಚುಗೆಗಳು ವ್ಯಕ್ತವಾಗಿದ್ದವು. ಈ ಕುರಿತ ವಿಡಿಯೋಗಳೂ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದವು. ಆದರೆ, ಇದರ ಜೊತೆ ಜೊತೆಗೆ ನೆಟ್ಟಿಗರು ಅಕ್ಷತಾ ಅವರ ಭದ್ರತೆ ಬಗ್ಗೆಯೂ ಕಳವಳ ವ್ಯಕ್ತಪಡಿಸುತ್ತಿದ್ದಾರೆ. ಅಕ್ಷತಾ ಅವರು ಬೆಂಗಳೂರಿನ ರಾಘವೇಂದ್ರ ಮಠದ ರಸ್ತೆಯಲ್ಲಿ ಕುಟುಂಬ ಸಮೇತರಾಗಿ ಪುಸ್ತಕ ಮೇಳವೊಂದಕ್ಕೆ ಭೇಟಿ ನೀಡಿದ್ದು, ಪುಸ್ತಕಗಳಿಗಾಗಿ ಹುಡುಕಾಟ ನಡೆಸುತ್ತಿರುವ ವಿಡಿಯೋ ಹಾಗೂ ಜಯನಗರದಲ್ಲಿ ತಂದೆ ನಾರಾಯಣಮೂರ್ತಿಯವರೊಂದಿಗಿನ ಫೋಟೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಸೋಮವಾರ ಈ ವಿಡಿಯೋ, ಫೋಟೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಲಾಗಿದ್ದು, ಈ ವಿಡಿಯೋ ಹಾಗೂ ಫೋಟೋವನ್ನು ಸಾವಿರಾರು ಜನರು ವೀಕ್ಷಣೆ ಮಾಡಿ, ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದರ ಜೊತೆಗೆ ಕೆಲವರು ಭದ್ರತೆ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಅಕ್ಷತಾ ಅವರಿಗೆ ವಿವಿಐಪಿ ವ್ಯವಸ್ಥೆಗಳನ್ನು ಕಲ್ಪಿಸಬೇಕಿತ್ತು ಎಂದು ಹೇಳಿದ್ದಾರೆ.

ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾತನಾಡಿ, ಸರ್ಕಾರದ ಸೂಚನೆಗಳ ಆಧಾರದ ಮೇಲಷ್ಟೇ ಭದ್ರತೆ ಒದಗಿಸಲು ಸಾಧ್ಯವಾಗುತ್ತದೆ ಎಂದು ಹೇಳಿದ್ದಾರೆ. ಅಕ್ಷತಾ ಅವರು ವೈಯಕ್ತಿಕವಾಗಿ ನಗರಕ್ಕೆ ಭೇಟಿ ನೀಡಿದ್ದು, ಅಧಿಕೃತವಾಗಿ ಭೇಟಿ ನೀಡಿರಲಿಲ್ಲ. ಅಧಿಕೃತ ಭೇಟಿಯಲ್ಲಿದ್ದರೆ ಭದ್ರತೆಯು ವಿಭಿನ್ನವಾಗಿರುತ್ತಿತ್ತು. ಆದಾಗ್ಯೂ, ಭದ್ರತಾ ನಿಯಮಗಳು ಸರ್ಕಾರದ ನಿರ್ದೇಶನಗಳು ಮತ್ತು ಕೇಂದ್ರ ಸಂಸ್ಥೆಗಳ ಮೇಲೆ ಅವಲಂಬಿತವಾಗಿರುತ್ತದೆ ಎಂದು ತಿಳಿಸಿದ್ದಾರೆ.

ಮಾಹಿತಿ ತಂತ್ರಜ್ಞಾನದಲ್ಲಿ ಕೃತಕ ಬುದ್ಧಿಮತ್ತೆ ಪ್ರಮುಖ ಪಾತ್ರ ವಹಿಸುತ್ತಿದೆ

ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ

ಮೈಸೂರು, ಫೆ.28(ಎಂಟಿವೈ)– ಪ್ರಸ್ತುತ ಸಂದರ್ಭದಲ್ಲಿ ಮಾಹಿತಿ–ತಂತ್ರಜ್ಞಾನದಲ್ಲಿ ಕೃತಕ ಬುದ್ಧಿಮತ್ತೆ (ಎಐ)ಯು ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ವಿಶ್ರಾಂತ ಕುಲಪತಿ ಪ್ರೊ.ಕೆ. ಚಿದಾನಂದಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಬುಧವಾರ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಆಯೋಜಿಸಿದ್ದ 'ಕೃತಕ ಬುದ್ಧಿವಂತಿಕೆ: ಒಂದು ನೋಟ' ಕುರಿತ ವಿಜ್ಞಾನ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾವೀಗ ಜ್ಞಾನಯುಗದಲ್ಲಿ ಇದ್ದೇವೆ. ಈ ಜಗತ್ತು ವೆಬ್, ಕ್ಲೌಡ್, ಐಒಟಿ ಮುಂತಾದ ಯಾಂತ್ರಿಕ ಕಲಿಕೆಯ ಸಹಭಾಗಿತ್ವದಲ್ಲಿ ನಡೆಯುತ್ತಿದೆ. ಒಂದು ರೀತಿ ಜ್ಞಾನವೇ ವ್ಯವಹಾರಿಕ ಸರಕಿನಂತೆ ಮಾರ್ಪಟ್ಟಿದೆ. ಜಗತ್ತಿನಾದ್ಯಂತ ಕೋಟ್ಯಂತರ ರೂ. ವಹಿವಾಟು ನಡೆಯುತ್ತಿದೆ. ಹಿಂದಿನ ಕಾಲದಲ್ಲಿ ಸರಸ್ವತಿ ಪುತ್ರರು ಕೇವಲ ಸರಸ್ವತಿ ಪುತ್ರರಾಗಿಯೇ ಇರುತ್ತಿದ್ದರು. ಆದರೆ ಈಗ ತಂತ್ರಜ್ಞಾನದ ಅವಕಾಶಗಳನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಂಡು ಸರಸ್ವತಿ ಪುತ್ರರು ಲಕ್ಷ್ಮೀ ಪುತ್ರರಾಗುತ್ತಿದ್ದಾರೆ. ಜಗತ್ತಿನ ಉತ್ತಮ ಪುಸ್ತಕಗಳ್ನು ಒಂದೇ 'ವೇದಿಕೆ'ಯಲ್ಲಿ ದೊರೆಯುವಂತಹ ಸಾಫ್ಟ್‌ವೇರ್ ತಯಾರು ಮಾಡಿದ ಎಂಜಿನಿಯರ್ ಈಗ 180 ಮಿಲಿಯನ್ ಒಡೆಯನಾಗಿದ್ದಾನೆ ಎಂದರು.



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಹಾಲ್‌ನಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಬುಧವಾರ ಆಯೋಜಿಸಿದ್ದ 'ಕೃತಕ ಬುದ್ಧಿವಂತಿಕೆ: ಒಂದು ನೋಟ' ಕುರಿತ ವಿಜ್ಞಾನ ಉಪನ್ಯಾಸ ಕಾರ್ಯಕ್ರಮವನ್ನು ವಿಶ್ರಾಂತ ಕುಲಪತಿ ಪ್ರೊ. ಕೆ.ಚಿದಾನಂದಗೌಡ ಉದ್ಘಾಟಿಸಿದರು.

ತಂತ್ರಜ್ಞಾನದ ವಿಷಯದಲ್ಲಿ ಶತಮಾನಗಳ ಹಿಂದಿನಿಂದಲೂ ಹಲವು ರೀತಿಯ ಕ್ರಾಂತಿಕಾರಕ ಬದಲಾವಣೆಗಳು ಆಗುತ್ತಲೇ ಬಂದಿವೆ. 21ನೇ ಶತಮಾನದಲ್ಲಿ ಕಂಪ್ಯೂಟರ್ ಕೇಂದ್ರಿತ ವಿಷಯಗಳು ಮಹತ್ವವನ್ನು ಪಡೆದು ಕೊಂಡಿವೆ. ಚಾಟ್ ಜಿಪಿಟಿಯಂತೆ ಬೇರೆ–ಬೇರೆ ಆ್ಯಪ್‌ಗಳು ಬಂದಿದ್ದು, ಗೂಗಲ್ ಕಂಪೆನಿಯು ಸಿದ್ಧಪಡಿಸಿರುವ 'ಜೆಮಿನಿ'ಯು ಬರವಣಿಗೆ, ಕೋಡಿಂಗ್, ಚಿತ್ರಗಳು, ಧ್ವನಿಯನ್ನು ಗ್ರಹಿಸಿಕೊಂಡು ಕಾರ್ಯನಿರ್ವಹಿಸುತ್ತಿದೆ. ಡಾಲ್–ಇ ಎಂಬ ಆ್ಯಪ್ ನಾವು ಸಲಹೆ–ಸೂಚನೆ ನೀಡಿದರೆ ಸಾಕು ಚಿತ್ರ–ಕಲಾಕೃತಿಯನ್ನು ರಚನೆ ಮಾಡಿಕೊಡುತ್ತದೆ. ಮೊದಲೆಲ್ಲ ಅಷ್ಟ ಲಕ್ಷ್ಮೀಯರು ಎನ್ನುತ್ತಿದ್ದರು. ಆದರೆ ಈಗ ಇನ್ನು ಇಬ್ಬರು ಲಕ್ಷ್ಮೀಯರು ಅಂದರೆ ವೆಬ್ ಮಾಹಿತಿಯ ಜಾಲ ಲಕ್ಷ್ಮೀ, ಕೃತಕ ಬುದ್ಧಿಮತ್ತೆಯ ಬುದ್ಧಿಲಕ್ಷ್ಮೀ ಸೇರಿ ದಶ ಲಕ್ಷ್ಮೀಯರು ಎನ್ನಬೇಕಾಗುತ್ತದೆ ಎಂದು ಹಾಸ್ಯ ಮಿಶ್ರಿತವಾಗಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ವಹಿಸಿದ್ದರು. ಕುಲಸಚಿವೆ ವಿ.ಆರ್.ಶೈಲಜ ಉಪಸ್ಥಿತರಿದ್ದರು.

ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದ ಆರೋಪ

ಮಂಡ್ಯದಲ್ಲಿ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಯತ್ನ

ಬಿಜೆಪಿ ಕಾರ್ಯಕರ್ತರ ಬಂಧನ, ಬಿಡುಗಡೆ

ಮಂಡ್ಯ,ಫೆ.28– ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿರುವುದನ್ನು ವಿರೋಧಿಸಿ ಕಾಂಗ್ರೆಸ್ ಪಕ್ಷದ ಜಿಲ್ಲಾ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು.

ನಗರದ ಬಂದೀಗೌಡ ಬಡಾವಣೆಯಲ್ಲಿರುವ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಮುಂದಾದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ತಡೆದು, ಮುಖಂಡರನ್ನು ವಶಕ್ಕೆ ಪಡೆದ ಬಳಿಕ ಬಿಡುಗಡೆ ಮಾಡಿದರು.

ಬಿಜೆಪಿ ಕಚೇರಿಯಿಂದ ಮೆರವಣಿಗೆ ಹೊರಟ ಪಕ್ಷದ ಕಾರ್ಯಕರ್ತರು, ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗುತ್ತಾ ಬೆಂಗಳೂರು– ಮೈಸೂರು ಹೆದ್ದಾರಿ ಮಾರ್ಗದಲ್ಲಿ ಸಾಗಿ ಕಾಂಗ್ರೆಸ್ ಪಕ್ಷದ ಕಚೇರಿಯತ್ತ ಹೊರಟಾಗ ರಸ್ತೆಯಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಿ ಪೊಲೀಸರು ಮೆರವಣಿಗೆ ಮುಂದೆ ಸಾಗದಂತೆ ತಡೆದರು.

ಈ ವೇಳೆ ಜೈ ಶ್ರೀರಾಮ್ ಘೋಷಣೆ ಕೂಗುತ್ತಾ ಬ್ಯಾರಿಕೇಡ್ ಮೇಲೇರಿದ ಕೆಲವು ಕಾರ್ಯಕರ್ತರು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬ್ಯಾರಿಕೇಡ್ ತಡೆ ಭೇದಿಸಲು ಪ್ರಯತ್ನ ಮಾಡಿದರಾದರೂ ಇದಕ್ಕೆ ಪೊಲೀಸರು ಅವಕಾಶ ಮಾಡಿಕೊಡದೆ ಬಿಜೆಪಿ ಕಾರ್ಯಕರ್ತರನ್ನು ವಶಕ್ಕೆ ಪಡೆದರು.



ಪಾಕಿಸ್ತಾನ ಪರ ಘೋಷಣೆ ಪ್ರಕರಣ ವಿರೋಧಿಸಿ ಕಾಂಗ್ರೆಸ್ ಪಕ್ಷದ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ಬಿಜೆಪಿ ಕಾರ್ಯಕರ್ತರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ನಗರ ಘಟಕದ ಮಾಜಿ ಅಧ್ಯಕ್ಷ ಅರವಿಂದ್, ರಾಜ್ಯಸಭೆ ಚುನಾವಣೆ ಫಲಿತಾಂಶ ಪ್ರಕಟಗೊಂಡ ನಂತರ ಕಾಂಗ್ರೆಸ್ ರಾಜ್ಯಸಭಾ ಸದಸ್ಯ ನಾಸೀರ್ ಹುಸೇನ್ ಬೆಂಬಲಿಗ ಪಾಕಿಸ್ತಾನ ಜಿಂದಾ ಬಾದ್ ಎಂದು ಘೋಷಣೆ ಕೂಗಿ ದೇಶ ದ್ರೋಹಿ ಕೃತ್ಯ ಎಸಗಿದ್ದು, ಇಂತಹ ದೇಶದ್ರೋಹಿ ಕೃತ್ಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ನಾಯಕರು ಸಮರ್ಥನೆ ಮಾಡಿಕೊಳ್ಳಲು ಮುಂದಾಗಿದ್ದಾರೆ. ದೇಶದ್ರೋಹಿಯನ್ನು ಸ್ಥಳದಲ್ಲಿಯೇ ಬಂಧಿಸದೇ ಹಾಗೆಯೇ ಬಿಟ್ಟಿದ್ದು ಬಿಜೆಪಿ ನಾಯಕರು ಪ್ರತಿಭಟನೆ ನಡೆಸಿದ ನಂತರ ಪೊಲೀಸರು ದೂರು ದಾಖಲಿಸಿಕೊಂಡಿದ್ದಾರೆ. ದೇಶದ್ರೋಹಿಗಳಿಗೆ ಕಾಂಗ್ರೆಸ್ ಬೆಂಬಲವಾಗಿ ನಿಂತಿದೆ ಎಂದು ಆರೋಪಿಸಿದರು.

ದೇಶದ ಗಡಿಯಲ್ಲಿ ಭಾರತೀಯ ಯೋಧರು ದೇಶ ರಕ್ಷಣೆಯಲ್ಲಿ ನಿರತರಾಗಿದ್ದಾರೆ, ಪ್ರಾಣದ ಹಂಗು ತೊರೆದು ಭಾರತೀಯರ ರಕ್ಷಣೆ ಮಾಡುತ್ತಿದ್ದಾರೆ, ಶತ್ರು ರಾಷ್ಟ್ರ ಪಾಕಿಸ್ತಾನ ಪರ ವಿಧಾನಸೌಧದಲ್ಲಿ ಘೋಷಣೆ ಕೂಗಿರೆ ಭಾರತೀಯ ಯೋಧರಿಗೆ ಅವಮಾನ ಮಾಡಿದಂತೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಯಾವಾಗ ಬರುತ್ತದೆಯೋ, ಆಗ ದೇಶ ದ್ರೋಹಿಗಳಿಗೆ ಮತ್ತು ಪಾಕಿಸ್ತಾನ ಸಮರ್ಥಕರಿಗೆ ಬಲ ಬಂದಂತೆ ಆಗುತ್ತಿದೆ. ವಿಧಾನಸೌಧದಲ್ಲಿ ಕೇಳಿಬಂದಿರುವ ಪಾಕಿಸ್ತಾನ ಜಿಂದಾಬಾದ್ ಜೈಕಾರಕ್ಕೆ ಕಾಂಗ್ರೆಸ್ ಈವರೆಗೆ ಮಾಡಿರುವ ತುಷ್ಟೀಕರಣದ ರಾಜಕಾರಣವೇ ಕಾರಣ ಎಂದು ದೂರಿದರು. ಪಾಕಿಸ್ತಾನ ಪರ ಘೋಷಣೆ ಕೂಗಿಲ್ಲ ಎಂದು ಸಮರ್ಥನೆಗೆ ಮುಂದಾಗಿರುವ ಕಾಂಗ್ರೆಸ್ ಪಕ್ಷದ ನಡೆ ದೇಶದ್ರೋಹಿ ಯಾಗಿದೆ, ದೇಶದ್ರೋಹ ಮಾಡಿರುವ ಆರೋಪಿಯ ಪರ ವಕಾಲತ್ತು ವಹಿಸುವುದನ್ನು ಬಿಟ್ಟು ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ದೇಶಭಕ್ತಿ, ಭಾರತ ಮಾತೆ ಬಗ್ಗೆ ಕಿಂಚಿತ್ತಾದರೂ ಗೌರವ ಇದ್ದರೆ ದೇಶದ್ರೋಹಿಯನ್ನು ಬಂಧಿಸಿ, ರಾಜ್ಯ ಪೊಲೀಸ್ ಇಲಾಖೆ ಗೃಹ ಸಚಿವರು ಆರೋಪಿಗಳನ್ನ ಬಂಧಿಸಲು ಕ್ರಮ ಕೈಗೊಳ್ಳಬೇಕು. ಪಾಕಿಸ್ತಾನ ಜಿಂದಾಬಾದ್ ಘೋಷಣೆ ಸಾಮಾನ್ಯ ಸಂಗತಿಯಲ್ಲ. ದೇಶ ದ್ರೋಹಕ್ಕೆ ಕುಮ್ಮಕ್ಕು ನೀಡುವ ಕೃತ್ಯ, ಈ ಬಗ್ಗೆ ಮುಖ್ಯ ಮಂತ್ರಿ ಸಿದ್ದರಾಮಯ್ಯ ಬಹಿರಂಗ ಕ್ಷಮಾಪಣೆ ಕೇಳಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆ ಯಲ್ಲಿ ಮುಖಂಡರಾದ ಅಶೋಕ್ ಜಯ ರಾಮ್, ಸಿ.ಟಿ.ಮಂಜುನಾಥ್, ಅಶೋಕ್ ಕುಮಾರ್, ಕೇಶವ್, ನರಸಿಂಹ, ಸಿದ್ದರಾಜು, ಶಿವು, ನರಸಿಂಹಾಚಾರ್, ಸಿಂಧು, ಶ್ವೇತಾ ಅಶೋಕ್, ಮಮತಾ ಚಂದನ್, ತಾಯಮ್ಮ ಪುಟ್ಟಮ್ಮ, ವರಲಕ್ಷ್ಮಿ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಕಣಿವೆಕೊಪ್ಪಲು ಡೇರಿಗೆ ಜಯರಾಮು ಅಧ್ಯಕ್ಷ, ಗೋಪಾಲಕೃಷ್ಣ ಉಪಾಧ್ಯಕ್ಷ



ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸುತ್ತಿರುವ ನಿರ್ದೇಶಕರು.

ಚಿನಕುರಳಿ, ಫೆ.28– ಸಮೀಪದ ಕಣಿವೆ ಕೊಪ್ಪಲು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೆ.ಎಸ್. ಜಯರಾಮು, ಉಪಾಧ್ಯಕ್ಷರಾಗಿ ಗೋಪಾಲಕೃಷ್ಣ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

10 ಮಂದಿ ಸದಸ್ಯರ ಸಂಖ್ಯಾಬಲ ಹೊಂದಿರುವ ಸಂಘದ ನೂತನ ಆಡಳಿತ ಮಂಡಳಿಯ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಮಂಗಳವಾರ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಕೆ.ಎಸ್.ಜಯರಾಮು, ಉಪಾಧ್ಯಕ್ಷ ಸ್ಥಾನಕ್ಕೆ ಗೋಪಾಲಕೃಷ್ಣ ನಾಮಪತ್ರ ಸಲ್ಲಿಸಿದರು. ಇವರಿಬ್ಬರನ್ನು ಹೊರತುಪಡಿಸಿ ಉಳಿದ ಯಾವೊಬ್ಬ ನಿರ್ದೇಶಕರು ನಾಮಪತ್ರವನ್ನು ಸಲ್ಲಿಸದ ಹಿನ್ನೆಲೆಯಲ್ಲಿ ಕೆ.ಎಸ್.ಜಯರಾಮು ಅವರನ್ನು ಅಧ್ಯಕ್ಷರನ್ನಾಗಿ, ಗೋಪಾಲಕೃಷ್ಣ ಅವರನ್ನು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ನಿರ್ಮಲಾ ಘೋಷಿಸಿದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಎಲ್ಲಾ ನಿರ್ದೇಶಕರು, ಮುಖಂಡರು, ಸ್ನೇಹಿತರು, ಹಿತೈಸಿಗಳು ಅಭಿನಂದಿಸಿದರು. ಅಧ್ಯಕ್ಷ ಕೆ.ಎಸ್.ಜಯರಾಮು ಮಾತನಾಡಿ, ಕಣಿವೆ ಕೊಪ್ಪಲು ಗ್ರಾಮದ ಎಲ್ಲಾ ಯಜಮಾನರು, ಮುಖಂಡರು ಕುಳಿತು ಚರ್ಚಿಸಿ, ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಎಲ್ಲಾ ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡಿಕೊಳ್ಳಲಾಗಿತ್ತು. ಇದೀಗ ನಡೆದ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲೂ ಗ್ರಾಮಸ್ಥರ ಸಲಹೆಯಂತೆ ಅವಿರೋಧವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಸಂಘದ ಅಧ್ಯಕ್ಷರನ್ನಾಗಿ ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದಕ್ಕೆ ಎಲ್ಲರನ್ನು ಅಭಿನಂದನೆ ಸಲ್ಲಿಸುತ್ತೇನೆ, ಮುಂದಿನ ದಿನಗಳಲ್ಲಿ ಎಲ್ಲರನ್ನು ಒಗ್ಗಟ್ಟಿನಿಂದ ತೆಗೆದುಕೊಂಡು ಸಂಘದ ಅಭಿವೃದ್ಧಿಗೆ ಪೂರಕವಾಗಿ ಶ್ರಮಿಸುತ್ತೇನೆ ಎಂದು ತಿಳಿಸಿದರು.

ಸಂದರ್ಭದಲ್ಲಿ ನಿರ್ದೇಶಕರಾದ ಮಾಚೇಗೌಡ, ಲೋಕೇಶ್, ತಿಮ್ಮೇಗೌಡ, ಕೆ.ಎನ್.ಲಕ್ಷ್ಮೇಶ, ಚಿಕ್ಕತಾಯಮ್ಮ, ಭಾರತಿ, ಕೆ.ರಾಮಯ್ಯ, ಸ್ವಾಮೀಗೌಡ ಸೇರಿದಂತೆ ಗ್ರಾಮಸ್ಥರು, ಯಜಮಾನರು, ಮುಖಂಡರು ಹಾಜರಿದ್ದರು.

ಸ್ಲಂ ನಿವಾಸಿಗಳಿಗೆ ಶೀಘ್ರ ಹಕ್ಕುಪತ್ರ ವಿತರಣೆಗೆ ಒತ್ತಾಯ

ಮಂಡ್ಯ, ಫೆ.28– ಜಿಲ್ಲೆಯ ಹಲವು ಭಾಗಗಳಲ್ಲಿ ಸ್ಲಂ ನಿವಾಸಿಗಳು ಸೇರಿದಂತೆ ನಿರಾಶ್ರಿತರಿಗೆ ಹಕ್ಕುಪತ್ರ ವಿತರಣೆಯಲ್ಲಿ ವಿಳಂಬವಾಗು



ತ್ತಿದ್ದು, ಕೆಲವೆಡೆ ಹಂತ ಹಂತವಾಗಿ ವಿತರಣೆಯಾಗು ತ್ತಿದ್ದರೆ, ಇನ್ನು ಕೆಲವೆಡೆ ಹಕ್ಕುಪತ್ರ ವಿತರಣೆ ನನೆಗುದಿಗೆ ಬಿದ್ದಿದೆ. ಈ ಕೂಡಲೇ ಜಿಲ್ಲಾದ್ಯಂತ ಹಕ್ಕುಪತ್ರ ವಿತರಣೆಯಾಗಬೇಕೆಂದು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಸಾದುಲ್ಲಾಖಾನ್ ಒತ್ತಾಯಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಂಡ್ಯ ನಗರದ ಕೆಲವು ಕಡೆ ಮಾತ್ರ ಹಕ್ಕುಪತ್ರ ವಿತರಣೆಯಾಗಿದೆ. ಇನ್ನು ಸಾವಿರಾರು ಮಂದಿಗೆ ಬಡವರು ಚಿಂತೆಯಲ್ಲೇ ದಿನ ಕಳೆಯುತ್ತಿದ್ದು, ಈ ಬಗ್ಗೆ ಹಿಂದಿನ ಸರ್ಕಾರಗಳಿಗೂ ನಾನು ಮನವಿ ಮಾಡಿದ್ದೆ. ಇದೀಗ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು, ಕೂಡಲೇ ಹಕ್ಕುಪತ್ರಗಳನ್ನು ನಿರಾಶ್ರಿತರಿಗೆ ನೀಡಬೇಕೆಂದು ಮನವಿ ಮಾಡಿದರು.

ಮಂಡ್ಯ ನಗರದಲ್ಲಿ ಯುಜಿಡಿ, ಮೂಲಸೌಕರ್ಯ, ರಸ್ತೆ ಸೇರಿದಂತೆ ಹಲವು ಸಮಸ್ಯೆಗಳು ತಾಂಡವವಾಡುತ್ತಿದ್ದು, ಇವುಗಳನ್ನು ಬಗೆ ಹರಿಸಲು ಹಿಂದಿನ ಸರ್ಕಾರ ವಿಫಲವಾಗಿತ್ತು. ಇದೀಗ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಈ ಎಲ್ಲಾ ಸಮಸ್ಯೆಗಳಿಗೆ ಮುಕ್ತಿ ನೀಡಲು ಮಂಡ್ಯ ನಗರಕ್ಕೆ ವಿಶೇಷ ಅನುದಾನ ಒದಗಿಸಿ ಕೊಡಬೇಕೆಂದು ಅವರು ಒತ್ತಾಯಿಸಿದರು.

ಮಳವಳ್ಳಿ ತಾಲೂಕು ಪಂಚಾಯತ್ ಕಚೇರಿಗೆ ಅನಿರೀಕ್ಷಿತ ಭೇಟಿ

ಮಂಡ್ಯ: ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಶೇಖ್ ತನ್ವಿರ್ ಆಸಿಫ್ ಮಳವಳ್ಳಿ ತಾಲೂಕು ಪಂಚಾಯತ್ ಕಚೇರಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲಿಸಿದರು.

ತಾಲೂಕು ವ್ಯಾಪ್ತಿಯ ಗ್ರಾಮಗಳಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚಿಸಿ, ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಗತ್ಯಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ನಿರ್ದೇಶಿಸಿದರು.

ಮಳವಳ್ಳಿ ತಾಲೂಕು ಬೆಳಕವಾಡಿ ಮತ್ತು ಇತರೆ 4 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಪುನಶ್ಚೇತನ ಕಾಮಗಾರಿಯು ಪ್ರಗತಿಯಲ್ಲಿದ್ದು, ಕಾಮಗಾರಿಯ ಸ್ಥಳವನ್ನು ಪರಿಶೀಲಿಸಿದರು. ಸದರಿ ಯೋಜನೆಗೆ ಸಂಬಂಧಪಟ್ಟಂತೆ ಜಾಕ್ವೆಲ್‌ನಲ್ಲಿರುವ ಮೋಟಾರ್‌ಗಳು ಚಾಲನೆಯಲ್ಲಿದ್ದು, WTP ಏರಿಯಟರ್, ಫಿಲ್ಟರ್ ಮೀಡಿಯಾ ಮತ್ತು ಪಂಪು ಮೋಟಾರ್‌ಗಳನ್ನು ಪರಿವೀಕ್ಷಣೆ ನಡೆಸಿ ಕಾಮಗಾರಿಯನ್ನು ಅತೀ ಜರೂರಾಗಿ ಪೂರ್ಣಗೊಳಿಸುವಂತೆ ಸ್ಥಳದಲ್ಲಿ ಹಾಜರಿದ್ದ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅವರಿಗೆ ಸೂಚಿಸಿದರು.

ಕೊಳಚೆ ನೀರು ವಿ.ನಾಲೆಗೆ ಸೇರ್ಪಡೆ: ಪ್ರತಿಭಟನೆ

ಪಾಂಡವಪುರ, ಫೆ.28– ಪಟ್ಟಣದ ವಿವಿಧ ಬಡಾವಣೆಗಳ ಕಲುಷಿತ ನೀರು ವಿಶ್ವೇಶ್ವರಯ್ಯ ನಾಲೆ ಸೇರ್ಪಡೆಗೊಂಡು ನಾಲೆ ದೊಡ್ಡ ಕೊಳಚೆಗುಂಡಿಯಂತಾಗಿದ್ದು, ಜನ ಜಾನುವಾರುಗಳು ಹಲವು ಕಾಯಿಲೆಗಳಿಗೆ ತುತ್ತಾಗುವ ಆತಂಕ ಬಂದಿದೆ ಎಂದು ಹಿರೇಮರಳಿ ಗ್ರಾಮಸ್ಥರು ಪಟ್ಟಣದ ನೀರಾವರಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.



ಪಾಂಡವಪುರದ ನೀರಾವರಿ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸುತ್ತಿರುವುದು.

ಪಟ್ಟಣದ ಸಹಾಯಕ ಕಾರ್ಯಪಾಲಕ ಅಭಿಯಂತರ ಕಚೇರಿ ನಂ.3 ವಿ.ನಾಲಾ ವಿಭಾಗದ ಮುಂದೆ ಜಮಾಯಿಸಿದ ಪ್ರತಿಭಟನಾಕಾರರು, ಈಗ ವಿಶ್ವೇಶ್ವರಯ್ಯ ನಾಲೆಯಲ್ಲಿ ಅಭಿವೃದ್ಧಿ ಕೆಲಸ ನಡೆಯುತ್ತಿದ್ದು, ನೀರು ಹರಿಯದ ಕಾರಣ ಇಡೀ ಪಾಂಡವಪುರ ಪಟ್ಟಣದ ವಿವಿಧ ಬಡಾವಣೆಗಳ ತ್ಯಾಜ್ಯ ನೀರು ನಾಲೆಗೆ ಹರಿದು ಬರುತ್ತಿದ್ದು, ನಾಲೆಯು ದೊಡ್ಡದಾದ ಮೋರಿಯಂತಾಗಿದೆ. ಕಲುಷಿತ ನೀರು ನಿಂತು ಸೊಳ್ಳೆಗಳ ಉತ್ಪತ್ತಿಯ ತಾಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಕಲುಷಿತ ನೀರು ನಾಲೆ ನೀರಿನೊಂದಿಗೆ ಸೇರುತ್ತಿದೆ ಆ ಮೂಲಕ ಜನ ಜಾನುವಾರುಗಳ ಆರೋಗ್ಯ ಕೆಡುತ್ತಿದೆ. ಇದೀಗ ಬೇಸಿಗೆ ತೀವ್ರತೆ ಹೆಚ್ಚುತ್ತಿದ್ದು, ಹಲವಾರು ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆಯಿದೆ. ಹಾಗಾಗಿ ಚರಂಡಿ ನೀರು ಹರಿದುಹೋಗಲು ಬದಲಿ ವ್ಯವಸ್ಥೆ ಮಾಡಿ ನಾಲೆಯ ಆರೋಗ್ಯ ಕಾಪಾಡಬೇಕೆಂದು ಆಗ್ರಹಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ಸಹಾಯಕ ಕಾರ್ಯಪಾಲಕ ಅಭಿಯಂತರ ಜಯರಾಂ, ಚರಂಡಿ ನೀರು ನಮ್ಮ ಇಲಾಖೆ ವ್ಯಾಪ್ತಿಯ ವಿಶ್ವೇಶ್ವರಯ್ಯ ನಾಲೆಗೆ ಸೇರದಂತೆ ಪುರಸಭೆ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ ಸಮಸ್ಯೆ ಪರಿಹರಿಸಲಾಗುವುದು ಎಂದು ಭರವಸೆ ನೀಡಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ಪುರಸಭೆ ಮುಖ್ಯಾಧಿಕಾರಿ ವೀಣಾ ಅವರು, ಪಟ್ಟಣದಲ್ಲಿ ಯುಜಿಡಿ ಕಾಮಗಾರಿ ನಡೆಯದಿರುವುದರಿಂದ ಈ ಸಮಸ್ಯೆ ಎದುರಾಗಿದೆ. ಸದ್ಯಕ್ಕೆ ಪಟ್ಟಣದ ಕಳಸಪ್ಪನ ತೋಟಕ್ಕೆ ಪಟ್ಟಣದ ತ್ಯಾಜ್ಯ ನೀರನ್ನು ಹರಿಸಿ ವಿಶ್ವೇಶ್ವರಯ್ಯ ನಾಲೆಗೆ ಕಲುಷಿತ ನೀರು ಸೇರದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಬಿಜೆಪಿ ಮುಖಂಡ ಎಚ್.ಎನ್.ಮಂಜುನಾಥ್, ಶ್ರೀನಿವಾಸ್‌ನಾಯಕ್, ಗ್ರಾಪಂ ಉಪಾಧ್ಯಕ್ಷ ಯಶ್ವಂತ್, ಶಿವಕುಮಾರ್, ದೊರೆಸ್ವಾಮಿ, ನಾಗರಾಜು ಪಾಲ್ಗೊಂಡಿದ್ದರು.

ದೊಡ್ಡೇಗೌಡ ನಿಧನ



ಕೆ.ಆರ್.ಪೇಟೆ: ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ಹಿರಿಯ ಮುಖಂಡರಾದ ದೊಡ್ಡೇಗೌಡ(68) ಅವರು ಬುಧವಾರ ನಿಧನ ಹೊಂದಿದರು.

ಮೃತರು ಮೂವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಬುಧವಾರ ಸಂಜೆ ಅಗ್ರಹಾರಬಾಚಹಳ್ಳಿ ಗ್ರಾಮದ ಮೃತರ ಜಮೀನಿನಲ್ಲಿ ನಡೆಯಿತು. ಮೃತರ ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಒಂದನೇ ಪುಟದಿಂದ

ವಿಧಾನಮಂಡಲದಲ್ಲಿ ಭಾರಿ ಕೋಲಾಹಲ

ಅವರು ಬಲಿಷ್ಠವಾದ ನಂತರ ನಿಮಗೇ ಚೂರಿ ಹಾಕಿ ನಿಮ್ಮ ಮೇಲೇ ಕೂರುತ್ತಾರೆ, ಅವರನ್ನು ನಂಬಬೇಡಿ. ಮೈಸೂರಿನ ನಿಮ್ಮ ಪಕ್ಷದ ಶಾಸಕ ತನ್ವೀರ್ ಸೇಠ್ ಪ್ರಕರಣ ನಮ್ಮ ಕಣ್ಣ ಮುಂದೆಯೇ ಇದೆ. ಹೀಗಿದ್ದೂ ನೀವು ಅವರ ರಕ್ಷಣೆಗೆ ನಿಂತಿರುವುದು ಎಷ್ಟು ಸಮಂಜಸ ಎಂದು ಪ್ರಶ್ನಿಸಿದರು. ಇದರ ನಡುವೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ನೀಡಿದ ಹೇಳಿಕೆ ಪ್ರತಿಪಕ್ಷದ ಸದಸ್ಯರಿಗೆ ತೃಪ್ತಿ ತರಲಿಲ್ಲ, ಸದನದಲ್ಲೇ ಇದ್ದ ಮುಖ್ಯಮಂತ್ರಿ ತುಟಿ ಪಿಟಿಕ್ ಎನ್ನಲಿಲ್ಲ. ಇದು ಪ್ರತಿಪಕ್ಷದ ಸದಸ್ಯರನ್ನು ಮತ್ತಷ್ಟು ಕೆರಳಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆರೋಪಿಗಳ ಬಂಧನಕ್ಕೆ ಪಟ್ಟು ಹಿಡಿಯುವಂತೆ ಮಾಡಿತು. ಸಭಾಧ್ಯಕ್ಷ ಯು.ಟಿ ಖಾದರ್, ಸದನವನ್ನು ಎರಡು ಬಾರಿ ಮುಂದೂಡಿ ತೆರೆಮರೆಯಲ್ಲಿ ಮಾತುಕತೆ ನಡೆಸಿದರೂ ಪ್ರಯೋಜನವಾಗಲಿಲ್ಲ, ನಂತರ ಸದನವನ್ನು ನಾಳೆಗೆ ಮುಂದೂಡಿದರು.ಸ್ಪೀಕರ್ ಸದನ ಸಲಹಾ ಸಮಿತಿಯ ಸಭೆ ನಡೆಸಿ, ಪ್ರತಿಪಕ್ಷಗಳನ್ನು ಸಮಾಧಾನಪಡಿಸುವ ಯತ್ನ ನಡೆಸಿದರಾದರೂ ಅದು ಯಶಸ್ವಿಯಾಗಲಿಲ್ಲ. ಬಿಜೆಪಿ ಸದಸ್ಯರು ಏರಿದ ಧ್ವನಿಯಲ್ಲಿ ನಾಸಿರ್ ಹುಸೇನ್ ಅವರನ್ನು ಬಂಧಿಸುವಂತೆ ಆಗ್ರಹಿಸತೊಡಗಿದರು.

ಈ ಹಂತದಲ್ಲಿ ಸಭಾಧ್ಯಕ್ಷ ಯು.ಟಿ.ಖಾದರ್, ಸದನದಲ್ಲಿ ಕೆಲವು ಪ್ರಕಟಣೆಗಳನ್ನು ನೀಡತೊಡಗಿದಾಗ, ಸುಮ್ಮನಿರದ ಬಿಜೆಪಿ ಸದಸ್ಯರು ಒಂದೇ ಸಮನೆ ನಾಸಿರ್ ಹುಸೇನ್ ಅವರನ್ನು ಬಂಧಿಸುವಂತೆ ಒಕ್ಕೊರಲಿನಿಂದ ಕೂಗತೊಡಗಿದರು. ಬಿಜೆಪಿ ಸದಸ್ಯರ ಈ ಕೂಗಾಟ ಮುಂದುವರಿದು ಪರಿಸ್ಥಿತಿ ಪುನಃ ನಿಯಂತ್ರಣ ಕಳೆದುಕೊಂಡಾಗ ಸಭಾಧ್ಯಕ್ಷ ಯು.ಟಿ.ಖಾದರ್ ಸದನದ ಕಲಾಪವನ್ನು ಗುರುವಾರಕ್ಕೆ ಮುಂದೂಡಿದರು.

ದೇಶದ್ರೋಹಿಗಳ ವಿರುದ್ಧ ಕಠಿಣ ಕ್ರಮ

ಗೃಹ ಸಚಿವರು, ರಾಷ್ಟ್ರ ವಿರೋಧಿಗಳಿಗೆ ನಮ್ಮಲ್ಲಿ ರಕ್ಷಣೆ ಇಲ್ಲ ಎಂದರು. ರಾಜ್ಯಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಜಯ್ ಮಾಕೆನ್, ಸಯ್ಯದ್ ನಾಸೀರ್ ಹುಸೇನ್, ಜಿ.ಸಿ.ಚಂದ್ರಶೇಖರ್, ನಾರಾಯಣಸಾ ಭಾಂಡಗೆ ಚುನಾಯಿತರಾಗಿದ್ದಾರೆ. ಆ ಸಂದರ್ಭದಲ್ಲಿ ಅವರ ಅಭಿಮಾನಿಗಳು ಸಂಭ್ರಮಿಸಿದ್ದಾರೆ. ಸಂಭ್ರಮಾಚರಣೆಗೆ ಒಳಗೆ ಅವಕಾಶ ನೀಡಬಾರದಿತ್ತು. ಬಿಟ್ಟಿದ್ದು ತಪ್ಪು ಎಂದರು. ಸಯ್ಯದ್ ನಾಸೀರ್ ಹುಸೇನ್ ಅವರು ವಿಧಾನಸೌಧಕ್ಕೆ ಬರಲು 25 ಜನರಿಗೆ ಅನುಮತಿ ಪಡೆದಿದ್ದರು. ವಿಜಯೋತ್ಸವ ಸಂದರ್ಭದಲ್ಲಿ ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗಿರುವುದಾಗಿ ಆರೋಪ ಮಾಡಲಾಗಿದೆ. ಅದರ ಸತ್ಯಾಸತ್ಯತೆಯನ್ನು ವೈಜ್ಞಾನಿಕವಾಗಿ ತಿಳಿಯಲು ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಕೇಳಲಾಗಿದೆ. ವರದಿ ಬಂದ ತಕ್ಷಣ ಒಂದು ಕ್ಷಣವೂ ತಡ ಮಾಡದೆ ಕಾನೂನು ರೀತಿ ಕ್ರಮ ಜರುಗಿಸುತ್ತೇವೆ, ಯಾರನ್ನೂ ರಕ್ಷಣೆ ಮಾಡುವುದಿಲ್ಲ ಎಂದು ಹೇಳಿದರು. ನಿನ್ನೆ ಸಂಜೆ ಆರೋಪ ಕೇಳಿಬಂದ ಕೂಡಲೇ ಸ್ವಯಂಪ್ರೇರಿತವಾಗಿ ಐಫ್‌ಐಆರ್ ದಾಖಲಿಸಲಾಗಿದೆ. ಬಿಜೆಪಿಯವರು ಈ ಸಂಬಂಧ ನೀಡಿರುವ ದೂರನ್ನೂ ದಾಖಲಿಸಲಾಗಿದೆ. ತನಿಖೆ ನಡೆಯುತ್ತಿದ್ದು ವರದಿ ಬಂದ ನಂತರ ಕ್ರಮ ಕೈಗೊಳ್ಳುತ್ತೇವೆ ಎಂದರು.

ಬಹಳ ಗಂಭೀರವಾದ ವಿಚಾರವು ಸದನದಲ್ಲಿ ಚರ್ಚೆಯಾಗಿದೆ. ಅನಿವಾಸಿ ಭಾರತೀಯರು ಸದನದ ಕಾರ್ಯ ಕಲಾಪಗಳನ್ನು ವೀಕ್ಷಣೆ ಮಾಡಿದ್ದರು. ಅದಕ್ಕೆ ಅವಕಾಶ ಮಾಡಿಕೊಟ್ಟಿದ್ದರು. ಅದಕ್ಕೆ ಅಭಿನಂದನೆ ಸಲ್ಲಿಸಲಾಗಿತ್ತು. ಬೇರೆ ಬೇರೆ ರಾಷ್ಟ್ರಗಳಿಂದಲೂ ಕರೆ ಮಾಡಿದ್ದಾರೆ. ನಾವು ಯಾವ ರೀತಿ ಚರ್ಚೆ ಮಾಡುತ್ತಿದ್ದೇವೆ ಎಂಬುದನ್ನು ವಿದೇಶದಲ್ಲಿರುವ ನಮ್ಮವರು ಗಮನಿಸುತ್ತಾರೆ. ಪಾಕಿಸ್ತಾನದ ಪರ ಘೋಷಣೆ ಕೂಗಲಾಗಿದೆ ಎಂಬ ಆರೋಪದ ವಿಚಾರದಲ್ಲಿ ರಾಜಕೀಯಕ್ಕೆ ಹೋಗಿದ್ದೇವೆ ಎನ್ನಿಸುತ್ತಿದೆ. ರಾಜಕೀಯ ಕಾರಣಕ್ಕಾಗಿ ಗಂಭೀರ ವಿಚಾರ ಬಳಕೆ ಮಾಡಬಾರದು. ನೈಜ ಪರಿಸ್ಥಿತಿ ಆಧರಿಸಿ ಆಡಳಿತ ಮತ್ತು ಪ್ರತಿಪಕ್ಷಗಳ ಶಾಸಕರು ಚರ್ಚಿಸಿದರೆ ಮುಂದೆ ಇಂತಹ ಘಟನೆ ಮರುಕಳಿಸದಂತೆ ತಡೆಯಬಹುದು ಎಂದರು.

ಕಾಂಗ್ರೆಸ್‌ಗೆ ದೇಶ ಪ್ರೇಮದ ಪಾಠ ಹೇಳಬೇಕೆ, ದೇಶ ಸ್ವಾತಂತ್ರ್ಯ ಗಳಿಸಲು ಎಷ್ಟು ಜನರ ತ್ಯಾಗ ಬಲಿದಾನವಾಗಿದೆ. ಇಂದಿಗೂ ದೇಶ ಪ್ರೇಮದ ಬದ್ಧತೆ, ಧ್ಯೇಯ ಬದಲಾಗಿಲ್ಲ. ಕಾಂಗ್ರೆಸ್‌ನವರಿಗೆ ದೇಶ ಪ್ರೇಮ ರಕ್ತಗತವಾಗಿದೆ.

ಪಾಕಿಸ್ತಾನಕ್ಕೆ ಜಿಂದಾಬಾದ್ ಎಂದವರಿಗೆ ಬೆಂಬಲ ನೀಡುವುದಿಲ್ಲ. 1972ರಲ್ಲಿ ಪಾಕಿಸ್ತಾನವನ್ನು ವಶಕ್ಕೆ ಪಡೆಯುವುದರ ಮಟ್ಟಿಗೆ ಯುದ್ಧ ಮಾಡಿದ್ದೇವೆ. ಆದರೆ ಪ್ರಧಾನಿಯವರು ಪೂರ್ವನಿಗದಿತ ಕಾರ್ಯಕ್ರಮವಿಲ್ಲದೆ ಪಾಕಿಸ್ತಾನಕ್ಕೆ ಹೋಗುತ್ತಾರೆ. ನೆರೆಹೊರೆ ರಾಷ್ಟ್ರಗಳೊಂದಿಗೆ ಸಂಬಂಧ ಇಟ್ಟುಕೊಳ್ಳುವುದು ತಪ್ಪೆಂದು ಭಾವಿಸುವುದಿಲ್ಲ ಎಂದರು. ಅನೇಕ ಘಟನೆ, ವಿಚಾರಗಳ ಬಗ್ಗೆ ಚರ್ಚಿಸಬಹುದು. ಈಗ ಅದು ಅಪ್ರಸ್ತುತ. ಬಜೆಟ್‌ನಲ್ಲಿ ರಾಜ್ಯ ಅಭಿವೃದ್ಧಿ ವಿಚಾರಗಳ ಬಗ್ಗೆ ಚರ್ಚಿಸಬಹುದಲ್ಲವೇ, ನಿನ್ನೆ ಸಂಜೆ ಆ ಘಟನೆ ಆಗಬಾರದಿತ್ತು. ಆಗಿದೆ. ಮಾಧ್ಯಮದಲ್ಲಿ ಎರಡು ರೀತಿಯ ಅಭಿಪ್ರಾಯ ವ್ಯಕ್ತವಾಗಿದೆ. ಆ ರೀತಿ ಘೋಷಣೆ ಕೂಗಿದ್ದಾರೆ ಎಂದು ಕೆಲವರು ಅಭಿಪ್ರಾಯಿಸಿದರೆ, ಮತ್ತೆ ಕೆಲವರು ಆ ರೀತಿ ಘೋಷಣೆ ಕೂಗಿಲ್ಲ ಎಂದು ಹೇಳಿದ್ದಾರೆ ಎಂದು ತಿಳಿಸಿದರು. ಈ ಕಾರಣಕ್ಕಾಗಿಯೇ ಎಫ್‌ಎಸ್‌ಎಲ್ ವರದಿಗೆ ಕಾಯಲಾಗುತ್ತಿದೆ, ನಂತರ ಪರಿಶೀಲಿಸಿ ಕ್ರಮ ಜರುಗಿಸುವುದಾಗಿ ತಿಳಿಸಿದರು.

ಪಾಕ್ ಪರ ಘೋಷಣೆ ಸಾಬೀತಾದರೆ ಕ್ರಮ

ಎಂಬ ಬಗ್ಗೆ ಮೊದಲು ತನಿಖೆಯಾಗಬೇಕಿದೆ. ಅದಕ್ಕೆ ಸಂಬಂಧಿಸಿದ ವಿಡಿಯೋ ತುಣುಕುಗಳನ್ನು ಈಗಾಗಲೇ ವಿಧಿವಿಜ್ಞಾನ ಪ್ರಯೋಗಾಯಕ್ಕೆ ತನಿಖೆಗೆ ಕಳುಹಿಸಿಕೊಟ್ಟಿದ್ದೇವೆ. ಘೋಷಣೆ ಕೂಗಿದ್ದು ನಿಜವೇ ಆಗಿದ್ದರೆ ಕ್ರಮ ಕೈಗೊಳ್ಳುತ್ತೇವೆ. ತಪ್ಪಿತಸ್ಥರು ಯಾರೇ ಆಗಿರಲಿ, ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳುತ್ತೇವೆ ಎಂದು ಭರವಸೆ ನೀಡಿದ್ದಾರೆ.

ಘಟನೆ ಸಂಬಂಧ ಒಬ್ಬೊಬ್ಬರು ಒಂದೊಂದು ರೀತಿಯ ಹೇಳಿಕೆ ನೀಡುತ್ತಿದ್ದಾರೆ. ಕೆಲವರು 'ನಾಸಿರ್ ಸಾಬ್' ಎಂಬ ಘೋಷಣೆ ಕೂಗಲಾಗಿದೆ ಎಂದರೆ, ಇನ್ನು ಕೆಲವರು 'ಪಾಕಿಸ್ತಾನ' ಪರ ಘೋಷಣೆ ಎನ್ನುತ್ತಿದ್ದಾರೆ ಎಂದು ಗೃಹ ಸಚಿವ ಜಿ ಪರಮೇಶ್ವರ ಹೇಳಿದ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯೆ ನೀಡಿದ್ದಾರೆ. ಘಟನೆ ಸಂಬಂಧ ಕಾನೂನು ಮತ್ತು ಸುವ್ಯವಸ್ಥೆ ಎಡಿಜಿಪಿ ಹಿತೇಂದ್ರ ಹಾಗೂ ನಗರ ಪೊಲೀಸ್ ಆಯುಕ್ತ ದಯಾನಂದ ಅವರು ಇಂದು ಬೆಳಗ್ಗೆ ಗೃಹ ಸಚಿವರನ್ನು ಭೇಟಿಯಾಗಿ ಮಾಹಿತಿ ನೀಡಿದ್ದಾರೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಸಚಿವ ಪ್ರಿಯಾಂಕ್ ಖರ್ಗೆ, ಇದು ಕಾಲ್ಪನಿಕ ಘಟನೆಯಾಗಿದೆ ಎಂದಿದ್ದಾರೆ. ರಾಜ್ಯಸಭೆ ಚುನಾವಣೆಯಲ್ಲಿ ಮೈತ್ರಿ ಪಕ್ಷಗಳಿಗೆ ಮುಖಭಂಗವಾಗಿದೆ. ಘೋಷಣೆ ಕೂಗಿರುವ ಆಡಿಯೋದಲ್ಲಿ ಸೈಯದ್ ಸಾಬ್, ನಾಸಿರ್ ಹುಸೇನ್ ಜಿಂದಾಬಾದ್ ಅಂತ ಹೇಳಿದ್ದಾರೆ. ನಾವು ಜವಾಬ್ದಾರಿಯುತವಾಗಿಯೇ ಪರಿಶೀಲನೆ ಮಾಡಲು ಹೇಳಿದ್ದೆವು ಎಂದರು.

ಮುಡಾ ಅಧ್ಯಕ್ಷರಾಗಿ ಕೆ.ಮರೀಗೌಡ

ತರಲಾಗಿದ್ದು, ಕ್ಯಾಬಿನೆಟ್ ದರ್ಜೆ ಹೊಂದಿರುವ ಈ ಸಮಿತಿಯ ಅಧ್ಯಕ್ಷರನ್ನಾಗಿ ಮಾಜಿ ಸಚಿವ ಹೆಚ್.ಎಂ.ರೇವಣ್ಣ ಅವರನ್ನು ನೇಮಿಸಲಾಗಿದೆ. ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್, ಮೆಹಬೂಬ್ ಖಾನ್, ಮಾಜಿ ಸಚಿವ ಎಸ್.ಆರ್.ಪಾಟೀಲ್, ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಮೊಮ್ಮಗ ಸೂರಜ್ ಹೆಗ್ಗಡೆ ಅವರನ್ನು ಉಪಾಧ್ಯಕ್ಷರುಗಳಾಗಿ ನೇಮಕ ಮಾಡಲಾಗಿದೆ.

ಮೈಸೂರು ವಿವಿ ಗೌರವ ಡಾಕ್ಟರೇಟ್

ಸಂದೇಶ್ ನಾಗ ರಾಜ್ ಮುಡಾ ಅಧ್ಯಕ್ಷರಾಗಿದ್ದರು. ಇದರ ಫಲವಾಗಿ ಇಲ್ಲಿನ ಸುಗಮ ಸಾರಿಗೆ ಮತ್ತು ಸಮಗ್ರ ಅಭಿವೃದ್ಧಿಗೆ ನೆರವಾಗಿದೆ.

ಟಿ.ಎನ್.ಸೀತಾರಾಂ: ದೊಡ್ಡಬಳ್ಳಾಪುರ ಸಮೀಪದ ತಲಗಾವರ ಗ್ರಾಮದ ನಾರಾಯಣ ರಾವ್ ಮತ್ತು ಸುಂದರಮ್ಮ ದಂಪತಿ ಪುತ್ರ ಟಿ.ಎನ್.ಸೀತಾರಾಂ ವಕೀಲರು. ಅವರು ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಪಿ.ಲಂಕೇಶ್ ಮತ್ತು ಯು.ಆರ್.ಅನಂತಮೂರ್ತಿ ಅವರ ಪ್ರಭಾವದಿಂದಾಗಿ ರಂಗಭೂಮಿ ಮತ್ತು ಸಾಹಿತ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ರಂಗಭೂಮಿಯಲ್ಲಿ ಪಿ.ಲಂಕೇಶ್ ಅವರಿಗೆ ಸಹಾಯಕರಾಗಿದ್ದ ಅವರು, ಪುಟ್ಟಣ್ಣ ಕಣಗಾಲ್ ಅವರ ಚಿತ್ರಗಳಿಗೆ ಸಂಭಾಷಣೆ ಬರೆಯತೊಡಗಿದರು. ಕೆಲ ಚಿತ್ರಗಳಲ್ಲಿ ಅಭಿನಯಿಸಿದರು. ಇವರು ನಿರ್ದೇಶಿಸಿದ ಮಾಯಾಮೃಗ, ಮುಕ್ತ ಮತ್ತು ಮನ್ವಂತರ ಧಾರಾವಾಹಿಗಳು ಕಿರು ತೆರೆಯಲ್ಲಿ ಜನಪ್ರಿಯಗೊಂಡವು. ಅವರ ಮಾಯಾಮೃಗ ಧಾರಾವಾಹಿಯು ಡಿವಿಡಿ ರೂಪದಲ್ಲಿ ಹೊರಬಂದು ದಾಖಲೆ ನಿರ್ಮಿಸಿದರೆ, ಮುಕ್ತ ಮುಂತಾದ ಧಾರಾವಾಹಿಗಳ ಬಗ್ಗೆ ರಾಜ್ಯಾದ್ಯಂತ ವಿವಿಧ ಭಾಗಗಳಲ್ಲಿ ಸಂವಾದಗಳು ನಡೆದವು. ಇವರು 2006ರಲ್ಲಿ ಕರ್ನಾಟಕ ಚಲನಚಿತ್ರ ಪ್ರಶಸ್ತಿ ಸಮಿತಿಯ ಅಧ್ಯಕ್ಷರಾಗಿದ್ದರು. 'ನಮ್ಮೊಳಗೊಬ್ಬ ನಾಜೂಕಯ್ಯ' ಮತ್ತು 'ಬದುಕು ಮನ್ನಿಸು ಪ್ರಭುವೆ' ನಾಟಕಗಳು ಜನ ಮನ್ನಣೆ ಪಡೆದಿದ್ದವು. ಪಂಚಮ ವೇದ ಚಿತ್ರದ ಸಂಭಾಷಣೆಗಾಗಿ ಟಿ.ಎನ್.ಸೀತಾರಾಂ ಅವರಿಗೆ ಕರ್ನಾಟಕ ರಾಜ್ಯ ಪ್ರಶಸ್ತಿ ಲಭ್ಯವಾಗಿತ್ತು. 'ಮತದಾನ' ಚಿತ್ರವು ಅತ್ಯುತ್ತಮ ಸಾಕ್ಷ್ಯಚಿತ್ರದ ರಾಜ್ಯ ಪ್ರಶಸ್ತಿ ಪಡೆದಿತ್ತು. ಮುಕ್ತ ಧಾರಾವಾಹಿಯ ನಿರ್ದೇಶನಕ್ಕಾಗಿ ಕರ್ನಾಟಕ ರಾಜ್ಯ ಆರ್ಯಭಟ ಪ್ರಶಸ್ತಿಯನ್ನು ಇವರು ಪಡೆದಿದ್ದರು.

ವಿದ್ಯುತ್ ಬಳಕೆ; ದರ ಇಳಿಕೆ

ಹೆಚ್‌ಟಿ ಕಮರ್ಷಿಯಲ್: ವಿದ್ಯುತ್ ದರವು ಪ್ರತಿ ಯೂನಿಟ್‌ಗೆ 1 ರೂ. 25 ಪೈಸೆ ಕಡಿಮೆ ಮಾಡಲಾಗಿದೆ. ಅಂದರೆ ಬೇಡಿಕೆಯ ಶುಲ್ಕಗಳ ಪ್ರತಿ ಕೆವಿಎಗೆ (ಕಿಲೋವೋಲ್ಟ್ ಆಂಪಿಯರ್) ರೂ.10 ರಷ್ಟು ಕಡಿಮೆ ಮಾಡಲಾಗಿದೆ. **ಹೆಚ್‌ಟಿ ಇಂಡಸ್ಟ್ರಿಯಲ್:** ಪ್ರತಿ ಯೂನಿಟ್‌ಗೆ 50 ಪೈಸೆ ಇಳಿಕೆ ಮಾಡಲಾಗಿದೆ. ಬೇಡಿಕೆಯ ಶುಲ್ಕಗಳ ಪ್ರತಿ ಕೆವಿಎಗೆ ರೂ.10 ಕಡಿಮೆಯಾಗಿದೆ. **ಹೆಚ್‌ಟಿ ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಗಳು:** ಪ್ರತಿ ಯೂನಿಟ್‌ಗೆ 40 ಪೈಸೆ ಇಳಿಕೆ ಮಾಡಲಾಗಿದೆ. ಬೇಡಿಕೆಯ ಶುಲ್ಕಗಳು ಪ್ರತಿ ರೂ.10 ರಷ್ಟು ಕಡಿಮೆಯಾಗಿದೆ. **ಹೆಚ್‌ಟಿ ಖಾಸಗಿ ಏತ ನೀರಾವರಿ:** ಪ್ರತಿ ಯೂನಿಟ್‌ಗೆ 200 ಪೈಸೆ ಕಡಿಮೆಯಾಗಿದೆ. **ಹೆಚ್‌ಟಿ ವಸತಿ ಅಪಾರ್ಟ್‌ಮೆಂಟ್‌ಗಳು:** ಪ್ರತಿ ಪ್ರತಿ ಕೆವಿಎಗೆ ರೂ.10 ಕಡಿಮೆಯಾಗಿದೆ. **ಎಲ್‌ಟಿ ಖಾಸಗಿ ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಗಳು:** ಪ್ರತಿ ಯೂನಿಟ್‌ಗೆ 50 ಪೈಸೆ ಇಳಿಕೆ ಮಾಡಲಾಗಿದೆ. **ಎಲ್‌ಟಿ ಕೈಗಾರಿಕಾ ಸ್ಥಾಪನೆಗಳು:** ಪ್ರತಿ ಘಟಕಕ್ಕೆ 100 ಪೈಸೆ ಕಡಿಮೆ ಮಾಡಲಾಗಿದೆ. **ಎಲ್‌ಟಿ ವಾಣಿಜ್ಯ ಸ್ಥಾಪನೆಗಳು:** ಪ್ರತಿ ಯೂನಿಟ್‌ಗೆ 50 ರಷ್ಟು ಕಡಿಮೆಯಾಗಿದೆ.

ಪಾಕಿಸ್ತಾನ ಜಿಂದಾಬಾದ್ ಘೋಷಣೆ ಪ್ರಕರಣ

ಪರಿಷತ್‌ನಲ್ಲಿ ಸಭಾಪತಿಗಳ ಮುಂದೆ ಕೈ ಕೈ ಮಿಲಾಯಿಸಲು ಮುಂದಾದ ಸದಸ್ಯರು

ಬೆಂಗಳೂರು: ನೂತನ ರಾಜ್ಯಸಭಾ ಸದಸ್ಯ ಡಾ. ಸೈಯದ್ ನಾಸಿರ್ ಹುಸೇನ್ ಅಭಿಮಾನಿಗಳು ವಿಧಾನಸೌಧ ಆವರಣದಲ್ಲಿ 'ಪಾಕಿಸ್ತಾನ ಜಿಂದಾಬಾದ್' ಘೋಷಣೆ ಕೂಗಿದ್ದಾರೆ ಎಂಬ ಆರೋಪ ಇಂದು ಬುಧವಾರ ವಿಧಾನ ಮಂಡಲದ ಉಭಯ ಸದನಗಳಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ತೀವ್ರ ಗದ್ದಲ–ಕೋಲಾಹಲಕ್ಕೆ ಕಾರಣವಾಯಿತು.

ಇಂದು ವಿಧಾನಪರಿಷತ್ತಿನಲ್ಲಿ ಕಲಾಪ ಆರಂಭವಾಗುತ್ತಿದ್ದಂತೆ ಬಿಜೆಪಿ ಸದಸ್ಯರು ವಿಷಯ ಪ್ರಸ್ತಾಪಿಸಿದರು. ಪಾಕಿಸ್ತಾನ ಪರ ಘೋಷಣೆ ಹಾಕಿರುವ ವಿಚಾರವನ್ನು ಪರಿಷತ್ ಸದಸ್ಯ ಎನ್. ರವಿಕುಮಾರ್ ಪ್ರಸ್ತಾಪಿಸಿ ಇದು 'ದೇಶದ್ರೋಹಿ ಸರ್ಕಾರ' ಎಂದರು.

ಪದ ಬಳಕೆಯಿಂದ ಕೆರಳಿದ ಕಾಂಗ್ರೆಸ್ ಸದಸ್ಯ ಅಬ್ದುಲ್ ಜಬ್ಬಾರ್ 'ಅವನ ಬಾಯಿ ಬಂದ್ ಮಾಡಿ' ಎಂದು ರವಿಕುಮಾರ್ ಅವರ ಮೇಲೆ ಏಕವಚನ ಪ್ರಯೋಗ ಮಾಡಿದರು. ಇದರಿಂದ ವಿಧಾನಪರಿಷತ್‌ನಲ್ಲಿ ಗದ್ದಲ ಜೋರಾಯಿತು. ಅಬ್ದುಲ್ ಜಬ್ಬಾರ್ ಮಾತಿಗೆ ರೊಚ್ಚಿಗೆದ್ದ ಬಿಜೆಪಿ ಸದಸ್ಯರು ಏಕವಚನದಲ್ಲಿ ಮಾತಾಡಿದರೆ ಸರಿ ಇರಲ್ಲವೆಂದರು. ಬಳಿಕ ರವಿಕುಮಾರ್ ಎದ್ದು ಅಬ್ದುಲ್ ಜಬ್ಬರ್ ಬಳಿ ಹೋದರು. ರವಿಕುಮಾರ್ ಜೊತೆ ತುಳಸಿ ಮುನಿರಾಜುಗೌಡ ಮುನ್ನುಗ್ಗಿ ಹೋದರು. ಎರಡೂ ಕಡೆಯ ಸದಸ್ಯರು ಸಭಾಪತಿಗಳ ಮುಂದೆಯೇ ಕೈಕೈ ಮಿಲಾಯಿಸಲು ಮುಂದಾದರು.

ಪರಿಸ್ಥಿತಿ ನಿಯಂತ್ರಿಸಿದ ಮಾರ್ಷಲ್‌ಗಳು: ಈ ವೇಳೆ ಪರಿಸ್ಥಿತಿಯನ್ನು ನಿಯಂತ್ರಿಸಲು ಮಾರ್ಷಲ್‌ಗಳು ಹರಸಾಹಸಪಟ್ಟರು. ಮಧ್ಯ ಪ್ರವೇಶಿಸಿದ ಸಚಿವ ಹೆಚ್.ಕೆ.ಪಾಟೀಲ್ ಎರಡೂ ಕಡೆಯವರನ್ನು ಸಮಾಧಾನಪಡಿಸಿ ಕ್ಷಮೆ ಕೇಳುವಂತೆ ಸಲಹೆ ನೀಡಿದರು. ಇದಕ್ಕೆ ಎನ್. ರವಿಕುಮಾರ್ ದೇಶದ ಪರವಾಗಿ ಮಾತನಾಡಿದ್ದೇನೆ, ಅದು ಕ್ಷಮೆ ಕೇಳುವ ವಿಷಯವಾ ಎಂದರು. ಇತ್ತ ಅಬ್ದುಲ್ ಜಬ್ಬಾರ್ ನಿಮ್ಮ ಮೂಲಕ ನಾನು ಆಡಿದ ಮಾತು ವಾಪಸ್ ಪಡೆಯುತ್ತೇನೆ ಎಂದು ಹೇಳಿದಾಗ ಪರಿಸ್ಥಿತಿ ತಿಳಿಯಾಯಿತು.

ಏಕವಚನ ಬಳಕೆ: ಘರ್ಷಣೆಯ ಪರಿಸ್ಥಿತಿಗೆ ಹೊರಳಿದ ಪರಿಷತ್ ಕಲಾಪ

ಬೆಂಗಳೂರು: ಪರಿಷತ್ತಿನ ಕಾಂಗ್ರೆಸ್ ಸದಸ್ಯ ಅಬ್ದುಲ್ ಜಬ್ಬಾರ್ ಬಳಸಿದ ಏಕವಚನವು ಬಿಜೆಪಿ ಸದಸ್ಯರನ್ನು ರೊಚ್ಚಿಗೇಳಿಸಿದ್ದರಿಂದ ಕಲಾಪವು ಘರ್ಷಣೆಯ ಕಡೆಗೆ ಹೊರಳಿದ ಸ್ಥಿತಿ ನಿರ್ಮಾಣವಾಯಿತು.

ಸಭಾಪತಿ ಪೀಠದ ಎದುರು ನುಗ್ಗಿದ ವಿರೋಧಪಕ್ಷದ ಮುಖ್ಯಸಚೇತಕ ಎನ್. ರವಿಕುಮಾರ್ ಹಾಗೂ ತುಳಸಿ ಮುನಿರಾಜಗೌಡ ಅವರು, ಜಬ್ಬಾರ್ ಅವರನ್ನು ಉದ್ದೇಶಿಸಿ ಏಕವಚನ ಬಳಸಿದ್ದನ್ನು ಏರುಧ್ವನಿಯಲ್ಲಿ ಪ್ರಶ್ನಿಸಿದರು. ಸಚಿವರು, ಕಾಂಗ್ರೆಸ್ ಸದಸ್ಯರು ಜಬ್ಬಾರ್ ಬೆಂಬಲಕ್ಕೆ ನಿಂತರು. ಬಿಜೆಪಿ ಸದಸ್ಯರೆಲ್ಲರೂ ಸಭಾಪತಿ ಪೀಠದ ಎದುರು ಧಾವಿಸಿದರು.

ದೇಶದ್ರೋಹಿಗಳನ್ನು ಬಂಧಿಸಲು ಯೋಚನೆ ಮಾಡಬೇಕಾ?

ಶಿವಮೊಗ್ಗ, ಫೆ.28– ಸರ್ಕಾರಕ್ಕೆ ಮಾನ ಮರ್ಯಾದೆ ಇದ್ದರೆ ನಿನ್ನೆಯೇ ಬಂಧಿಸಬೇಕಿತ್ತು. ದೇಶದ್ರೋಹಿಗಳನ್ನು ಬಂಧಿಸಲು ಯೋಚನೆ ಮಾಡಬೇಕಾ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಶ್ನಿಸಿದ್ದಾರೆ. ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಘೋಷಣೆ ಆರೋಪ ವಿಚಾರವಾಗಿ ಜಿಲ್ಲೆಯ ಶಿಕಾರಿಪುರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಘೋಷಣೆ ಕೂಗಿದ ಜಾಗದಲ್ಲೇ ಒದ್ದು ಆತನನ್ನು ಬಂಧಿಸಬೇಕಿತ್ತು. ಕಾಂಗ್ರೆಸ್ ಸರ್ಕಾರ ಬಂದ ಮೇಲೆ ದೇಶದ್ರೋಹಿಗಳಿಗೆ ಬೆಂಬಲ ನೀಡಲಾಗುತ್ತಿದೆ ಎಂದು ವಾಗ್ದಾಳಿ ಮಾಡಿದ್ದಾರೆ.


ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಪ್ರತಿಕ್ರಿಯಿಸಿದ್ದು, ಪಾಕ್ ಪರ ಘೋಷಣೆ ಕೂಗಿದ್ದು ಅಕ್ಷಮ್ಯ ಅಪರಾಧ. ಪ್ರಕರಣದ ಬಗ್ಗೆ ರಾಜ್ಯ ಸರ್ಕಾರ ಸೂಕ್ತ



ಕ್ರಮ ಕೈಗೊಳ್ಳಬೇಕು. ಈಗಾಗಲೇ ಪರಿಷತ್ ಹಾಗೂ ವಿಧಾನಸಭೆಯಲ್ಲಿ ಚರ್ಚೆ ನಡೆದಿದೆ. ಜೆಡಿಎಸ್ ಮೈತ್ರಿ ನಮಗೆ ದೊಡ್ಡ ಶಕ್ತಿ ತಂದು ಕೊಂಡಂತಾಗಿದೆ. ಬರುವ ದಿನಗಳಲ್ಲಿ ಜೆಡಿಎಸ್, ಕುಮಾರಸ್ವಾಮಿ ಜೊತೆ ಒಟ್ಟಾಗಿ ಒಂದಾಗಿ ಚುನಾವಣೆ ಎದುರಿಸಲು ಸಿದ್ಧತೆ ನಡೆಸಿದೆ. ಇದಕ್ಕೆ ಪೂರಕವಾಗಿ ಶಾಸಕಿ ಶಾರದಾ ಪೂರ್ಯನಾಯ್ಕ್ ನಮ್ಮ ಜೊತೆ ಬಂದಿದ್ದಾರೆ. ಲೋಕಸಭೆ ಚುನಾವಣೆ ಎದುರಿಸಲು ಸಿದ್ಧತೆ ನಡೆದಿದೆ. 28 ಸ್ಥಾನಗಳಲ್ಲಿ 25 ಸ್ಥಾನಗಳನ್ನು ಗೆಲ್ಲುತ್ತೇವೆ. ಪ್ರಧಾನಿ ನರೇಂದ್ರ ಮೋದಿಯವರು ಮತ್ತೊಮ್ಮೆ ಪ್ರಧಾನಿಯನ್ನಾಗಿಸುತ್ತೇವೆ ಎಂದಿದ್ದಾರೆ.

ಮತಕ್ಕಾಗಿ ದೇಶದ ಭದ್ರತೆ ಅಡ ಇಡುತ್ತಿರುವ ಕಾಂಗ್ರೆಸ್

ಹುಬ್ಬಳ್ಳಿ: ಕೇವಲ ಮತಕ್ಕಾಗಿ ದೇಶದ



ಭದ್ರತೆಯನ್ನು ಅಡ ಇಡುವಂತಹ ಕೆಲಸವನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ. ಮುಖ್ಯಮಂತ್ರಿ ಅವರು ಮತ ಬ್ಯಾಂಕ್ ಓಲೈಕೆ ರಾಜಕಾರಣದ ಮುಸುಕು ಹಾಕಿಕೊಂಡಿದ್ದಾರೆ. ಹೀಗಾಗಿ ಅವರಿಗೆ ಬೇರೆ ಏನೂ ಕಾಣಿಸುತ್ತಿಲ್ಲ ಎಂದು ಶಾಸಕ ಬಸವರಾಜ ಬೊಮ್ಮಾಯಿ ಆರೋಪಿಸಿದರು. ವಿಧಾನಸೌಧದ ಕಾರಿಡಾರ್‌ನಲ್ಲಿ ವ್ಯಕ್ತಿಯೊಬ್ಬ 'ಪಾಕಿಸ್ತಾನ್ ಜಿಂದಾಬಾದ್' ಘೋಷಣೆ ಕೂಗಿದ ಪ್ರಕರಣಕ್ಕೆ ಪ್ರತಿಕ್ರಿಯಿಸಿ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ದೇಶದ್ರೋಹಿಗಳಿಗೆ ಹೆಚ್ಚು ಪ್ರೋತ್ಸಾಹ ಸಿಗುತ್ತಿದ್ದು, ಅವರಿಗೆ ಧೈರ್ಯ ಬಂದಿದೆ ಎಂದು ಹೇಳಿದರು.

ವಿಧಾನಸೌಧಕ್ಕೆ ಬಂದು ದೇಶದ್ರೋಹದ ಘೋಷಣೆ ಕೂಗಲು ಈ ಸರ್ಕಾರ ನೀಡಿರುವ ಪ್ರೋತ್ಸಾಹ ಕಾರಣ. ನಮ್ಮ ಸರ್ಕಾರ ಇದ್ದಾಗ ಇಂತಹ ಶಕ್ತಿಗಳನ್ನು ಸದೆಬಡಿದಿದ್ದೆವು ಎಂದರು.

ಕಾಂಗ್ರೆಸ್‌ನವರು ಒಂದು ಕಡೆ ದೇಶವನ್ನು ಒಡೆಯುವ ಮಾತನಾಡುತ್ತಾರೆ, ಇನ್ನೊಂದೆಡೆ ದೇಶದ್ರೋಹಿ ಶಕ್ತಿಗಳಿಗೆ ಕುಮ್ಮಕ್ಕು ನೀಡುತ್ತಾರೆ. ಕಾಂಗ್ರೆಸ್ ಪಕ್ಷದಿಂದ ಈ ದೇಶ, ನಾಡನ್ನು ಸುರಕ್ಷಿತವಾಗಿ ಇಡಲು ಸಾಧ್ಯವಿಲ್ಲ. ಅವರು ನೈತಿಕತೆ ಕಳೆದುಕೊಂಡಿದ್ದಾರೆ ಎಂದರು.

ಜನ ಎಚ್ಚೆತ್ತುಕೊಂಡು ಎಷ್ಟು ಬೇಗ ಈ ಸರ್ಕಾರವನ್ನು ಕಿತ್ತೊಗೆಯುತ್ತಾರೋ ಅಷ್ಟು ಬೇಗ ಈ ನಾಡು ಮತ್ತು ದೇಶಕ್ಕೆ ಒಳ್ಳೆಯದಾಗುತ್ತದೆ ಎಂದು ಹೇಳಿದರು.

ಭಯೋತ್ಪಾದಕ ಚಟುವಟಿಕೆ ಮಾಡುತ್ತಿದ್ದ ಪಿಎಫ್‌ಐ ಸಂಘಟನೆಯನ್ನು ನಿಷೇಧಿಸಲಾಗಿದೆ. ಅದು ಈಗ ಬೇರೆ ಬೇರೆ ರೂಪದಲ್ಲಿ ಕೆಲಸ ಮಾಡುತ್ತಿದೆ. ಈಚೆಗೆ ಹಾನಗಲ್‌ನಲ್ಲಿ ನಡೆದ ಘಟನೆ ಇದಕ್ಕೆ ಸಾಕ್ಷಿ. ರಾಜ್ಯದಲ್ಲಿ ಆತಂಕಕಾರಿ ವಾತಾವರಣ ನಿರ್ಮಾಣವಾಗಿದೆ ಎಂದರು. 15ಕ್ಕೂ ಹೆಚ್ಚು ಸ್ಲೀಪರ್ ಸೆಲ್‌ಗಳನ್ನು ನಮ್ಮ ಸರ್ಕಾರ ಇದ್ದಾಗ ಜೈಲಿಗಟ್ಟಿದ್ದೆವು. ಡಿಜೆ ಹಳ್ಳಿ, ಕೆಜಿ ಹಳ್ಳಿ, ಹುಬ್ಬಳ್ಳಿ ಮತ್ತು ಮಂಗಳೂರು ಘಟನೆಗಳಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗಿತ್ತು. ಈಗ ಅಂತಹ ವಾತಾವರಣ ಇಲ್ಲ. ಬಿಲದಲ್ಲಿ ಅಡಗಿ ಕುಳಿತಿದ್ದವರು ಈಗ ಧೈರ್ಯವಾಗಿ ಹೊರಗೆ ಬರುತ್ತಿದ್ದಾರೆ ಎಂದು ಹೇಳಿದರು.

ಆ.30ರಿಂದ ಸೆ.1ರವರೆಗೆ ಅಮೇರಿಕಾದಲ್ಲಿ 'ಅಕ್ಕ' ಸಮ್ಮೇಳನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ 12ನೇ ವಿಶ್ವ ಅಕ್ಕ ಸಮ್ಮೇಳನದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು, ಫೆ.28(ಜಿಎ)–ಅಮೇರಿಕಾದ ಅಕ್ಕ ಬಳಗದ ವತಿಯಿಂದ 12ನೇ ವಿಶ್ವ ಅಕ್ಕ ಸಮ್ಮೇಳನವನ್ನು ಅಮೇರಿಕಾದ ವಾಷಿಂಗ್ಟನ್ ಡಿಸಿಗೆ ಸುಮಾರು 120 ಮೈಲಿ ದೂರದಲ್ಲಿರುವ ರಿಚ್ಮಂಡ್ ನಗರದಲ್ಲಿ ಆಗಸ್ಟ್ 30, 31 ಮತ್ತು ಸೆಪ್ಟೆಂಬರ್ 1 ರಂದು ಆಯೋಜಿಸಲಾಗಿದೆ ಎಂದು ಸಮ್ಮೇಳನ ಸಮಿತಿ ಅಧ್ಯಕ್ಷರಾದ ರವಿ ಬೋರೇಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಮೆರಿಕದಲ್ಲಿನ ಕನ್ನಡಿಗರು ಒಟ್ಟುಗೂಡಿ ಕನ್ನಡ ಭಾಷೆ, ಸಂಸ್ಕೃತಿ, ಕಲೆ ಉಳಿಸಿಕೊಂಡು ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಸ್ಥಾಪಿಸಿಕೊಂಡಿರುವ ಅಕ್ಕ ಬಳಗದ ವತಿಯಿಂದ ವಿಶ್ವ ಅಕ್ಕ ಸಮ್ಮೇಳನವನ್ನು ಎರಡು ವರ್ಷಕ್ಕೊಮ್ಮೆ ನಡೆಸಿಕೊಂಡು ಬರುತ್ತಿದ್ದು, ಕೊರೊನಾ ಸಮಸ್ಯೆಯಿಂದ ಸಮ್ಮೇಳನ ಆಯೋಜಿಸಲು ಸಾಧ್ಯವಾಗಲಿಲ್ಲ. ಆದರೆ, ಈಗ ವಾತಾವರಣ ಮೊದಲಿನಂತೆ ಇದ್ದು, ಈ ಬಾರಿ ಅದ್ದೂರಿಯಾಗಿ ಆಯೋಜಿಸಲಾಗುತ್ತದೆ ಎಂದರು.

ಬಳಗದಲ್ಲಿರುವವರೆಲ್ಲ ರಾಜ್ಯದ ಯಾವುದೋ ಒಂದು ಕಡೆ ಜನಿಸಿ, ಎಲ್ಲೋ ಬೆಳೆದು ಅಮೆರಿಕದಲ್ಲಿ ವೈದ್ಯರು, ಎಂಜಿನಿಯರ್ ಮೊದಲಾದ ಸೇವೆ ಸಲ್ಲಿಸುತ್ತಿದ್ದೇವೆ. ಆದರೂ ಕನ್ನಡ ಭಾಷೆ, ಸಂಸ್ಕೃತಿ ಅಲ್ಲಿಯೂ ಉಳಿಸಿಕೊಂಡು ಮುಂದಿನ ಪೀಳಿಗೆಗೂ ಉಳಿಸಿಕೊಡುವ ಹಿನ್ನೆಲೆಯಲ್ಲಿ ಪ್ರತಿ ಎರಡು ವರ್ಷಕ್ಕೊಮ್ಮೆ ಈ ರೀತಿಯ ಸಮ್ಮೇಳನ ಆಯೋಜಿಸಲಾಗುತ್ತಿದೆ. ಇದರಲ್ಲಿ ವಿಶ್ವದಾದ್ಯಂತದ ಸುಮಾರು ಐದು ಸಾವಿರ ಮಂದಿ ಪಾಲ್ಗೊಳ್ಳುತ್ತಿದ್ದಾರೆ ಎಂದು ತಿಳಿಸಿದರು.

ಸಮ್ಮೇಳನದಲ್ಲಿ ಸ್ಥಳೀಯ ಹಾಗೂ ವಿಶ್ವದ ಇತರೆಡೆಯ ಕಲಾವಿದರು, ವಿದ್ಯಾರ್ಥಿಗಳ ಸಂಘಟನೆಗಳ ಹಳೆಯ ವಿದ್ಯಾರ್ಥಿಗಳು, ವಾಣಿಜ್ಯ ಮಳಿಗೆ, ಸಾಹಿತ್ಯ, ಸಂಸ್ಕೃತಿ ಮೊದಲಾದ ಕಾರ್ಯಕ್ರಮ ಇರಲಿವೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮ್ಮೇಳನ ಸಮಿತಿಯ ಡಾ.ವಿಶ್ವಾಮಿತ್ರ, ಮಹದೇಶ್, ಬಸವರಾಜು, ಡಾ.ನವೀನ್‌ಕೃಷ್ಣ, ವತ್ಸ ಉಪಸ್ಥಿತರಿದ್ದರು.

ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲೆತ್ನಿಸಿದ ಬಿಜೆಪಿ ಕಾರ್ಯಕರ್ತರ ಬಂಧನ, ಬಿಡುಗಡೆ

ಮೈಸೂರು, ಫೆ.28(ಜಿಎ)–ಕಾಂಗ್ರೆಸ್‌ನ ರಾಜ್ಯ ಸಭಾ ಅಭ್ಯರ್ಥಿ ನಾಸೀರ್ ಹುಸೇನ್ ಗೆಲುವಿನ ಸಂಭ್ರಮಾಚರಣೆ ವೇಳೆ ವಿಧಾನಸೌಧದಲ್ಲಿ ಪಾಕಿಸ್ತಾನ್ ಜಿಂದಾಬಾದ್ ಘೋಷಣೆ ಕೂಗಿದ್ದನ್ನು ಖಂಡಿಸಿ ಮೈಸೂರಿನಲ್ಲಿ ಕಾಂಗ್ರೆಸ್ ಭವನಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರನ್ನು ಬುಧವಾರ ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದರು.

ನಗರದ ಶಿವರಾಮಪೇಟೆ ರಸ್ತೆ ಮೂಲಕ ಮೆರವಣಿಗೆ ಮೂಲಕ ಬಂದ ನೂರಾರು ಯುವ ಮೋರ್ಚಾ ಕಾರ್ಯಕರ್ತರು ಕಾಂಗ್ರೆಸ್‌ಗೆ ಧಿಕ್ಕಾರ, ಭಾರತ ವಿರೋಧಿ ಕಾಂಗ್ರೆಸ್, ನಾಸಿರ್ ಹುಸೇನ್‌ಗೆ ಧಿಕ್ಕಾರ, ಪಾಕ್ ಏಜೆಂಟ್ ನಾಸಿರ್ ಎಂದು ನಾಸೀರ್ ಹುಸೇನ್ ಫೋಟೋಗಳನ್ನು ಹಿಡಿದು ನಾನಾ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.



ಮೈಸೂರಿನ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು.

ನಂತರ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತಕ್ಕೆ ಕಾರ್ಯಕರ್ತರು ಆಗಮಿಸುತ್ತಿದ್ದಂತೆ ನಾಸೀರ್ ಹುಸೇನ್ ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆಯಲು ಆರಂಭಿಸಿದರು. ಈ ವೇಳೆ ಸ್ಥಳದಲ್ಲಿದ್ದ ಪೊಲೀಸರು ಭಾವಚಿತ್ರವನ್ನು ಕಸಿದುಕೊಳ್ಳಲು ಮುಂದಾದಾಗ ಪ್ರತಿಭಟನಾಕಾರರು ಭಾವಚಿತ್ರ ಹರಿದು ಹಾಕಿದರು. ಪ್ರತಿಭಟನಾಕಾರರು ವೃತ್ತದಿಂದ ಕಾಂಗ್ರೆಸ್ ಕಚೇರಿಯತ್ತ ತೆರಳಲು ಮುಂದಾಗುತ್ತಿದ್ದಂತೆ ಪೊಲೀಸರು ಕಾರ್ಯಕರ್ತರನ್ನು ವಶಕ್ಕೆ ಪಡೆದುಕೊಂಡು ಸಿಎಆರ್ ಮೈದಾನಕ್ಕೆ ಕೊಂಡೊಯ್ದು, ನಂತರ ಬಿಡುಗಡೆಗೊಳಿಸಿದರು. ಮುನ್ನೆಚ್ಚರಿಕೆ ಕ್ರಮವಾಗಿ ಡಿಸಿಪಿ ಮುತ್ತುರಾಜ್ ಅವರ ನೇತೃತ್ವದಲ್ಲಿ ರಸ್ತೆಗಳಿಗೆ ಬ್ಯಾರಿಕೇಡ್ ಅಳವಡಿಸಿ, ಪೊಲೀಸ್ ಸಿಬ್ಬಂದಿಗಳನ್ನು ಕಾಂಗ್ರೆಸ್ ಕಚೇರಿ ಬಳಿಯೂ ನಿಯೋಜಿಸಿದರು. ಪ್ರತಿಭಟನೆಯಲ್ಲಿ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಎಂ.ಜೆ.ಕಿರಣ್‌ಗೌಡ, ಕವೀಶ್ ಗೌಡ, ಜೋಗಿ ಮಂಜು, ಹೇಮಾ ನಂದೀಶ್ ಮತ್ತು ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಹತ್ತು ವರ್ಷದಲ್ಲಿ ಪ್ರತಾಪ್‌ಸಿಂಹ ಉತ್ತಮ ಸಾಧನೆ ಮಾಡಿದ್ದಾರೆ

ಮೈಸೂರು–ಕೊಡಗು ಸಂಸದರ ಪರ ಸಾ.ರಾ.ಮಹೇಶ್ ಬ್ಯಾಟಿಂಗ್

ಮೈಸೂರು, ಫೆ.28(ಜಿಎ)–ಮೈಸೂರು–ಕೊಡಗು ಕ್ಷೇತ್ರದ ಬಿಜೆಪಿ ಸಂಸದ ಪ್ರತಾಪ್ ಸಿಂಹ ಅವರು ಕಳೆದ 10 ವರ್ಷಗಳಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಒಟ್ಟಾರೆ ನಾನು ಲೋಕಸಭೆ ಚುನಾವಣೆಯ ಆಕಾಂಕ್ಷಿಯಲ್ಲ ಎಂದು ಮಾಜಿ ಸಚಿವ ಸಾ.ರಾ. ಮಹೇಶ್, ಪ್ರತಾಪ್ ಸಿಂಹ ಪರ ಬ್ಯಾಟ್ ಬೀಸಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ 'ಅಕ್ಕ' ಸಮ್ಮೇಳನದ ಕುರಿತು ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಲೋಕಸಭಾ ಚುನಾವಣೆ ಸ್ಪರ್ಧೆ ವಿಚಾರವಾಗಿ ಉತ್ತರಿಸಿದ ಅವರು, ಪ್ರಸ್ತುತ ದೈಹಿಕ, ಮಾನಸಿಕ ಮತ್ತು ಆರ್ಥಿಕ ಸ್ಥಿತಿ ಉತ್ತಮವಿಲ್ಲದ ಕಾರಣ ಸದ್ಯದಲ್ಲಿ ಯಾವುದೇ ಸಾರ್ವತ್ರಿಕ



ಸಾ.ರಾ.ಮಹೇಶ್



ಪ್ರತಾಪ್ ಸಿಂಹ

ಚುನಾವಣೆಯಲ್ಲೂ ತಾವು ಸ್ಪರ್ಧಿಸುತ್ತಿಲ್ಲ. ಹೀಗಾಗಿ ಯಾವುದೇ ಚುನಾವಣೆಯ ಟಿಕೆಟ್ ಆಕಾಂಕ್ಷಿಯಲ್ಲ ಎಂದು ಸ್ಪಷ್ಟಪಡಿಸಿದರು.

ಬಹುಶಃ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ. ಕುಮಾರಸ್ವಾಮಿಯವರು ಪಕ್ಷದ ಹಿತ ದೃಷ್ಟಿಯಿಂದ ನಾನು ಸ್ಪರ್ಧಿಸಬೇಕೆಂದು ಬಯಸಿದ್ದರು. ಆದರೆ ಚುನಾವಣೆಯಲ್ಲಿ ಸ್ಪರ್ಧಿಸದಿರುವ ನನ್ನ ನಿರ್ಧಾರವನ್ನು ಅವರಿಗೆ ಸ್ಪಷ್ಟವಾಗಿ ತಿಳಿಸಿದ್ದೇನೆ.

ಬಿಜೆಪಿ ನಾಯಕರೊಂದಿಗಿನ ಸಭೆಗಳ ಕುರಿತು ಪ್ರತಿಕ್ರಿಯಿಸಿದ ಅವರು, ನಾನು ಬಿಜೆಪಿಯೊಂದಿಗೆ ಮೂರು ದಶಕಗಳಿಗೂ ಹೆಚ್ಚು ನಿಕಟ ಒಡನಾಟವನ್ನು ಹೊಂದಿದ್ದು, ಇದು ರಾಜಕೀಯ ಮಾಡುವ ವಿಷಯವಲ್ಲ. ನಮಗೆ ಮಾಜಿ ಸಿಎಂ ಕುಮಾರಸ್ವಾಮಿ ಅವರೇ ಸರ್ವೋಚ್ಚ ನಾಯಕ. ರಾಜ್ಯ ಮತ್ತು ದೇಶದಿಂದ ಕಾಂಗ್ರೆಸ್ ಪಕ್ಷವನ್ನು ಕಿತ್ತೊಗೆಯಬೇಕು. ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡಬೇಕು ಮತ್ತು ರಾಜ್ಯದಲ್ಲಿ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಬೇಕು ಎಂಬುದು ನಮ್ಮ ಗುರಿಯಾಗಿದೆ ಎಂದರು.

ಪಾಕಿಸ್ತಾನ ಜಿಂದಾಬಾದ್ ಘೋಷಣೆ ಆರೋಪ: ಎಫ್‌ಎಸ್‌ಎಲ್ ವರದಿಯಲ್ಲಿ ಸಾಬೀತಾದರೆ ಕಠಿಣ ಶಿಕ್ಷೆ

ಬೆಂಗಳೂರು: ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗಿದ್ದು ಎಫ್‌ಎಸ್‌ಎಲ್ ತನಿಖಾ ವರದಿಯಲ್ಲಿ ಸಾಬೀತಾದರೆ ಅಂತಹವರಿಗೆ ಕಠಿಣ ಶಿಕ್ಷೆ ನೀಡಲು ನಾವು ಬದ್ಧ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಘಟನೆಯ ಬಗ್ಗೆ ನಡೆದ ಚರ್ಚೆಗೆ ಉತ್ತರ ನೀಡಿದ ಅವರು, ರಾಜಕೀಯ ಚರ್ಚೆ ಮಾಡಲು ಇಂತಹ ಗಂಭೀರವಾದ ವಿಚಾರ ಉಪಯೋಗ ಮಾಡ್ತಿದ್ದೇವೆ. ಇಂತಹ ವಿಚಾರ ಚರ್ಚೆ ಮಾಡುವಾಗ ನೈಜ ವಿಚಾರವಾಗಿ ಚರ್ಚೆ ಮಾಡಬೇಕು. ಹಾಗಾದಾಗ ಈ ರೀತಿಯ ಘಟನೆಗಳು ಮರುಕಳಿಸಲ್ಲ ಎಂದರು.

ಕಾಂಗ್ರೆಸ್ ಪಕ್ಷಕ್ಕೆ ದೇಶಪ್ರೇಮದ ಪಾಠದ ಅಗತ್ಯ ಇಲ್ಲ. ದೇಶದ ಸ್ವಾತಂತ್ರ್ಯಕ್ಕೆ ಎಷ್ಟು ಜನರನ್ನು ಬಲಿ ಕೊಟ್ಟಿಲ್ಲ ಸ್ವಾತಂತ್ರ್ಯ ಪೂರ್ವ ಕಾಂಗ್ರೆಸ್ ಹಾಗೂ ಇಂದಿನ ಕಾಂಗ್ರೆಸ್ ಬೇರೆ ಆಗಿರಬಹುದು.



ಆದರೆ, ನಮ್ಮ ಬದ್ಧತೆ, ನಿಲುವುಗಳಲ್ಲಿ ಬದಲಾವಣೆ ಆಗಿಲ್ಲ. ಹಾಗಾಗಿ ಕಾಂಗ್ರೆಸ್‌ಗೆ ದೇಶಪ್ರೇಮದ ಪಾಠ ಮಾಡುವ ಅಗತ್ಯವಿಲ್ಲ ಎಂದು ತಿರುಗೇಟು ನೀಡಿದರು. ಪ್ರಧಾನಿ ಮೋದಿ ಪಾಕಿಸ್ತಾನಕ್ಕೆ ಹೋದಾಗ ನಾವು ತಪ್ಪು ತಿಳಿದುಕೊಂಡಿದ್ದೆವಾ ಎಂದರು.

ಈ ಘಟನೆ ಆಗಬಾರದಿತ್ತು. ಮಾಧ್ಯಮಗಳಲ್ಲಿ ಎರಡು ಅಭಿಪ್ರಾಯವಿದೆ. ಈ ನಿಟ್ಟಿನಲ್ಲಿ ಸ್ವಯಂಪ್ರೇರಿತ ಕೇಸ್ ದಾಖಲಾಗಿದೆ. ಗೆದ್ದಾಗ ಅವರವರ ಅಭಿಮಾನಿಗಳು ಬಂದಿದ್ದಾರೆ. ಆದರೆ ಯಾರಿಗೂ ಬಿಡಬಾರದಿತ್ತು. ಪಾಕಿಸ್ತಾನ ಘೋಷಣೆ ಕೂಗಿದರೆ ಅದನ್ನು ತಾಂತ್ರಿಕವಾಗಿ ತನಿಖೆ ಆಗಬೇಕು. ಘೋಷಣೆ ಕೂಗಿದ್ದರೆ ಅವನಿಗೆ ಒಂದು ಕ್ಷಣ ಬಿಡಲ್ಲ. ಕಾನೂನಿನಲ್ಲಿ ಏನು ಶಿಕ್ಷೆ ಕೊಡಬೇಕೋ ಅದನ್ನು ನೀಡುತ್ತೇವೆ ಎಂದರು.

ದಿ.ರಾಕೇಶ್ ಸಿದ್ದರಾಮಯ್ಯ ಸ್ಮಾರಕ ಶ್ರೀನಿವಾಸ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಶ್ರೀನಿವಾಸ ಮಲ್ಟಿಸ್ಪೆಷಾಟಿ ಆಸ್ಪತ್ರೆಯ ಪೋಸ್ಟರ್ ಬಿಡುಗಡೆಗೊಳಿಸಿದರು.

ಮೈಸೂರು, ಫೆ.28(ಜಿಎ)– ದಿವಂಗತ ರಾಕೇಶ್ ಸಿದ್ದರಾಮಯ್ಯ ಸ್ಮರಣಾರ್ಥ ಮೈಸೂರಿನ ಎನ್.ಆರ್. ಮೊಹಲ್ಲಾದ ಶಿವಾಜಿ ಮುಖ್ಯರಸ್ತೆಯಲ್ಲಿ ನಿರ್ಮಿಸಿರುವ 50 ಹಾಸಿಗೆಗಳ ಶ್ರೀನಿವಾಸ ಮಲ್ಟಿಸ್ಪೆಷಾಟಿ ಆಸ್ಪತ್ರೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾ.1 ರಂದು ಉದ್ಘಾಟಿಸಲಿದ್ದಾರೆ ಎಂದು ಶ್ರೀನಿವಾಸ ಮಲ್ಟಿಸ್ಪೆಷಾಟಿ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಜಿ.ಎಸ್. ವೆಂಕಟೇಶ್ ಗಂಧನಹಳ್ಳಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ಅಂದು ಸಂಜೆ 5.30ಕ್ಕೆ ನಡೆಯುವ ಉದ್ಘಾಟನಾ ಕಾರ್ಯಕ್ರಮದಲ್ಲಿ ಕಾಗಿನೆಲೆ ಮೈಸೂರು ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಶಾಸಕ ತನ್ವೀರ್ ಸೇಠ್ ಅಧ್ಯಕ್ಷತೆ ವಹಿಸುವರು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ. ಮಹದೇವಪ್ಪ, ಕೃಷಿ ಸಚಿವ ಚೆಲುವನಾರಾಯಣಸ್ವಾಮಿ, ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್, ಆಶ್ರಯ ಸಮಿತಿ ಅಧ್ಯಕ್ಷ ಯತೀಂದ್ರ ಸಿದ್ದರಾಮಯ್ಯ, ಶಾಸಕರಾದ ಡಿ. ರವಿಶಂಕರ್, ಕೆ. ಹರೀಶ್‌ಗೌಡ, ಅನಿಲ್ ಚಿಕ್ಕಮಾದು, ಗಣೇಶ್‌ಪ್ರಸಾದ್, ದರ್ಶನ್ ಧ್ರುವನಾರಾಯಣ್ ಸೇರಿದಂತೆ ಇನ್ನಿತರ ಗಣ್ಯರು ಮುಖ್ಯ ಅತಿಥಿಯಾಗಿ ಭಾಗ ವಹಿಸುವರು ಎಂದರು.

ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆ ಫೆಸಿಲಿಟಿ ಡೈರೆಕ್ಟರ್ ಅನಂತ್ ಕುಮಾರ್, ಅಖಿಲ ಕರ್ನಾಟಕ ಸಿದ್ದರಾಮಯ್ಯ ಬ್ರಿಗೇಡ್ ರಾಜ್ಯಾಧ್ಯಕ್ಷ ಹಿನಕಲ್ ಉದಯ್, ಚಾಮುಂಡೇಶ್ವರಿ ಕ್ಷೇತ್ರದ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಆರೀಫ್ ಪಾಷ, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು ಡಾ. ಕಮಲಮ್ಮ , ಎನ್.ಆರ್.ಕ್ಷೇತ್ರದ ಅಧ್ಯಕ್ಷ ಇಕ್ಬಾಲ್, ಡಾ.ಶಾಜಿ ಉಪಸ್ಥಿತರಿದ್ದರು.

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಆಸ್ಪತ್ರೆಗೆ ದಾಖಲು

ಬೆಂಗಳೂರು, ಫೆ.28–ಮಾಜಿ



ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಬುಧವಾರ ವಿಧಾನ ಸಭಾ ಅಧಿವೇಶನದ ಕಲಾಪದಲ್ಲಿ ಪಾಲ್ಗೊಳ್ಳಲು ಆಗಮಿಸಿದ ವೇಳೆ ಗಂಟಲು ನೋವು ಕಾಣಿಸಿಕೊಂಡಿದ್ದು, ನೇರವಾಗಿ ಅಲ್ಲಿಂದ ಜಯನಗರ ಅಪೋಲೋ ಆಸ್ಪತ್ರೆಗೆ ದಾಖಲಾಗಿದ್ದಾರೆ. ರಾಜ್ಯಸಭಾ ಚುನಾವಣೆ ಮುಕ್ತಾಯದ ಹಿನ್ನೆಲೆಯಲ್ಲಿ ಮುಂದೂಡಿಕೆ ಮಾಡಲಾಗಿದ್ದ ವಿಧಾನಸಭಾ ಅಧಿವೇಶನದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಗಂಟಲು ನೋವು ಕಾಣಿಸಿಕೊಂಡಿದೆ. ಅಂದರೆ, ಇದಕ್ಕೂ ಮುನ್ನ ಕಳೆದೊಂದು ವಾರದಿಂದ ಕುಮಾರಸ್ವಾಮಿ ಅವರು ಗಂಟಲು ಇನ್ಫೆಕ್ಷನ್‌ನಿಂದ ಬಳಲುತ್ತಿದ್ದರು. ಇನ್ನು ವಿಧಾನ ಸಭಾ ಕಲಾಪದಲ್ಲಿ ಪಾಲ್ಗೊಂಡು ಮಾತನಾಡಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಜಯನಗರ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಶ್ರಮಜೀವಿಗಳ ಪರ ಸಿಐಟಿಯು ಪ್ರತಿಭಟನೆ

ಬೆಲೆ ಏರಿಕೆ ನಿಯಂತ್ರಿಸಿ, ರೈತ ವಿರೋಧಿ ಕೃಷಿ ಕಾನೂನು ಹಿಂಪಡೆಯಬೇಕು, ರೈಲ್ವೆ, ವಿದ್ಯುತ್ ವಲಯ ಖಾಸಗೀಕರಣ ಬೇಡ

ಮೈಸೂರು, ಫೆ.28(ಜಿಎ)–ಶ್ರಮಜೀವಿಗಳ ಬದುಕು ಉತ್ತಮಪಡಿಸುವಂತೆ ಆಗ್ರಹಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್(ಸಿಐಟಿಯು) ಸದಸ್ಯರು ಬುಧವಾರ ಪ್ರಧಾನ ಅಂಚೆ ಕಚೇರಿ ಮುಂದೆ ಪ್ರತಿಭಟಿಸಿ, ನಂತರ ಜನರಿಂದ ಸಂಗ್ರಹಿಸಿದ್ದ ಸಹಿಯನ್ನು ಪ್ರಧಾನ ಮಂತ್ರಿಗಳ ಕಚೇರಿಗೆ ಕಳುಹಿಸಿದರು.

ಸರ್ಕಾರ ಬೆಲೆ ಏರಿಕೆ ನಿಯಂತ್ರಿಸಿ, ಬಡವರ ಬದುಕು ಉತ್ತಮಪಡಿಸುವ ಯೋಜನೆ ಜಾರಿಗೊಳಿಸಬೇಕು. ರೈತ ವಿರೋಧಿ ಕೃಷಿ ಕಾನೂನು ಹಿಂಪಡೆದು, ಬೆಳೆಗಳಿಗೆ ಲಾಭದಾಯಕ ಬೆಂಬಲ ಬೆಲೆ ಘೋಷಿಸಬೇಕು. ದೇಶದ ಐಕ್ಯತೆ ಒಡೆಯುವ ಶಕ್ತಿ ನಿಗ್ರಹಿಸಲು ಕ್ರಮವಹಿಸಬೇಕು. ರೈಲ್ವೇ, ವಿದ್ಯುತ್ ಹಾಗೂ ಹಣಕಾಸು ವಲಯವನ್ನು ಖಾಸಗೀಕರಣ ಮಾಡಬಾರದು ಎಂದು ಆಗ್ರಹಿಸಿದರು.



ಪ್ರಧಾನ ಅಂಚೆ ಕಚೇರಿ ಮುಂದೆ ಶ್ರಮಜೀವಿಗಳ ಬದುಕು ಉತ್ತಮಪಡಿಸುವಂತೆ ಆಗ್ರಹಿಸಿ ಸಿಐಟಿಯು ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಅರೆ ಕುಶಲ ಕಾರ್ಮಿಕರಿಗೆ ಕನಿಷ್ಠ 31 ಸಾವಿರ ರೂ. ವೇತನ ನಿಗದಿಪಡಿಸಬೇಕು. ದಿನಕ್ಕೆ ನಾಲ್ಕು ಪಾಳಿಯ ಕೆಲಸ ಆರಂಭಿಸಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವ ಯೋಜನೆ ಜಾರಿ ಮಾಡಬೇಕು. ಕಾರ್ಮಿಕ ಸಂಘಟನೆಗಳಿಗೆ ಮಾನ್ಯತೆ ನೀಡಬೇಕು. ಅಸಂಘಟಿತ ಕಾರ್ಮಿಕರಿಗೆ ಭವಿಷ್ಯ ನಿಧಿ ರೂಪಿಸಬೇಕು' ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಂಘಟನೆ ಅಧ್ಯಕ್ಷ ಜಯರಾಂ, ಕಾರ್ಯಾಧ್ಯಕ್ಷ ಎಚ್.ಎಸ್.ಜಗದೀಶ, ಖಜಾಂಚಿ ಎಂ.ಅಣ್ಣಪ್ಪ ಪ್ರಧಾನ ಕಾರ್ಯದರ್ಶಿ ಬಾಲಾಜಿರಾವ್ ಪಾಲ್ಗೊಂಡಿದ್ದರು.

ಇಂದಿನಿಂದ ಉಜ್ಜಯನಿಯ ಮಹಾಕಾಳೇಶ್ವರ ಮೂರ್ತಿಯ ಪ್ರತಿರೂಪ ದರ್ಶನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಬ್ರಹ್ಮಕುಮಾರೀಸ್ ಸಂಸ್ಥೆ ಅವರು ಮಹಾಕಾಳೇಶ್ವರ ದರ್ಶನದ ಬಗ್ಗೆ ವಿವರಿಸಿದರು.

ಮೈಸೂರು, ಫೆ.28(ಜಿಎ)– ಮೈಸೂರಿನ ಸರಸ್ವತಿಪುರಂ ಸಾಹುಕಾರ್ ಚೆನ್ನಯ್ಯ ರಸ್ತೆಯಲ್ಲಿರುವ ಓಂಕಾರ್‌ಮಲ್ ಸೋಮಾನಿ ಶಿಕ್ಷಣ ಸಂಸ್ಥೆಯಲ್ಲಿ ಬ್ರಹ್ಮಕುಮಾರೀಸ್ ಸಂಸ್ಥೆ ವತಿಯಿಂದ ಮಹಾ ಶಿವರಾತ್ರಿ ಪ್ರಯುಕ್ತ ಫೆ.29 ರಿಂದ 11 ದಿನಗಳ ಕಾಲ ಉಜ್ಜಯನಿಯ ಮಹಾಕಾಳೇಶ್ವರ ಮೂರ್ತಿಯ ಪ್ರತಿರೂಪದ ದರ್ಶನವನ್ನು ಏರ್ಪಡಿಸಲಾಗಿದೆ ಎಂದು ರಾಜಯೋಗಿನಿ ಮಂಜುಳಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಫೆ.29ರ ಬೆಳಗ್ಗೆ 10.30ಕ್ಕೆ ಆದಿಚುಂಚನಗಿರಿ ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ ಉದ್ಘಾಟಿಸುವರು, ಮುಖ್ಯ ಅತಿಥಿಗಳಾಗಿ ಶಾಸಕ ಕೆ.ಹರೀಶ್ ಗೌಡ, ರಾಜಯೋಗಿನಿ ಬಿ.ಕೆ.ಲಕ್ಷ್ಮಿ, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ವಿಮಾನ ನಿಲ್ದಾಣ ಪ್ರಾಧಿಕಾರದ ಮಾಜಿ ನಿರ್ದೇಶಕ ಆರ್.ಮಂಜುನಾಥ್, ಡಾ.ಎಂ.ಪುಟ್ಟಸ್ವಾಮಿ, ಯೋಗ ಪಟು ಖುಷಿ ಹೇಮಚಂದ್ರ ಆಗಮಿಸಲಿದ್ದಾರೆ. ಶಿವರಾತ್ರಿಯ ಅಂಗವಾಗಿ 11 ದಿನ ವಿವಿಧ ರೀತಿಯ ಪೂಜಾ ಕಾರ್ಯಗಳು ಇಲ್ಲಿ ನಡೆಯಲಿವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ರಂಗನಾಥ್, ಸೂರ್ಯನಾರಾಯಣ, ಪುಟ್ಟಸ್ವಾಮಿ ಉಪಸ್ಥಿತರಿದ್ದರು.



ಮೈಸೂರಿನ ಸಾತಗಳ್ಳಿ ಬಡಾವಣೆಯಲ್ಲಿರುವ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ವಿಜ್ಞಾನ ದಿನ ಆಚರಿಸಲಾಯಿತು. ಈ ವೇಳೆ ಡಾ. ಚಾರ್ಲ್ಸ್ ಸಿವಿರೆನ್ಸ್, ಮಾಲವ್ ಆಚಾರ್ಯ, ಡಾ.ಟಿ.ಪಿ.ರೇಣುಕಾಮೂರ್ತಿ, ಕಾರ್ಯಕ್ರಮ ಸಂಯೋಜಕರಾದ ಡಾ.ಆಲಿ ಅಹಮದ್, ಡಾ.ಯತೀಶ್‌ಚಂದ್ರ ಮತ್ತಿತರರು ಉಪಸ್ಥಿತರಿದ್ದರು.

ಅನಾರೋಗ್ಯ ಕಾರಣದಿಂದ ವೋಟ್ ಮಾಡಿಲ್ಲ

ಕಾರವಾರ : ಮಂಗಳವಾರ ನಡೆದ ರಾಜ್ಯಸಭಾ ಚುನಾವಣೆಯ ಮತದಾನಕ್ಕೆ ಯಲ್ಲಾಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಶಿವರಾಮ್ ಹೆಬ್ಬಾರ್ ಗೈರಾಗಿದ್ದರು. ಈ ಮೂಲಕ ಕಾಂಗ್ರೆಸ್ ಪರ ನಿಲುವನ್ನು ಹೆಬ್ಬಾರ್ ವ್ಯಕ್ತಪಡಿಸಿದ್ದರು ಎನ್ನಲಾಗಿತ್ತು. ಅಲ್ಲದೇ ಅವರು ಬಿಜೆಪಿಯನ್ನು ತೊರೆಯಲಿದ್ದಾರೆ ಎಂಬ ಸುದ್ದಿಗಳು ಕೂಡ ಹರಿದಾಡುತ್ತಿದ್ದವು. ಈ ಎಲ್ಲ ಗೊಂದಲಗಳಿಗೆ ಸ್ವತಃ ಶಿವರಾಮ್ ಹೆಬ್ಬಾರ್ ಸ್ಪಷ್ಟನೆ ನೀಡಿದ್ದು, ಅನಾರೋಗ್ಯದ ಕಾರಣ ರಾಜ್ಯಸಭಾ ಚುನಾವಣೆಯಲ್ಲಿ ಮತದಾನ ಮಾಡಲು ಆಗಲಿಲ್ಲ ಎಂದಿದ್ದಾರೆ.

ರಾಜ್ಯಸಭಾ ಚುನಾವಣೆಗೆ ಗೈರಾಗಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಬೆಳಗ್ಗೆ ಆರೋಗ್ಯ ಸರಿ ಇರಲಿಲ್ಲ. ವೈದ್ಯರ ಸಲಹೆಯಂತೆ ಸಂಜೆ 6 ಗಂಟೆಗೆ ಮನೆಗೆ ಬರಬೇಕಾಯ್ತು. ಪಕ್ಷದ ಬಗ್ಗೆ ಅಸಮಾಧಾನ ವಿದ್ದಿದ್ದರೆ ಅಡ್ಡ ಮತದಾನ ಮಾಡುವ ಅವಕಾಶ ಇತ್ತು. ಆದರೆ, ನಾನು ಆ ರೀತಿ ಮಾಡಲಿಲ್ಲ ಎಂದಿದ್ದಾರೆ.



ಈ ಮೂಲಕ ಮತದಾನಕ್ಕೆ ಗೈರಾಗಿರುವ ತಮ್ಮ ನಡೆಯನ್ನು ಶಿವರಾಮ್ ಹೆಬ್ಬಾರ್ ಸಮರ್ಥಿಸಿಕೊಂಡಿದ್ದಾರೆ.

ನಾನು ನಾಲ್ಕು ದಶಕದಿಂದ ರಾಜಕಾರಣದಲ್ಲಿ ಇದ್ದೇನೆ. ಯಾರಿಗೋ ಹೆದರಿಕೊಂಡು ಮತದಾನಕ್ಕೆ ಹೋಗಿಲ್ಲ ಎನ್ನುವುದು ನಿಜವಲ್ಲ. ನಾನು ಮತದಾನಕ್ಕೆ ಹೋಗಿ ಅಡ್ಡ ಮತದಾನ ಮಾಡಬಹುದಿತ್ತು, ಇಲ್ಲವೇ ಮತದಾನ ಮಾಡದೆಯೇ ಇರಬಹುದಿತ್ತು. ನಾನು ಯಾರಿಗೂ ವಾರ್ನಿಂಗ್ ಕೊಡಲು ಹೋಗಿಲ್ಲ. ನನಗೆ ನನ್ನದೇ ಆದ ಅಸಮಾಧಾನ ಇರುವುದು ನಿಜ. ಅದು ಜಿಲ್ಲಾ ಮಟ್ಟದಲ್ಲಿ ಮಾತ್ರ ಎಂದು ಯಲ್ಲಾಪುರ ಬಿಜೆಪಿ ಶಾಸಕ ಹೇಳಿದ್ದಾರೆ.

ನನಗೆ ಕೇಂದ್ರ ಮತ್ತು ರಾಜ್ಯದ ಮುಖಂಡರ ಮೇಲೆ ಯಾವುದೇ ಅಸಮಾಧಾನ ಇಲ್ಲ. ಸಮಸ್ಯೆ ಇರುವುದು ಜಿಲ್ಲಾ ಮಟ್ಟದ ನಾಯಕರಿಂದ ಮಾತ್ರ. ಯಾರು ಅಡ್ಡಗಾಲು ಹಾಕುತ್ತಿದ್ದಾರೆ ಎಂಬುದಕ್ಕೆ ಕಾಲವೇ ಉತ್ತರ ಕೊಡಲಿದೆ ಎಂದು ಶಿವರಾಮ್ ಹೆಬ್ಬಾರ್ ತಿಳಿಸಿದ್ದಾರೆ.

ಇಡೀ ದಿನ ಮೊಬೈಲ್ ಸ್ವಿಚ್ ಆಫ್: ಶಿವರಾಮ್ ಹೆಬ್ಬಾರ್ ಅವರ ಮೊಬೈಲ್ ಮಂಗಳವಾರ ಇಡೀ ದಿನ ಸ್ವಿಚ್ ಆಫ್ ಆಗಿತ್ತು. ಬಿಜೆಪಿ ನಾಯಕರು ಎಷ್ಟೇ ಸಂಪರ್ಕ ಸಾಧಿಸಲು ಪ್ರಯತ್ನಿಸಿದರು ಹೆಬ್ಬಾರ್ ನಾಟ್ ರಿಚೇಬಲ್ ಆಗಿದ್ದರು. ಶಾಸಕರ ಕೊಠಡಿಯ ಬಾಗಿಲಿಗೆ ಬಿಜೆಪಿ ವಿಪ್ ದೊಡ್ಡನಗೌಡ ಪಾಟೀಲ್ ವಿಪ್ ಅಂಟಿಸಿ ಬಂದಿದ್ದರು. ಟಿವಿಯಲ್ಲೂ ಕೂಡ ಬಿಜೆಪಿ ನಾಯಕರು ಬಂದು ಮತ ಹಾಕುವಂತೆ ಶಿವರಾಮ್ ಹೆಬ್ಬಾರ್‌ಗೆ ಮನವಿ ಮಾಡಿದ್ದರು. ಆದರೆ, ಶಿವರಾಮ್ ಹೆಬ್ಬಾರ್ ಯಾವುದೇ ರೀತಿಯಲ್ಲೂ ಸ್ಪಂದಿಸಿದ್ದಿಲ್ಲ. ಈಗ ಆರೋಗ್ಯ ಸಮಸ್ಯೆ ಎಂದು ಸಮಜಾಯಿಷಿ ನೀಡಿದ್ದಾರೆ.

ಟೆಲಿಕಾಂ ಕಂಪನಿಗಳಿಂದಲೇ ಟ್ರೂ ಕಾಲರ್ ಮಾದರಿ ಸೇವೆ

ಕಾಲರ್‌ಐಡಿ ಕಡ್ಡಾಯಕ್ಕೆ ಟ್ರಾಯ್ ಶಿಫಾರಸು

ಹೊಸದಿಲ್ಲಿ: ಮೊಬೈಲ್‌ಗೆ ಕರೆ ಮಾಡುವ ಬಳಕೆದಾರರ ಹೆಸರನ್ನು ಸ್ಕ್ರೀನ್ ಮೇಲೆ ಪ್ರದರ್ಶಿಸುವ ಸೇವೆಯನ್ನು ರಿಲಯನ್ಸ್ ಜಿಯೋ ಮತ್ತು ಭಾರ್ತಿ ಏರ್‌ಟೆಲ್ ನಂತಹ ಟೆಲಿಕಾಂ ಕಂಪನಿಗಳು ಕಡ್ಡಾಯವಾಗಿ ನೀಡಬೇಕು ಎನ್ನುವ ಪ್ರಸ್ತಾವನೆಯನ್ನು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ಸಿದ್ಧಪಡಿಸಿದೆ. ಆದರೆ ಈ ಪ್ರಸ್ತಾವನೆಗೆ ಟೆಲಿಕಾಂ ಕಂಪನಿಗಳು ವಿರೋಧ ವ್ಯಕ್ತಪಡಿಸಿವೆ.

ಸದ್ಯಕ್ಕೆ ಕರೆ ಮಾಡಿದ ವ್ಯಕ್ತಿಯನ್ನು ಗುರುತಿಸಲು 'ಟ್ರೂ ಕಾಲರ್'ನಂಥ ಆ್ಯಪ್‌ಗಳ ನೆರವನ್ನು ಬಳಕೆದಾರರು ಪಡೆದುಕೊಳ್ಳುತ್ತಿದ್ದಾರೆ. ಆದರೆ ಇದರ ಬದಲಿಗೆ ಟೆಲಿಕಾಂ ಕಂಪನಿಗಳೇ ಆ ಸೇವೆಯನ್ನು ನೀಡಬೇಕು ಎನ್ನುವುದು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರದ ಒತ್ತಾಯ. ಇದರಿಂದ ಮೊಬೈಲ್‌ಗಳಲ್ಲಿನ ಹಣಕಾಸಿನ ವಂಚನೆಗಳಿಗೆ ತೆರೆ ಬೀಳಲಿದೆ ಎಂದು ಟ್ರಾಯ್ ಅಭಿಪ್ರಾಯಪಟ್ಟಿದೆ.

ಟ್ರೂ ಕಾಲರ್‌ನಂತಹ ಅಪ್ಲಿಕೇಶನ್‌ಗಳು ಕ್ರೌಡ್–ಸೋರ್ಸ್ ಡೇಟಾವನ್ನು ಆಧರಿಸಿವೆ. ಇದು ಅನೇಕ ಸಂದರ್ಭಗಳಲ್ಲಿ ವಿಶ್ವಾಸಾರ್ಹವಾಗಿರುವುದಿಲ್ಲ ಎಂದು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ ಹೇಳಿದೆ. ಹೀಗಾಗಿ ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರದ ಪ್ರಸ್ತಾವನೆಯನ್ನು ದೂರ ಸಂಪರ್ಕ ಇಲಾಖೆ (ಡಿಒಟಿ) ಅಂಗೀಕರಿಸಿದರೆ, ಟೆಲಿಕಾಂ ಕಂಪನಿಗಳು ಈ ಸೇವೆಯನ್ನು ಒದಗಿಸಬೇಕಾಗುತ್ತದೆ.

ಮಾರುಕಟ್ಟೆಯಲ್ಲಿ ಪ್ರಾಬಲ್ಯ ಸಾಧಿಸಲು ಸ್ಪರ್ಧಾತ್ಮಕ ಬೆಲೆಯಲ್ಲಿ ಟೆಲಿಕಾಂ ಕಂಪನಿಗಳು ಸೇವೆಯನ್ನು ನೀಡುತ್ತಿವೆ. ಕಾಲರ್ ಐಡಿಯಂಥ ಸೇವೆಗೆ ಇನ್ನಷ್ಟು ಸೌಕರ್ಯ ವ್ಯವಸ್ಥೆಗಳ ಅಗತ್ಯವಿದೆ. ಈ ಆರ್ಥಿಕ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸಬೇಕಾಗಬಹುದು ಎಂಬುದು ಟೆಲಿಕಾಂ ವಾದ.

ಜಿಟಿಡಿ ಕಚೇರಿ ಮುಂದೆ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಪ್ರತಿಭಟನೆ

ಮೈಸೂರು, ಫೆ.28(ಜಿಎ)– ಸಹಕಾರ ಕ್ಷೇತ್ರದಲ್ಲಿ ಮೀಸಲಾತಿ ಬೇಡ ಎಂದು ಹೇಳಿಕೆ ನೀಡಿದ್ದ ಜಿ.ಟಿ.ದೇವೇಗೌಡರ ವಿರುದ್ಧ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿಯಿಂದ ಜಲದರ್ಶಿನಿ ಜಿ.ಟಿ.ದೇವೇಗೌಡರ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಜಿ.ಟಿ.ದೇವೇಗೌಡ ಅವರು ವಿಧಾನ ಸಭೆ ಕಲಾಪದಲ್ಲಿ ಸಹಕಾರ ಸಂಘದಲ್ಲಿ ಎಸ್ಸಿ, ಎಸ್ಟಿ, ಮಹಿಳೆಯರಿಗೆ ಮೀಸಲಾತಿ ನೀಡಬಾರದು ಎಂದು ಹೇಳಿಕೆ ನೀಡಿರುವುದು ಖಂಡನೀಯ. ಸಂವಿಧಾನ, ಮೀಸಲಾತಿ, ದಲಿತ ವಿರೋಧಿ ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡಿರುವ ನೀವು ದಲಿತ ವಿರೋಧಿಗಳಾಗಿ ವರ್ತಿಸುತ್ತಿದ್ದೀರಿ. ಜಾತ್ಯಾತೀತ ಎನ್ನುವ ನಾಮಾಂಕಿತ ಪಕ್ಷದ ನೀವು ಅಧಿಕಾರ ದಾಹಕ್ಕಾಗಿ ಕೋಮುವಾದಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದೀರಿ. ನಿಮ್ಮ ಗೋಸುಂಬೆ ಆಟಗಳನ್ನು ಕೂಡಲೇ ನಿಲ್ಲಿಸಿ ಎಂದು ಕಿಡಿ ಕಾರಿದರು.



ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿಯಿಂದ ಶಾಸಕ ಜಿ.ಟಿ.ದೇವೇಗೌಡರ ಕಚೇರಿ ಬಳಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ದಲಿತರ ಉದ್ಧಾರದ ಮಾತುಗಳನ್ನಾಡುತ್ತಿದ್ದೀರಿ. ಮಲ್ಲಿಕಾರ್ಜುನ ಖರ್ಗೆ ಪ್ರಧಾನಿಯಾಗುವುದನ್ನು ತಪ್ಪಿಸಲು ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿರುವುದು ಎಲ್ಲರಿಗೂ ಗೊತ್ತಿದೆ. ಹೀಗಿರುವಾಗ ಖರ್ಗೆ, ಪರಮೇಶ್ವರ್ ಬಗ್ಗೆಯಾಗಲಿ, ದಲಿತರ ಬಗ್ಗೆಯಾಗಲಿ ಮಾತನಾಡುವ ಯಾವ ನೈತಿಕತೆಯೂ ನಿಮಗಿಲ್ಲ. ಸಹಕಾರ ಕ್ಷೇತ್ರದಲ್ಲಿ ಮೀಸಲಾತಿ ತರುವ ವಿಧೇಯಕವನ್ನು ರಾಜ್ಯ ಸರ್ಕಾರ ಮಂಡಿಸಿದಾಗ ದಲಿತರು ಸಹಕಾರ ಸಂಘಗಳಲ್ಲಿ ಸದಸ್ಯರಾಗುವುದನ್ನು ಸಹಿಸದೆ ಮೀಸಲಾತಿ ವಿರೋಧಿಸಿದ್ದೀರಿ. ಹಿಂದುಳಿದವರಿಗೆ ಮೀಸಲಾತಿ ಬೇಡ ಎನ್ನುವ ನೀವು ಅವರ ಮತ ಬೇಡ ಎಂದು ಘೋಷಿಸಿ. ಕೂಡಲೇ ನೀವು ಕ್ಷಮೆಯಾಚಿಸಬೇಕು. ಇಲ್ಲದಿದ್ದರೆ ನೀವು ಭಾಗವಹಿಸುವ ಎಲ್ಲಾ ಕಾರ್ಯಗಳಿಗೂ ಮುತ್ತಿಗೆ ಹಾಕಿ ಘೇರಾವ್ ಹಾಕುತ್ತೇವೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್, ಜಿ.ಪಂ ಮಾಜಿ ಸದಸ್ಯ ಮರಿಗೌಡ, ಕೆ.ಆರ್.ಗೋಪಾಲಕೃಷ್ಣ, ಡೈರಿ ವೆಂಕಟೇಶ್, ದ್ಯಾವಪ್ಪನಾಯಕ ಸೇರಿದಂತೆ ಹಲವರು ಭಾಗವಹಿಸಿದ್ದರು.

ಕೊಡಗು ಜಿಲ್ಲೆಯ ವಿವಿಧೆಡೆ ಬಿಜೆಪಿ ಪ್ರತಿಭಟನೆ

ಪಾಕಿಸ್ತಾನ ಪರ ಘೋಷಣೆ ಕೂಗಿದ ನಾಸಿರ್ ಹುಸೇನ್ ಬೆಂಬಲಿಗರ ಬಂಧನಕ್ಕೆ ಆಗ್ರಹ



ಪಾಕಿಸ್ತಾನ ಪರ ಘೋಷಣೆ ಕೂಗಿದ ನಾಸಿರ್ ಹುಸೇನ್ ಬೆಂಬಲಿಗರನ್ನು ತಕ್ಷಣ ಬಂಧಿಸುವಂತೆ ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಮಡಿಕೇರಿಯಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಮಡಿಕೇರಿ, ಫೆ.28–ವಿಧಾನಸೌಧದಲ್ಲೇ ಪಾಕಿಸ್ತಾನ ಪರ ಘೋಷಣೆ ಕೂಗಿದ ಕಾಂಗ್ರೆಸ್‌ನ ನೂತನ ರಾಜ್ಯಸಭೆ ಸದಸ್ಯ ನಾಸಿರ್ ಹುಸೇನ್ ಬೆಂಬಲಿಗರನ್ನು ತಕ್ಷಣ ಬಂಧಿಸಬೇಕೆಂದು ಒತ್ತಾಯಿಸಿ ಕೊಡಗು ಜಿಲ್ಲಾ ಬಿಜೆಪಿ ಕಾರ್ಯಕರ್ತರು ಮಡಿಕೇರಿ, ವಿರಾಜಪೇಟೆ ಹಾಗೂ ಕುಶಾಲನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಮಡಿಕೇರಿ: ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು, ಕಾಂಗ್ರೆಸ್ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ದೇಶದ್ರೋಹಿಗಳನ್ನು ತಕ್ಷಣ ಬಂಧಿಸಿ, ಕಠಿಣ ಶಿಕ್ಷೆಗೆ ಗುರಿ ಪಡಿಸಬೇಕೆಂದು ಒತ್ತಾಯಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ಸುನಿಲ್ ಸುಬ್ರಮಣಿ ಮಾತನಾಡಿ, ಪಾಕಿಸ್ತಾನದ ಪರ ಘೋಷಣೆ ಕೂಗಿರುವುದು ಖಂಡನೀಯ. ವಿಧಾನಸೌಧದಲ್ಲೇ ದೇಶ ದ್ರೋಹಿ ಕೆಲಸ ಮಾಡಿದ ಆರೋಪಿಗಳನ್ನು ಕೂಡಲೇ ಬಂಧಿಸಬೇಕು. ಘಟನೆ ನಡೆದು 24 ಗಂಟೆಯಾದರೂ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರು ಪೊಲೀಸರಿಗೆ ಆದೇಶ ನೀಡದಿರುವುದು ಖಂಡನೀಯ. ತಕ್ಷಣ ರಾಜ್ಯ ಸರ್ಕಾರವನ್ನು ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

ಯುವ ಮೋರ್ಚಾ ಜಿಲ್ಲಾಧ್ಯಕ್ಷ ಮಹೇಶ್ ತಿಮ್ಮಯ್ಯ ಮಾತನಾಡಿ, ಪಾಕಿಸ್ತಾನದ ಪರ ಘೋಷಣೆ ಕೂಗಿದ ಕಿಡಿಗೇಡಿಗಳನ್ನು ಬಂಧಿಸಿ, ದೇಶದಿಂದ ಗಡಿಪಾರು ಮಾಡಬೇಕು. ರಾಜ್ಯಸಭಾ ಸದಸ್ಯತ್ವದಿಂದ ನಾಸಿರ್ ಹುಸೇನ್ ಅವರನ್ನು ವಜಾಗೊಳಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಬಿಜೆಪಿ, ನಗರ, ವಿವಿಧ ಮಂಡಲ, ಎಸ್‌ಸಿ ಮೋರ್ಚಾ, ಮಹಿಳಾ ಮೋರ್ಚಾ, ಹಿಂದುಳಿದ ವರ್ಗಗಳ ಮೋರ್ಚಾ ಸೇರಿದಂತೆ ಪಕ್ಷದ ವಿವಿಧ ಘಟಕಗಳ ಕಾರ್ಯಕರ್ತರು ಹಾಗೂ ನಗರಸಭೆಯ ಬಿಜೆಪಿ ಸದಸ್ಯರು ಪಾಲ್ಗೊಂಡಿದ್ದರು.



ಕುಶಾಲನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದ ಬಳಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕುಶಾಲನಗರ: ಪಾಕಿಸ್ತಾನ ಪರ ಘೋಷಣೆ ಕೂಗಿದ ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಬುಧವಾರ ಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪಟ್ಟಣದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದ ಬಳಿ ಜಮಾಯಿಸಿದ ಬಿಜೆಪಿ ಕಾರ್ಯಕರ್ತರು, ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪಾಕಿಸ್ತಾನ ಪರ ಘೋಷಣೆ ಕೂಗಿದವರ ವಿರುದ್ಧ ಕೂಡಲೇ ದೇಶದ್ರೋಹ ಪ್ರಕರಣ ದಾಖಲಿಸಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ವೋಟ್‌ಗಾಗಿ ಯಾವ ಮಟ್ಟಕ್ಕೆ ಇಳಿಯಲಿದೆ ಎಂಬುದು ಈ ಘಟನೆಯಿಂದ ಮತ್ತೆ ಸಾಬೀತಾಗಿದೆ. ಪಾಕಿಸ್ತಾನ ಪರ ಘೋಷಣೆ ಕೂಗಿದವರನ್ನು ರಕ್ಷಿಸುವ ಕೆಲಸಕ್ಕೆ ಮುಂದಾಗಿದೆ. ಇಲ್ಲಿನ ಅನ್ನ ತಿಂದು ದೇಶಾಭಿಮಾನ ಮರೆತವರು ನಮಗೆ ಅಗತ್ಯವಿಲ್ಲ. ಪಾಕಿಸ್ತಾನದ ಪರ ಒಲವಿರುವವರನ್ನು ನೇರವಾಗಿ ಅಲ್ಲಿಗೆ ಕಳುಹಿಸಿ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಕೆ.ಜಿ.ಬೋಪಯ್ಯ, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷರಾದ ಬಿ.ಬಿ.ಭಾರತೀಶ್, ರಾಬಿನ್ ದೇವಯ್ಯ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಮಹೇಶ್ ತಿಮ್ಮಯ್ಯ, ರಾಜ್ಯ ಎಸ್ಟಿ ಮೋರ್ಚಾ ಉಪಾಧ್ಯಕ್ಷೆ ಮಂಜುಳಾ, ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಇಂದಿರಾ ರಮೇಶ್, ವಿವಿಧ ಘಟಕಗಳ ಪ್ರಮುಖರಾದ ಮೋಹಿತ್ ತಿಮ್ಮಯ್ಯ, ಮೋಕ್ಷಿತ್ ರಾಜ್, ದರ್ಶನ್ ಜೋಯಪ್ಪ, ಪ್ರಮುಖರಾದ ಮನುಕುಮಾರ್ ರೈ, ಜಿ.ಎಲ್.ನಾಗರಾಜ್, ಕುಮಾರಪ್ಪ, ಎಂ.ಡಿ.ಕೃಷ್ಣಪ್ಪ, ಸುಮನ್, ಹೆರೂರು ಚಂದ್ರಶೇಖರ್, ಚರಣ್, ನವನೀತ್ ಮತ್ತಿತರರು ಪಾಲ್ಗೊಂಡಿದ್ದರು.


ಅರಣ್ಯ ವಿದ್ಯಾರ್ಥಿಗಳ ಬೇಡಿಕೆ ಈಡೇರಿಸಲು ಬದ್ಧ

ಮಡಿಕೇರಿ: ಅರಣ್ಯ ಶಾಸ್ತ್ರ ವಿದ್ಯಾರ್ಥಿಗಳ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಬದ್ಧವಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಭರವಸೆ ನೀಡಿದರು.

ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕರ್ನಾಟಕ ಅರಣ್ಯ ವಿದ್ಯಾರ್ಥಿಗಳು ಮತ್ತು ಪದವೀಧರರ ಅಸೋಸಿಯೇಷನ್ ವತಿಯಿಂದ ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಸಚಿವರು ಮನವಿ ಸ್ವೀಕರಿಸಿ ಮಾತನಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ನಿಮ್ಮ ಬೇಡಿಕೆಗಳ ಬಗ್ಗೆ ದೂರವಾಣಿ ಮುಖಾಂತರ ಮಾತನಾಡಿರುವುದಾಗಿ ತಿಳಿಸಿದರು.

ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ಆಡಳಿತಾತ್ಮಕ ಸುಧಾರಣಾ ಸಮಿತಿ ನೀಡಿದ ವರದಿಯನ್ನು ಪರಿಶೀಲನೆ ಮಾಡಬೇಕಾಗಿದೆ. 2022ರಲ್ಲಿ ಆಗಿರುವ ತಿದ್ದುಪಡಿ ಮತ್ತು ಕಡ್ಡಾಯ ಮೀಸಲಾತಿ ಯಾವತ್ತು ಇರಲಿಲ್ಲ. ಆದರೂ ನಿಮ್ಮ ಬೇಡಿಕೆ ತಾಂತ್ರಿಕವಾಗಿ ಸರಿ ಇದ್ದು, ಪರಿಶೀಲನೆ ಮಾಡಲಾಗುವುದು. ತಜ್ಞರ ಸಮಿತಿ ರಚನೆ ಮಾಡಬೇಕೆಂದು ಈಗಾಗಲೇ ಮನವಿ ಮಾಡಿದ್ದೇನೆ. ಸರ್ಕಾರ ನಿಮ್ಮ ಬಳಿ ಬಂದಿದೆ. ಇದು ನಿಮಗೆ ಸಂದ ಜಯವಾಗಿದೆ. ತಜ್ಞರ ವರದಿ ಆಧಾರದ ಮೇಲೆ ನಿಮ್ಮ ಬೇಡಿಕೆಗಳನ್ನು ಈಡೇರಿಸಲಾಗುವುದು. ಆದ್ದರಿಂದ ಮುಷ್ಕರ ಕೈಬಿಡುವಂತೆ ಮನವಿ ಮಾಡಿದರು.

ಈ ಸಂದರ್ಭ ಶಾಸಕರಾದ ರಂಗನಾಥ, ರಾಜುಗೌಡ, ರವಿಶಂಕರ ಹಾಜರಿದ್ದರು.



ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸುತ್ತಿರುವ ಅರಣ್ಯ ವಿದ್ಯಾರ್ಥಿಗಳಿಂದ ಅರಣ್ಯ ಸಚಿವ ಈಶ್ವರ ಖಂಡ್ರೆ ಮನವಿ ಸ್ವೀಕರಿಸಿದರು. ಶಾಸಕರಾದ ಎ.ಎಸ್.ಪೊನ್ನಣ್ಣ, ರವಿಶಂಕರ್, ರಂಗನಾಥ, ರಾಜುಗೌಡ ಇದ್ದರು.

ದೇಶದ್ರೋಹ ಪ್ರಕರಣ ದಾಖಲಿಸಲು ಒತ್ತಾಯ



ವಿರಾಜಪೇಟೆಯ ಗಡಿಯಾರ ಕಂಬದ ಬಳಿ ಮಾಜಿ ಶಾಸಕ ಕೆ.ಜಿ.ಬೋಪಯ್ಯ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ವಿರಾಜಪೇಟೆ, ಫೆ.28–ಮಂಗಳವಾರ ವಿಧಾನಸೌಧದಲ್ಲಿ ನಡೆದ ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಗೆಲುವು ಸಾಧಿಸಿದ ನಾಸೀರ್ ಹುಸೇನ್ ಬೆಂಬಲಿಗರು ಪಾಕಿಸ್ತಾನ ಪರ ಘೋಷಣೆ ಕೂಗಿ, ದೇಶ ದ್ರೋಹ ಕೆಲಸ ಮಾಡಿದ್ದಾರೆ. ಇವರನ್ನು ತಕ್ಷಣ ಬಂಧಿಸಿ, ಕಠಿಣ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಪಟ್ಟಣದ ಗಡಿಯಾರ ಕಂಬದ ಬಳಿ ಪ್ರತಿಭಟನೆ ನಡೆಸಿದರು.

ಮಾಜಿ ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ಪಾಕಿಸ್ತಾನ ಜಿಂದಬಾದ್ ಎಂದು ಕೂಗಿದ ನಾಸೀರ್ ಹುಸೇನ್ ಬೆಂಬಲಿಗರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಬೇಕು. ಗೃಹ ಸಚಿವರು ತಕ್ಷಣ ಪಾಕಿಸ್ತಾನ ಪರ ಘೋಷಣೆ ಕೂಗಿದ ಕಿಡಿಗೇಡಿಗಳನ್ನು ಬಂಧಿಸಿ, ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ಈ ಘಟನೆಯ ಪ್ರಕರಣವನ್ನು ತಿರುಚುವ ಕೆಲಸ ಆಗಬಾರದು. ನಾಸೀರ್ ಹುಸೇನ್‌ಗೆ ರಾಜ್ಯಸಭಾ ಸದಸ್ಯತ್ವ ಪ್ರಮಾಣಪತ್ರ ನೀಡಬಾರದು ಎಂದು ಆಗ್ರಹಿಸಿದರು.

ಈ ಘಟನೆ ಕುರಿತು ಪ್ರಶ್ನೆ ಕೇಳಿದ ಮಾಧ್ಯಮದವರ ಮೇಲೆ ನಾಸೀರ್ ಹುಸೇನ್ ಏಕವಚನದಲ್ಲಿ ನಿಂದಿಸಿರುವುದು ಸರಿಯಲ್ಲ. ಪವಿತ್ರ ದೇಗುಲ ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿರುವ ಇಂತಹ ನಡೆಯನ್ನು ಹೀಗಲೇ ಚಿವುಟಿ ಹಾಕಬೇಕು. ಇಲ್ಲದಿದ್ದರೆ ನಾಳೆ ಬೀದಿಬೀದಿಯಲ್ಲಿ ಪಾಕಿಸ್ತಾನದ ಧ್ವಜ ಹಾರಾಟಕ್ಕೆ ಕಾರಣವಾಗಬಹುದು.

ಪ್ರತಿಭಟನೆಯಲ್ಲಿ ವಿರಾಜಪೇಟೆ ನಗರ ಬಿಜೆಪಿ ಅಧ್ಯಕ್ಷ ಟಿ.ಪಿ.ಕೃಷ್ಣ, ಮಂಡಲ ಅಧ್ಯಕ್ಷ ಮಾಚಿಮಂಡ ಸುವೀನ್ ಗಣಪತಿ, ಪ್ರಧಾನ ಕಾರ್ಯದರ್ಶಿ ಅಜಿತ್ ಕರುಂಬಯ್ಯ, ಪುರಸಭೆ ಸದಸ್ಯರಾದ ಆಶಾ ಸುಬ್ಬಯ್ಯ, ಜೂನ ಮಹದೇವ, ಅನಿತಾ, ಬಿ.ಡಿ.ಸುನಿತಾ, ಪಪಂ ಮಾಜಿ ಅಧ್ಯಕ್ಷ ಸಚೀನ್ ಕುಟ್ಟಯ್ಯ, ವಿಹಿಂಪ ತಾಲೂಕು ಅಧ್ಯಕ್ಷ ಬಿ.ಎಂ.ಕುಮಾರ್ ಇತರಿದ್ದರು.

ಸರಣಿ ಕಳ್ಳತನ ಪ್ರಕರಣ ಆರೋಪಿ ಬಂಧನ



ಹಿಜಾಜ್ ಅಹ್ಮದ್

ಸುಂಟಿಕೊಪ್ಪ: ಸುಂಟಿಕೊಪ್ಪ ಠಾಣೆ ವ್ಯಾಪ್ತಿಯ ಸರಣಿ ಕಳ್ಳತನ ಪ್ರಕರಣದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.


ಮಂಗಳೂರಿನ ಪಡಿಲು ಸಮೀಪದ ಬಜಲು ಗ್ರಾಮದ ನಿವಾಸಿ ಹಿಜಾಜ್ ಅಹ್ಮದ್ ಬಂಧಿತ ಆರೋಪಿ.

ಈತ ಸುಂಟಿಕೊಪ್ಪ ವ್ಯಾಪ್ತಿಯ ವಿವಿಧೆಡೆ ಕಳ್ಳತನ ಮಾಡಿದ್ದ. ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಕಳ್ಳನ ಪತ್ತೆಗೆ ಕಾರ್ಯಾಚರಣೆ ನಡೆಸಿದ ಪೊಲೀಸರು ಈತನನ್ನು ಬಂಧಿಸಿ, ಬೈಕ್ ವಶಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಎಂ.ಸಿ.ಶ್ರೀಧರ್, ಮುಖ್ಯ ಪೇದೆ ಸತೀಶ್, ಜಗದೀಶ್, ಉದಯ್, ಲೀಲಾವತಿ, ಪ್ರವೀಣ್, ಸತೀಶ್ ಬಿಳಿಕೆರೆ ಪಾಲ್ಗೊಂಡಿದ್ದರು.

ಚಲನಚಿತ್ರೋತ್ಸವಕ್ಕೆ 'ಬೇರ್' ಕೊಡವ ಸಿನಿಮಾ ಆಯ್ಕೆ

ಮಡಿಕೇರಿ, ಫೆ28– ಈಗಾಗಲೇ ಬಾಂಗ್ಲಾ ದೇಶದ ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ವರ್ಲ್ಡ್ ಪ್ರೀಮಿಯರ್ ಕಂಡು ಹೆಸರು ಮಾಡಿರುವ ಕೂರ್ಗ್ ಕಾಫಿವುಡ್ ಮೂವಿಸ್‌ನ ಬ್ಯಾನರ್ ಅಡಿ ತಯಾರಾದ ಕೊಟ್ಟುಕತ್ತಿರ ಪ್ರಕಾಶ್ ಕಾರ್ಯಪ್ಪ ನಿರ್ದೇಶನದ 'ಬೇರ್' ಕೊಡವ ಸಿನಿಮಾ ಇದೀಗ 15ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಆಯ್ಕೆಯಾಗಿದೆ.

ಫೆ.29 ರಿಂದ ಮಾ.7ರವರೆಗೆ ಬೆಂಗಳೂರಿನ ಒರಿಯಾನ್ ಮಾಲ್‌ನಲ್ಲಿ ನಡೆಯುವ ಚಲನಚಿತ್ರೋತ್ಸವದ Unsung Incredible India ವಿಭಾಗದಲ್ಲಿ ಪ್ರದರ್ಶನಗೊಳ್ಳಲಿದೆ. ಇದು ಕೊಡವ ಸಿನಿಮಾ ರಂಗದಲ್ಲಿ ಬಹುದೊಡ್ಡ ಸಾಧನೆಯಾಗಿದೆ ಎಂದು ಚಿತ್ರ ತಂಡ ಹರ್ಷ ವ್ಯಕ್ತಪಡಿಸಿದೆ. ಪ್ರಥಮ ಬಾರಿಗೆ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಕೊಡಗಿನ ಒಂದೇ ಕುಟುಂಬದ ಪತಿ–ಪತ್ನಿಯರ ಕೊಡವ ಹಾಗೂ ಕನ್ನಡ ಸಿನಿಮಾ ಆಯ್ಕೆಯಾಗಿರುವುದು ಹೆಗ್ಗಳಿಕೆಯಾಗಿದ್ದು, ಇವರ ಸಾಧನೆಗೆ ಅನೇಕ ನಟ ಹಾಗೂ ನಿರ್ದೇಶಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



'ಬೇರ್' ಕೊಡವ ಸಿನಿಮಾದ ಪೋಸ್ಟರ್

ಕುಂಜಿಲ ಫೈನರಿ ಮಖಾಂ ಉರುಸ್‌ಗೆ ಚಾಲನೆ

ನಾಪೋಕ್ಲು: ಪ್ರಸಿದ್ಧ ಕುಂಜಿಲ ಫೈನರಿ ಮಖಾಂ ಉರುಸ್ ಸಮಾರಂಭಕ್ಕೆ ಚಾಲನೆ ನೀಡಲಾಯಿತು. ಜುಮಾ ನಮಾಜ್ ಬಳಿಕ ಫೈನರಿ ಸುನ್ನಿ ಮುಸ್ಲಿಂ ಜಮಾಅತ್ ಅಧ್ಯಕ್ಷ ಎಂ.ಎ.ಸೌಕತ್ ಅಲಿ ಧ್ವಜಾರೋಹಣ ನೆರವೇರಿಸುವ ಮೂಲಕ ಉರುಸ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಖತಿಬರಾದ ನಿಸ್ಸಾರ್ ಅಸ್ಸಾನಿ, ಉಪ ಅಧ್ಯಕ್ಷ ಇಬ್ರಾಹಿಂ, ಮಾಜಿ ಅಧ್ಯಕ್ಷ ಎ.ಎ.ಮಹಮ್ಮದ್ ಹಾಜಿ, ದರ್ಸ್ ಅಧ್ಯಕ್ಷ ಅಬುಬಕರ್, ಜಮಾತ್‌ನ ಪದಾಧಿಕಾರಿಗಳು, ಸದಸ್ಯರು ಹಾಗೂ ಧಾರ್ಮಿಕ ಗುರುಗಳು ಉಪಸ್ಥಿತರಿದ್ದರು.

ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ



ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಕೂಗಿದ ನಾಸೀರ್ ಹುಸೇನ್ ಬೆಂಬಲಿಗರ ರಕ್ಷಣೆಗೆ ಸರ್ಕಾರ ಮುಂದಾಗಿದೆ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಫೆ.28–ವಿಧಾನಸೌಧದಲ್ಲಿ ಕಾಂಗ್ರೆಸ್‌ನ ರಾಜ್ಯಸಭೆ ಸದಸ್ಯ ನಾಸೀರ್ ಹುಸೇನ್ ಬೆಂಬಲಿಗರು ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಕೂಗಿ ದೇಶದ್ರೋಹ ಕೆಲಸ ಮಾಡಿದ್ದು, ಕಿಡಿಗೇಡಿಗಳ ರಕ್ಷಣೆಗೆ ರಾಜ್ಯ ಸರ್ಕಾರ ಮುಂದಾಗಿದೆ ಎಂದು ಆರೋಪಿಸಿ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಸಮಾವೇಶಗೊಂಡ ಕಾರ್ಯಕರ್ತರು, ಬಿಜೆಪಿ ಬಾವುಟ ಹಾಗೂ ರಾಷ್ಟ್ರಧ್ವಜ ಹಿಡಿದು ಅಲ್ಲಿಂದ ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿದರು.

ಇದೇ ವೇಳೆ ನಾಸೀರ್ ಹುಸೇನ್, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಂಸದ ಡಿ.ಕೆ.ಸುರೇಶ್ ಅವರ ಭಾವಚಿತ್ರವನ್ನು ಪ್ರದರ್ಶಿಸಿ ಬೆಂಕಿ ಹಚ್ಚಲು ಮುಂದಾದಾಗ ಪೊಲೀಸರು ಮಧ್ಯೆ ಪ್ರವೇಶಿಸಿ ಭಾವಚಿತ್ರಗಳನ್ನು ಕಿತ್ತುಕೊಂಡರು. ಈ ವೇಳೆ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು.

ನಂತರ ನಗರದ ಸತ್ತಿ ರಸ್ತೆಯಲ್ಲಿರುವ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ತೆರಳಿ ಮುತ್ತಿಗೆ ಹಾಕಲು ಮುಂದಾಗುತ್ತಿದ್ದಂತೆ 32ಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ಪೊಲೀಸರು ಬಂಧಿಸಿ, ನಂತರ ಬಿಡುಗಡೆ ಮಾಡಿದರು.

ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸೂರ್ಯಬಾಲರಾಜ್ ಮಾತನಾಡಿ, ಕಾಂಗ್ರೆಸ್ ಹಿಂದಿನಿಂದಲೂ ಪಾಕಿಸ್ತಾನ ಹಾಗೂ ಪಾಕ್ ಪ್ರೇಮಿಗಳ ಬಗ್ಗೆ ಮೃದು ಧೋರಣೆ ಹೊಂದಿದೆ. ಮಂಗಳವಾರ ವಿಧಾನಸೌಧ ಮೊಗಸಾಲೆಯಲ್ಲಿ ರಾಜ್ಯಸಭೆಗೆ ಆಯ್ಕೆಯಾದ ನಾಸೀರ್ ಹುಸೇನ್ ಅಭಿನಂದಿಸಲು ಬಂದ ಕೆಲವರು ಪೊಲೀಸರು ಹಾಗೂ ರಕ್ಷಣಾ ಸಿಬ್ಬಂದಿ ಮುಂದೆಯೇ ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಕೂಗಿರುವುದು ದೇಶದ್ರೋಹದ ಕೆಲಸವಾಗಿದೆ. ಅವರನ್ನು ಇನ್ನು ಸಹ ಬಂಧಿಸಿಲ್ಲ. ಬದಲಿಗೆ ಕಾಂಗ್ರೆಸ್ ಸರ್ಕಾರ ಅವರಿಗೆ ರಕ್ಷಣೆ ನೀಡಲು ಮುಂದಾಗಿದೆ ಎಂದು ಆರೋಪಿಸಿದರು.

ಕನ್ನಡಪರ ಹಾಗೂ ಪ್ರಗತಿಪರ ಸಂಘಟನೆಗಳು ಈ ಘಟನೆ ಕುರಿತು ಧ್ವನಿ ಎತ್ತಬೇಕು. ಪಾಕಿಸ್ತಾನ ಜಿಂದಾಬಾದ್ ಎಂದು ಕೂಗಿದವರನ್ನು ಬಂಧಿಸುವವರೆಗೂ ನಿರಂತರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾದ ಶಿವುವಿರಾಟ್, ರೇವಣ್ಣ, ಯುವ ಮೋರ್ಚಾ ರಾಜ್ಯ ಸಂಚಾಲಕ ಪ್ರಣಯ್, ನಗರ ಮಂಡಲ ಅಧ್ಯಕ್ಷ ಶಿವರಾಜ್, ಗ್ರಾಮಾಂತರ ಮಂಡಲ ಅಧ್ಯಕ್ಷ ಅರಕಲವಾಡಿ ಮಹೇಶ್, ಎಸ್‌ಟಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಜಯಸುಂದರ್, ಚಂದ್ರಶೇಖರ್, ಮುಖಂಡರಾದ ನಿಜಗುಣರಾಜು, ಬಿ.ಪಿ.ಶಾಂತಮೂರ್ತಿ, ಆನಂದ್ ಭಗೀರಥ್, ಜಿಲ್ಲಾ ಕಾರ್ಯದರ್ಶಿ ನಟರಾಜು, ಎಪಿಎಂಸಿ ಅಧ್ಯಕ್ಷ ಮನೋಜ್ ಪಟೇಲ್, ಚಂದ್ರಶೇಖರನಾಯಕ್, ಮಹದೇವಸ್ವಾಮಿ, ಕೂಸಣ್ಣ, ನಾಗರಾಜು, ನಾಗೇಂದ್ರ, ಮಹೇಶ್, ಕುಮಾರ್ ಪ್ರದೀಪ್, ಕಿರಣ್, ಮಹೇಶ್, ರಾಘವೇಂದ್ರ ಇದ್ದರು.

ವಿದ್ಯಾರ್ಥಿಗಳು, ಸಿಬ್ಬಂದಿ ಮೇಲೆ ಜೇನು ದಾಳಿ



ಚಾಮರಾಜನಗರ, ಫೆ.28–ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಆವರಣದಲ್ಲಿ ಬುಧವಾರ ಮಧ್ಯಾಹ್ನ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಮೇಲೆ ಹೆಜ್ಜೇನು ದಾಳಿ ನಡೆಸಿವೆ.

ಜೇನು ಕಡಿತಕ್ಕೆ ಒಳಗಾದವರನ್ನು ತಕ್ಷಣ ಪಕ್ಕದ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸಲಾಯಿತು. ಆದರೆ, ಯಾರಿಗೂ ಅಪಾಯಗಳಾಗಿಲ್ಲ. ಕೂಡಲೇ ಎಚ್ಚೆತ್ತ ಸಂಸ್ಥೆ ಅಧಿಕಾರಿಗಳು, ಪ್ರಾಂಶುಪಾಲರು ವಿದ್ಯಾರ್ಥಿಗಳನ್ನು ದೊಡ್ಡ ಕೊಠಡಿಯೊಳಗೆ ಸೇರಿಸಿ, ಕಿಟಕಿ ಬಾಗಿಲುಗಳನ್ನು ಬಂದ್ ಮಾಡಿ ಹೆಚ್ಚಿನ ದಾಳಿ ತಡೆದರು. ನಂತರ ಯಂತ್ರದ ಸಹಾಯ ಹಾಗೂ ಹುಳುಗಳು ಕಾಣಿಸಿಕೊಂಡ ಕಡೆಯಲ್ಲಿ ಹೊಗೆ ಹಾಕಿ ಓಡಿಸಲಾಯಿತು.

ಭ್ರೂಣ ಹತ್ಯೆಯಿಂದ ಸ್ತ್ರೀ–ಪುರುಷರ ಅನುಪಾತದಲ್ಲಿ ವ್ಯತ್ಯಾಸ

● ನ್ಯಾಯಾಧೀಶ ಎಂ.ಶ್ರೀಧರ ಮಾಹಿತಿ ● ಆಶಾ, ಅಂಗನವಾಡಿ ಕಾರ್ಯಕರ್ತೆಯರಿಗೆ ಕಾರ್ಯಾಗಾರ

ಚಾಮರಾಜನಗರ, ಫೆ.28–ಗರ್ಭದಲ್ಲಿರುವ ಮಗುವಿನ ಬೆಳವಣಿಗೆ ಮತ್ತು ನ್ಯೂನತೆ ತಿಳಿಯಲು ಅಭಿವೃದ್ಧಿಪಡಿಸಿದ ತಂತ್ರಜ್ಞಾನದ ದುರುಪಯೋಗ ಮಾಡಿಕೊಂಡು ಪ್ರಸವ ಪೂರ್ವದಲ್ಲೇ ಗರ್ಭದಲ್ಲಿರುವ ಮಗುವಿನ ಲಿಂಗ ಪತ್ತೆ ಮಾಡುವುದು ಕಾನೂನು ಪ್ರಕಾರ ಶಿಕ್ಷಾರ್ಹ ಅಪರಾಧ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ಶ್ರೀಧರ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಕೆಡಿಪಿ ಸಭಾಂಗಣದಲ್ಲಿ ಬುಧವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಆಶ್ರಯದಲ್ಲಿ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ಏರ್ಪಡಿಸಿದ್ದ ಗರ್ಭ ಮತ್ತು ಪ್ರಸವ ಪೂರ್ವ ಭ್ರೂಣಲಿಂಗ ಪತ್ತೆ ತಂತ್ರ ವಿಧಾನಗಳ (ಲಿಂಗ ಆಯ್ಕೆ ನಿಷೇಧ) ಕಾಯ್ದೆ ಕುರಿತ ಅರಿವು ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಲಿಂಗ ಪತ್ತೆ ತಂತ್ರಜ್ಞಾನ ದುರ್ಬಳಕೆಯಾಗುತ್ತಿದೆ. ಗರ್ಭಾವಸ್ಥೆಯಲ್ಲಿ ಶಿಶು ಹೆಣ್ಣು ಎಂದು ಕಂಡುಬಂದ ತಕ್ಷಣ ಅದನ್ನು ಗರ್ಭದಲ್ಲೇ ಹತ್ಯೆ ಮಾಡುವ ಪ್ರವೃತ್ತಿ ಸರಿಯಲ್ಲ. ಇದರ ಪರಿಣಾಮದಿಂದ ಪುರುಷರು ಮತ್ತು ಮಹಿಳೆಯರ ಅನುಪಾತದಲ್ಲಿ ವ್ಯತ್ಯಾಸಗಳುಂಟಾಗುತ್ತದೆ ಎಂದು ಹೇಳಿದರು.



ಚಾಮರಾಜನಗರದ ಜಿಲ್ಲಾಡಳಿತ ಭವನದ ಕೆಡಿಪಿ ಸಭಾಂಗಣದಲ್ಲಿ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ಏರ್ಪಡಿಸಿದ್ದ ಕಾರ್ಯಾಗಾರವನ್ನು ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ಶ್ರೀಧರ ಉದ್ಘಾಟಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಚಿದಂಬರ ಮಾತನಾಡಿ, ಭ್ರೂಣಲಿಂಗ ಪತ್ತೆ ಹಾಗೂ ಹೆಣ್ಣುಭ್ರೂಣ ಹತ್ಯೆ ತಡೆಯಲು ಸಾರ್ವಜನಿಕರಿಗೆ ತಿಳಿವಳಿಕೆ ನೀಡಲಾಗುತ್ತಿದೆ. ಪಿಸಿ ಮತ್ತು ಪಿಎನ್‌ಡಿಟಿ ಕಾಯ್ದೆ ಪ್ರಕಾರ ಮೊದಲ ಅಪರಾಧಕ್ಕೆ 3 ವರ್ಷ ಜೈಲು ಶಿಕ್ಷೆ ಜತೆಗೆ 50 ಸಾವಿರ ರೂ. ದಂಡ. ಎರಡನೇ ಅಪರಾಧಕ್ಕೆ 5 ವರ್ಷ ಜೈಲು ಶಿಕ್ಷೆ, 1 ಲಕ್ಷ ರೂ. ದಂಡ ಹಾಗೂ ವೈದ್ಯಕೀಯ ವೃತ್ತಿಯಿಂದ ಅಮಾನತುಗೊಳಿಸಲು ಅವಕಾಶವಿದೆ. ಶಿಕ್ಷೆ ವೈದ್ಯರಿಗೆ ಮಾತ್ರ ಸೀಮಿತವಲ್ಲ. ಮಹಿಳೆಯ ಗಂಡ, ಅತ್ತೆ, ಮಾವ ಹಾಗೂ ಇವರ ಸಂಬಂಧಿಕರೂ ಭ್ರೂಣ ಲಿಂಗಪತ್ತೆ ಕ್ರಿಯೆಗೆ ಪ್ರೋತ್ಸಾಹಿಸಿದರೆ ಅಂತಹವರೂ ಶಿಕ್ಷೆಗೆ ಒಳಗಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಅಂಕಪ್ಪ ಮಾತನಾಡಿ, ಭ್ರೂಣಲಿಂಗ ಪತ್ತೆ ಮಾಡಿ ಹತ್ಯೆಗೆ ಕಾರಣವಾದ ಮಹಾರಾಷ್ಟ್ರದಲ್ಲಿ ಪಿಎನ್‌ಡಿಟಿ ಕಾಯ್ದೆ 1988ರಲ್ಲಿ ಪ್ರಸವಪೂರ್ವ ತಪಾಸಣಾ ತಂತ್ರಗಳ ಕಾಯ್ದೆ ಹೆಸರಿನಲ್ಲಿ ಲಿಂಗಪತ್ತೆ ಪರೀಕ್ಷೆಗಳನ್ನು ತಡೆಗಟ್ಟಲು ಕಾನೂನು ಚಲಾವಣೆಗೆ ಬಂತು. ನಂತರ ಇಡೀ ರಾಷ್ಟ್ರಕ್ಕೆ ಅನ್ವಯವಾಗುವಂತೆ 1994ರಲ್ಲಿ ಗರ್ಭ ಮತ್ತು ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ತಂತ್ರ ವಿಧಾನಗಳ (ಲಿಂಗ ಆಯ್ಕೆ ನಿಷೇಧ) ಕಾಯ್ದೆ ಜಾರಿಗೆ ಬಂದಿತು ಎಂದರು.

> ಮಹಿಳಾ ಸ್ವಯಂ ಸೇವಾ ಸಂಸ್ಥೆಗಳು, ಆರೋಗ್ಯ ಸಂಸ್ಥೆಗಳು, ಗ್ರಾಮ ಮಟ್ಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಆರೋಗ್ಯಕರ್ತೆಯರು, ಚುನಾಯಿತ ಮಹಿಳಾ ಪ್ರತಿನಿಧಿಗಳು ಸಂಘಟಿತರಾಗಿ ಕಾರ್ಯನಿರ್ವಹಿಸಿದರೆ ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟಲು ಸಾಧ್ಯ.
> –ಎಂ.ಶ್ರೀಧರ, ಹಿರಿಯ ಸಿವಿಲ್ ನ್ಯಾಯಾಧೀಶ

ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಸಮಾಜ ಹಾಗೂ ಇಲಾಖೆಗಳಿಗೆ ಕೊಂಡಿಯಾಗಿ ತಳ ಮಟ್ಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರಣ ಸಂಬಂಧಿಸಿದ ಮಾಹಿತಿಗಳನ್ನು ಇಲಾಖಾಧಿಕಾರಿಗಳ ಜೊತೆ ಸಂವಹನ ನಡೆಸಿ, ಹೀನಕೃತ್ಯಗಳನ್ನು ತಡೆಗಟ್ಟಬಹುದಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆರ್‌ಸಿಎಚ್ ಅಧಿಕಾರಿ ಡಾ.ಮಂಜುನಾಥ್, ಬಾಲ ನ್ಯಾಯ ಮಂಡಳಿ ಸದಸ್ಯ ಟಿ.ಜೆ.ಸುರೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಕಾರ್ಯಕ್ರಮಾಧಿಕಾರಿ ದಿನೇಶ್, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ದೊರೆಸ್ವಾಮಿ ನಾಯಕ್, ಜಿಲ್ಲಾ ಆಶಾ ಕೋ–ಆರ್ಡಿನೇಟರ್ ಪ್ರಸಾದ್, ಮೇಲ್ವಿಚಾರಕಿ ಆಶಾ ಉಪಸ್ಥಿತರಿದ್ದರು.

ಮಾ.12ರಂದು ಹಾಸನದಲ್ಲಿ ಸಮಾವೇಶ

ಚಾಮರಾಜನಗರ, ಫೆ.28–ಬಹುಜನ ಸಮಾಜ ಪಕ್ಷದ ವತಿಯಿಂದ ಹಾಸನದಲ್ಲಿ ಮಾ.12ರಂದು ಮೈಸೂರು ವಿಭಾಗೀಯ ಮಟ್ಟದ ಸಂವಿಧಾನ ಸಂರಕ್ಷಣಾ ಅಭಿಯಾನ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಬಿಎಸ್‌ಪಿ ರಾಜ್ಯ ಸಂಯೋಜಕ ಹಾಗೂ ಉಸ್ತುವಾರಿ ಎಂ.ಕೃಷ್ಣಮೂರ್ತಿ ತಿಳಿಸಿದರು.

ನಗರದ ಪ್ರವಾಸಿಮಂದಿರದಲ್ಲಿ ನಡೆದ ಸಮಾವೇಶದ ಪೂರ್ವಭಾವಿಸಭೆಯಲ್ಲಿ ಮಾತನಾಡಿದ ಅವರು, 8 ಜಿಲ್ಲೆಗಳಿಂದ ಸಾವಿರಾರು ಕಾರ್ಯಕರ್ತರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮಾವೇಶ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

28 ಕ್ಷೇತ್ರಗಳಲ್ಲೂ ಬಿಎಸ್ಪಿ ಸ್ಪರ್ಧೆ: ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಬಹುಜನ ಸಮಾಜಪಕ್ಷ ರಾಜ್ಯದ 28 ಕ್ಷೇತ್ರಗಳಲ್ಲೂ ಸ್ಪರ್ಧೆ ಮಾಡಲಿದ್ದು, ಯಾವುದೇ ಪಕ್ಷದೊಂದಿಗೆ ಮೈತ್ರಿ ಇಲ್ಲ. ಏಕಾಂಗಿಯಾಗಿ ದೇಶಾದ್ಯಂತ ಸ್ಪರ್ಧೆ ಮಾಡುವುದಾಗಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಘೋಷಣೆ ಮಾಡಿದ್ದಾರೆ. ಚಾಮರಾಜನಗರ ಮೀಸಲು ಕ್ಷೇತ್ರಕ್ಕೆ ಪಕ್ಷದ ಜಿಲ್ಲಾಧ್ಯಕ್ಷ ಎನ್.ನಾಗಯ್ಯ, ಹ.ರ.ಮಹೇಶ್, ನಿವೃತ್ತ ತಹಸೀಲ್ದಾರ್ ಮಹದೇವಯ್ಯ ಆಕಾಂಕ್ಷಿಯಾಗಿದ್ದಾರೆ. ಅವರಲ್ಲಿ ಒಬ್ಬರನ್ನು ಕಣಕ್ಕಿಳಿಸಲಾಗುವುದು ಎಂದರು.

ವಿಧಾನಸೌಧದಲ್ಲಿ ಪಾಕಿಸ್ತಾನ್ ಜಿಂದಾಬಾದ್ ಘೋಷಣೆ ಕೂಗಿರುವ ತಪ್ಪಿತಸ್ಥರ ವಿರುದ್ಧ ರಾಜ್ಯ ಸರ್ಕಾರ ಸಮಗ್ರ ತನಿಖೆ ನಡೆಸಿ ಕಠಿಣ ಕ್ರಮಕೈಗೊಳ್ಳಬೇಕು. ರಾಜ್ಯಸಭಾ ಸದಸ್ಯ ನಾಸೀರ್ ಹುಸೇನ್ ಬೆಂಬಲಿಗರು ಪಾಕ್ ಪರ ಘೋಷಣೆ ಕೂಗಿದ್ದಾರೆ. ಇದು ದೇಶದ್ರೋಹ ಕೆಲಸವಾಗಿದೆ. ನಾಸೀರ್ ಹುಸೇನ್ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಸಭೆಯಲ್ಲಿ ಬಿಎಸ್‌ಪಿ ಜಿಲ್ಲಾಧ್ಯಕ್ಷ ಎನ್.ನಾಗಯ್ಯ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬ.ಮ.ಕೃಷ್ಣಮೂರ್ತಿ, ಜಿಲ್ಲಾ ಸಂಯೋಜಕ ಪ್ರಕಾಶ್, ಜಿಲ್ಲಾ ಉಸ್ತುವಾರಿ ಚಂದಕವಾಡಿ ರಾಜಶೇಖರ್, ಉಪಾಧ್ಯಕ್ಷರಾದ ಹನುಮಂತು, ರಾಜೇಂದ್ರ, ಬಿವಿಎಫ್ ಸಂಯೋಜಕ ಚಂದ್ರಕಾಂತ್, ಹನೂರು ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಸೀಗನಾಯಕ, ಗುಂಡ್ಲುಪೇಟೆ ಅಧ್ಯಕ್ಷ ಗೋವಿಂದರಾಜು, ಚಾಮರಾಜನಗರ ಉಸ್ತುವಾರಿ ಶಿವಶಂಕರ್, ಕೃಷ್ಣಮೂರ್ತಿ, ಎಸ್.ಪಿ.ಮಹೇಶ್ ಭಾಗವಹಿಸಿದ್ದರು.



ಚಾಮರಾಜನಗರದ ಪ್ರವಾಸಿ ಮಂದಿರದಲ್ಲಿ ನಡೆದ ಸಂವಿಧಾನ ಸಂರಕ್ಷಣಾ ಅಭಿಯಾನ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಪಕ್ಷದ ರಾಜ್ಯ ಸಂಯೋಜಕ ಎಂ.ಕೃಷ್ಣ ಮೂರ್ತಿ ಮಾತನಾಡಿದರು. ಜಿಲ್ಲಾಧ್ಯಕ್ಷ ಎನ್.ನಾಗಯ್ಯ ಇತರರಿದ್ದರು.

ಪೌರಕಾರ್ಮಿಕ ಸಮಸ್ಯೆ ಬಗೆಹರಿಸಲು ಮನವಿ



ಪೌರಕಾರ್ಮಿಕರ ಸಮಸ್ಯೆ ಹಾಗೂ ಕುಂದುಕೊರತೆ ಬಗೆಹರಿಸುವಂತೆ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ನಾರಾಯಣ್ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಿದರು.

ಚಾಮರಾಜನಗರ, ಫೆ.28–ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ರಾಜ್ಯಾಧ್ಯಕ್ಷ ಹಾಗೂ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ನಾರಾಯಣ್, ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಪೌರಕಾರ್ಮಿಕರ ಸಮಸ್ಯೆ ಹಾಗೂ ಕುಂದುಕೊರತೆ ಬಗೆಹರಿಸುವಂತೆ ಮನವಿ ಸಲ್ಲಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಶಿಲ್ಪನಾಗ್ ಅವರನ್ನು ಭೇಟಿ ಮಾಡಿ, ಶ್ರೀ ಮಲೆಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಪೌರಕಾರ್ಮಿಕರ ಕುಂದುಕೊರತೆ ಬಗೆಹರಿಸುವಂತೆ ಚರ್ಚಿಸಿದರು. ನಂತರ ಜಿಲ್ಲಾಧಿಕಾರಿ, ಮಹದೇಶ್ವರಬೆಟ್ಟದ ಪೌರಕಾರ್ಮಿಕರ ಕುಂದುಕೊರತೆಗಳನ್ನು ಶೀಘ್ರ ಬಗೆಹರಿಸುವ ಭರವಸೆ ನೀಡಿದರು.

ಇದೇ ವೇಳೆ ಜಿಲ್ಲಾ ಸಫಾಯಿ ಕರ್ಮಚಾರಿ ವಿಚಕ್ಷಣಾ ಸಮಿತಿ ಸದಸ್ಯ ಸಿ.ಶಂಕರ್ ಅಂಕನಶೆಟ್ಟಿಪುರ, ಮಲೆಮಹದೇಶ್ವರಬೆಟ್ಟದ ಪೌರಕಾರ್ಮಿಕ ಸಂಘದ ಅಧ್ಯಕ್ಷ ಎಂ.ಪಿ.ಗೋಪಾಲ್ ಹಾಗೂ ಪದಾಧಿಕಾರಿಗಳು ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೊಬೈಲ್ ಅಂಗಡಿ ಮಾರಾಟಕ್ಕಿದೆ
ಬಸವನಗುಡಿ – ಮೇಟಗಳ್ಳಿ ಮುಖ್ಯರಸ್ತೆಯಲ್ಲಿ ಸುಸಜ್ಜಿತವಾಗಿ ರೆಡಿಯಾಗಿ ರನ್ನಿಂಗ್ ನಲ್ಲಿರುವ ಅಂಗಡಿ ತಕ್ಷಣಕ್ಕೆ ಮಾರಾಟಕ್ಕಿದೆ ಸಂಪರ್ಕಿಸಿ
8217323951

MUDA ಸೈಟ್ ಮಾರಾಟಕ್ಕಿದೆ
ಜೆ.ಪಿ.ನಗರ ರಿಂಗ್ ರಸ್ತೆಯಿಂದ ಕೇವಲ 400 ಮೀಟರ್ ದೂರದಲ್ಲಿರುವ ಕುಪ್ಪಲೂರಿನ ನಂಜುಂಡೇಶ್ವರ ಲೇಔಟ್‌ನಲ್ಲಿ 30×50 ಅಳತೆಯ 4 ಸೈಟುಗಳು ಮಾರಾಟಕ್ಕಿವೆ. ಬೆಲೆ – 58 ಲಕ್ಷ [Negotiable]
9886048471

ಬೇಕಾಗಿದ್ದಾರೆ
ಮೈಸೂರಿನ ಬಾಲಕಿಯರ ಹಾಸ್ಟೆಲ್‌ಗೆ 5 ಲೇಡಿ ವಾರ್ಡನ್ ಬೇಕಾಗಿದ್ದಾರೆ. ಊಟ, ವಸತಿ ಇರುತ್ತದೆ. ಕಡ್ಡಾಯವಾಗಿ ಹಾಸ್ಟೆಲ್‌ನಲ್ಲೇ ಉಳಿಯಬೇಕು. ಸಂಬಳ: 12,000 – 15,000. ಸ್ಥಳ: ಮೈಸೂರು.
9380362236

Job Vacancy
MAAN CERAMIC
Tile showroom
Telecalling for female
Near Vidhyaranyapuram, Opp. NIE COLLEGE, Mysore.
9620967801, 9113998991

WANTED
- Architects (B.Arch/D.Arch)
- Civil (BE./Dip.)
- Interior Designer

With Min. 1 year experience
Good Experience in Auto CADD & 3D Design
GANESH CONSTRUCTIONS
Hebbal, Mysore
Mob: +91 99162 50327

SITE FOR SALE
40x60
Bapuji Layout, attached BEML Layout New Kant URS Layout.
Mob: 9740088990

ತಕ್ಷಣ ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ಲ್ಲಿ ಪಂಪ್ ಕ್ಯಾಷಿಯರ್ ಹುದ್ದೆಗೆ ಪುರುಷರು/ಮಹಿಳೆಯರು ಅನುಭವಿಗಳಿಗೆ ಮೊದಲ ಆದ್ಯತೆ ಖುದ್ದಾಗಿ ಸಂಪರ್ಕಿಸಿ ಶ್ರೀ ಸರ್ವೀಸ್ ಸ್ಟೇಷನ್ ಸರಸ್ವತಿಪುರಂ, ಮೈಸೂರು
7353592364

ಬೇಕಾಗಿದ್ದಾರೆ
ವಿರಾಜಪೇಟೆಯ ಕಾಲೇಜು ಹಾಗೂ ಮಡಿಕೇರಿ ರೆಸಾರ್ಟ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ನುರಿತ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ ಸಂಪರ್ಕಿಸಿ:
9980001243
9035050654

ಬಾಡಿಗೆಗೆ
2 BHK
ಮೈಸೂರು ಗಾಯತ್ರಿ ಪುರಂ ಚರ್ಚ್ ಹತ್ತಿರ
9880962578

REQUIRED
1. Full Time Radiologist
2. Emergency Medicine - Doctors


AARYA HOSPITAL
Near K.G. Koppal Under Bridge, Krishnamurthypuram, Mysuru.
0821 - 2330233
72046 04442

ಸೈಟ್ ಬೇಕಾಗಿದೆ
ಲಾಲ್‌ಬಹದ್ದೂರ್‌ಶಾಸ್ತ್ರಿ ನಗರ, ಶಾಂತವೇರಿ ಗೋಪಾಲ್‌ಗೌಡ ನಗರ ಲಲಿತಾದ್ರಿನಗರ / ಅಕ್ಕಪಕ್ಕ ಬಡಾವಣೆಯಲ್ಲಿ
7795306934

PROFESSIONAL DRY CLEANING
Curtains, Carpets, Blankets, Soft Toys, Shoes.
Mob: 94486 74411

WANTED
- Graphic Designer (Coreldraw, photoshop, indesign)
- Helper boys (sslc pass or fail)
- Die punching machine operator

9448067939 | 9739569260



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಮೈಸೂರಿನ ಟಿ.ನರಸೀಪುರ ರಸ್ತೆಯ ಆಲನಹಳ್ಳಿ ಬಡಾವಣೆ ಲಲಿತಾದ್ರಿಪುರ ರಸ್ತೆ ಇಲ್ಲಿನ ಸಂಸ್ಥೆಗೆ 12 ಗಂಟೆ ಕೆಲಸ ಮಾಡುವ ಹಗಲು ಮತ್ತು ರಾತ್ರಿ ಪುರುಷ ಅನುಭವವಿರುವ ಮತ್ತು SSLC ಓದಿರುವ ವಯಸ್ಸು 50 ರಿಂದ 55 ವರ್ಷ ಒಳಗಿನ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವೇತನ ತಿಂಗಳಿಗೆ 14000 ರೂ. ಊಟದ ವ್ಯವಸ್ಥೆ ರಜಾ ESI & PF ವ್ಯವಸ್ಥೆ ಇರುತ್ತದೆ.
9731976148

SBIT TRAVELS
Group Tour
5N6D KASHMIR with AMRITSAR - 54,000/- (Apr 1st)
5N6D SHIMLA MANALI CHANDIGARH - 43,000/-
Mar. 22nd | Apr: 5th, 18th | May:2nd, 13th
6N7D | Assam Meghalaya-55,700/-
Apr: 28th | Apr: 04th, 18th | May:10th, 24th
9901524127, 9902524127
(Saraswathipuram, Mysuru)

ವಿಠಲ್ ರೆಕಾರ್ಡ್ಸ್ ಪ್ರೈವೇಟ್ ಲಿಮಿಟೆಡ್
ಖಾಲಿ ಹುದ್ದೆ: 150+
DATA ENTRY OPERATOR
ಸಂಬಳ 10,000 + 5000 Incentive
ಸಂದರ್ಶನದ ಸಮಯ: 9.30 ರಿಂದ 5.30.
ವಿಳಾಸ: #42, JCK ಇಂಡಸ್ಟ್ರಿಯಲ್ ಪಾರ್ಕ್, ಮೇಟಗಳ್ಳಿ ಪೋಸ್ಟ್, ಪ್ರೀತಿ ಗ್ರಾನೈಟ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೈಸೂರು–570 016. ಕರೆ ಮಾಡಿ:
Mob: 8867064586

DTCP SITES FOR SALE
DTCP Sites
Rs. 699 per sq.ft., Near Jayapura, H.D. Kote Road, Mysore.
9590491194, 9606783264

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training.
www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

HOUSE FOR SALE
E/F 30x40 Duplex new house, very good location Vijayanagar 4th Stage, Near Teju Corner.
9164456176

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿ ಇರುವ ಸಸ್ಯಾಹಾರಿ ಹೋಟೆಲ್‌ನಲ್ಲಿ ಕೆಲಸ ಮಾಡಲು ಸರ್ವಿಸ್ ಹುಡುಗಿಯರು ಮತ್ತು ಕ್ಯಾಷಿಯರ್‌ಗೆ ಹುಡುಗಿಯರು ಬೇಕು. ಉತ್ತಮವಾದ ಸಂಬಳದ ಜೊತೆ ಊಟ, ವಸತಿ, ಇ ಎಸ್ ಐ ಸೌಲಭ್ಯ ನೀಡಲಾಗುತ್ತದೆ. ಸಂಬಳ: 12000 ಯಿಂದ 20000 ವರೆಗೆ
8892088999

ಬೇಕಾಗಿದ್ದಾರೆ
ಲೇಡಿಸ್ PG ಯಲ್ಲಿ ಅಡುಗೆ ಕೆಲಸಕ್ಕೆ ಸಹಾಯಕಿ ಬೇಕಾಗಿದ್ದಾರೆ. ಊಟ ವಸತಿ ಇರುತ್ತದೆ. ಕಡ್ಡಾಯವಾಗಿ PG ಯಲ್ಲೆ ಉಳಿಯಬೇಕು.
9986622769
9535744143

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಮಾರಾಟಕ್ಕಿದೆ
ಉತ್ತಮವಾಗಿ ನಡೆಯುತ್ತಿರುವ ಕಾರ್ನರ್ ಪ್ರಾವಿಷನ್ ಸ್ಟೋರ್ 17x12 ಮೆಟೀರಿಯಲ್ ಸಹಿತ ಬೃಂದಾವನ ಎಕ್ಸ್‌ಟೆನ್ಷನ್ 1ನೇ ಹಂತದಲ್ಲಿ ಮಾರಾಟಕ್ಕಿದೆ.
9845971374
6360690991

ಮಂಟಪ ಮನೆ
ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ ಸಂಪರ್ಕಿಸಿ: ಶ್ರೀನಗರ ಮೈಸೂರು



9448207634
9036742526

SITE FOR SALE
30x40, East facing, MUDA & RERA Approved.
Dr. Dayanagar Layout, Bogadi Road, Mysore.
Bank loan also available.
7795551693

PRINT MEDIA SOLUTION COACHING CENTER
Software You can learn
1. Corel Draw
2. Photoshop
3. Nudi

100% Job Placement
0821-4191102
8123517141

ತಕ್ಷಣ ಬೇಕಾಗಿದ್ದಾರೆ
ಟೆಲಿಕಾಲಿಂಗ್ ಕೆಲಸಕ್ಕೆ (ಮೈಸೂರು & ಮಂಡ್ಯ) ಹುಡುಗಿಯರು ಬೇಕಾಗಿದ್ದಾರೆ (Fixed Salary, No Target)
9606084390
9606084397

MUDA Approved Site, Bogadi Road
28x30,30x40
West & Corner (2 Sites)
Price - 46/62 Lakhs
Near Trends Apartment
8660105902

SITES for SALE JP Nagar Ring Road
20 x 30 - 17 Lakhs,
30 x 40 - 33 Lakhs,
Near Gurur Bus Stop, Ramabainagar, Mysore.
DTCP approved (Corporation limits)
1.5 Kms from JP Nagar Ring Road
8660105902

30x40 SBM, Bogadi
30x40 + 10 feet extra Land, MUDA Approved North Facing Site for Sale, SBM B Block, Bogadi, Price - 77 Lakhs
8660105902

MUDA App Site
Kamadhenu Layout, Srirampura
30 x 40
East South Corner Site
Price - 64 Lakhs
Within Ring Road
8660105902

HOUSE FOR LEASE
60x40 house for lease, 3 BHK attached bathroom, near SVEI School, Vijayanagar 4th Stage.
Contact:
9591847851

HOUSE FOR RENT
Newly constrution Building Suitable for PG or Service Apartment Prime Location Opp International Youth Hostel V.V. Mohalla
9845221621

ಸ್ವಂತಕ್ಕೆ ಮನೆ/ ಜಾಗ ಬೇಕಾಗಿದೆ
ಅಗ್ರಹಾರ, ರಾಮಸ್ವಾಮಿ ಸರ್ಕಲ್ ಹತ್ತಿರ, ಅಶೋಕ ರಸ್ತೆ, ಅನುಭವ ಇರುವ ಬ್ಯಾಂಕ್ ನೌಕರರು ಬೇಕಾಗಿದ್ದಾರೆ.
9972839335

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಶುಂಠಿ ಕೃಷಿಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್ #203, ಬನ್ನಿಮಂಟಪ ಬಡಾವಣೆ, ಮೈಸೂರು–570 015
Mob: 80888-87802

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9591815191

ಮಹಿಳೆಯರಿಗೆ
ಆಫೀಸ್ ಕೆಲಸ ಮತ್ತು ಮೇನೇಜ್‌ಮೆಂಟ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
9901080314

WANTED
Mehanical Engineer Diploma / BE Completed 2 to 3 Years experience
7337801422

ಸೈಟು ಮಾರಾಟಕ್ಕಿದೆ
30x40 S/F
ಆನಂದನಗರ
ಬೆಲೆ 56 ಲಕ್ಷ
9945148025

WANTED
- Marketing Manager - 20 Nos Salary 20k allowance 5k
- Marketing Executive - 30 Nos Salary 16k allowance 5k
- Telecaller - 5 Nos - Salary 10k
- Accounts - 3 Nos - Salary 15k
- TV Anchor - Part time/Full time
- Pigmy Collection Boy - 5 Nos

Contact: Nama Suraksha:
80500 51 444

Change of Name
I, Syed Hameed Ghazi, residing at No. 638, 9th Cross, 2nd Stage, Rajivnagar, Mysore-570 019, have changed my name as Syed Hameed, on my own free will, in front of Notary Asadulla Khan on 27-2-2024. I declare that I shall at all times hereafter in all records, deeds and writings and in all proceedings dealings and transactions, private as upon all occasions whatsoever use and sign the name of Syed Hameed.
Sd/- Syed Hameed

AFFIDAVIT
I, Bhagya.A, W/o Ravindra B, residng at #14/1A, 2nd Cross, Kalidasa Road, Vontikoppal, V.V. Mohalla, Mysuru-570 002. I swear that my correct name is Bhagya. A (mentioned in my Aadhar Card and Election Identity card). But in my daughter's SSLC Marks Card my name has been mentioned as Bhagya instead of Bhagya. A. Hence I am swearing this affidavit in front of Notary that in order to confirm that my correct name is Bhagya. A. only.
Sd/- Bhagya. A.

ಕಳೆದಿದೆ
ಮಹದೇವ, ನಂ. 3866, 9ನೇ ಕ್ರಾಸ್, ಗಾಂಧಿ ನಗರ, ಮೈಸೂರು, ಇವರಿಗೆ ಸೇರಿದ ಲಾಲ್ ಬಹದ್ದೂರ್ ಶಾಸ್ತ್ರಿ ಬಡಾವಣೆಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಸಂಖ್ಯೆ 767ನ್ನು ಪಡೆದಿದ್ದು, ಸದರಿ ನಿವೇಶನದ ಮೂಲ ದಾಖಲಾತಿಗಳಾದ ಮಂಜೂರಾತಿ ಪತ್ರ, ಸ್ವಾಧೀನ ಪತ್ರ, ಗುತ್ತಿಗೆ ಕ್ರಯ ಪತ್ರ, ಅಂತಿಮ ತಿಳುವಳಿಕೆ ಪತ್ರ ಈ ನಿವೇಶನ ಸಂಬಂಧ ಮುಡಾದಿಂದ ಪಡೆದಿದ್ದ ಮೂಲ ದಾಖಲಾತಿಗಳು ದಿ. 10–2–2024ರಂದು ಎನ್.ಆರ್. ಮೊಹಲ್ಲಾದಲ್ಲಿ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 7483068759

ಬೇಕಾಗಿದ್ದಾರೆ
ಮೈಸೂರಿನ ವಧುವರರ ವೇದಿಕೆ ಮತ್ತು ರಿಯಲ್ ಎಸ್ಟೇಟ್ ಕಛೇರಿಯಲ್ಲಿ ಕೆಲಸ ಮಾಡಲು ಮಹಿಳಾ ಸಹಾಯಕಿ ಬೇಕಾಗಿದ್ದಾರೆ. ವಿದ್ಯಾರ್ಹತೆ: ಪಿ.ಯು.ಸಿ, ಡಿಗ್ರಿ, Fresherಗೆ ಅವಕಾಶವಿದೆ. ಸಂಬಳ: 12000. ಸಂಪರ್ಕಿಸಿ:
8105213239

HOUSE FOR RENT
30X40 E/F Duplex House Ramakrishna Nagar, 'I' Block
9845221621

ಮುಡಾ ಖಾತಾ ಸೈಟ್ ಸೇಲ್
ಈಸ್ಟ್ ಫೇಸಿಂಗ್, ಕಾರ್ನರ್ ಸೈಟ್, 1124 ಚದರಡಿ, ಜ್ಞಾನಭಾರತಿ ಲೇಔಟ್, ಏರ್ ಪೋರ್ಟ್ ಹಿಂಭಾಗದ ರಸ್ತೆ
ಡೈರೆಕ್ಟ್ ಓನರ್
9342123373

OLD FURNITURE FOR SALE
Cot, Bed, Sofa, Dining Table-8 Chairs set, Dressing table, Cycle etc. in Siddartha Layout. Contact:
8073412866

WANTED
Efficient Tutor for 3rd Standard CBSC Student. Subjects: Kannada, Hindi and Maths. Address: #5, 1st Floor, B Block, 80 feet Road, 3rd Stage, Vijayanagar, Mysore-570 017
98808 99888

ಬೇಕಾಗಿದ್ದಾರೆ
ಕಾರ್ಖಾನೆಯಲ್ಲಿ General Shiftನಲ್ಲಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ಈ ಕೆಳಕಂಡ ಮೊಬೈಲ್ ಫೋನ್‌ಗೆ ಸಂಪರ್ಕಿಸಿ:
96060 03196

WANTED
A reputed lodge in the heart of the city is looking for a reception role, Those having previous experience & freshers also can apply. (Having computer & hotel industry knowledge preferred).
9663427888, 9663747452

WANTED
A/C, Fridge, Washing Machine Technicians required. Attractive salary. Interested may contact:
8095982354

ಜಮೀನು ಮಾರಾಟಕ್ಕಿದೆ
ಬಿಳಿಕೆರೆ – ಗದ್ದಿಗೆ ಮುಖ್ಯ ರಸ್ತೆಯಿಂದ ಎಲಚವಾಡಿ ಗ್ರಾಮದ ರಸ್ತೆಗೆ (30 ಅಡಿ ರಸ್ತೆ) ಹೊಂದಿಕೊಂಡಂತಿರುವ 1 ಎಕರೆ 30 ಗುಂಟೆ ಕೃಷಿ ಜಮೀನು ಮಾರಾಟಕ್ಕಿದೆ.
9902317940
9880051791

ಮನೆ ಮಾರಾಟಕ್ಕಿದೆ
100% ವಾಸ್ತು 30x40, 2BHK ಮನೆ E/F
ಅರವಿಂದನಗರ ಪಾರ್ಕ್ ಹತ್ತಿರ ಅರವಿಂದ ನಗರ ಕುವೆಂಪುನಗರ ಹತ್ತಿರ
9844756558

ಕೇರ್ ಟೇಕರ್ ಬೇಕಾಗಿದ್ದಾರೆ
7th, 8th, 9th, 10th, puc, ಮತ್ತು Any degree, ANM, GNM ಕೋರ್ಸ್ ಹೊಂದಿರುವ ಅನುಭವವುಳ್ಳ /ಅನುಭವ ಇಲ್ಲದಿರುವ ಯುವಕರು, ಯುವತಿಯರು, ಮಹಿಳೆಯರು, ಪುರುಷರು ತಕ್ಷಣವೇ ಸಂಪರ್ಕಿಸಿ
9035113222 | 9739292222

ಬೇಕಾಗಿದ್ದಾರೆ
1) ರಿಸೆಪ್ಷನಿಸ್ಟ್ – 2 ಹುದ್ದೆಗಳು
ಹೋಟೆಲ್ (ಮಹಿಳೆ/ಪುರುಷ)
ಗುಪ್ತ, ಅಶೋಕ ರಸ್ತೆ, ಮೈಸೂರು–570 001
7406068855 | 9886577795

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನ ಬಸವನ ಗುಡಿ ಸರ್ಕಲ್ ಹತ್ತಿರ ವಾಸಿಸುತ್ತಿರುವ ಕುಟುಂಬಕ್ಕೆ ಮಗುವನ್ನು ನೋಡಿಕೊಳ್ಳಲು ಮಹಿಳಾ ಆಯಾ ಬೇಕಾಗಿದ್ದಾರೆ. ಸಂಬಳ: ರೂ. 11,000 (Nego).
Mob: 9535305693

CHANGE OF NAME
I, Shivakumar P.V., S/o Venkatappa, residing at Pannedoddi Village, Besagarahalli Post, Koppa Hobli, Maddur Taluk, Mandya Dist. I declare that my child name has been mentioned as Thanvish. S. in school documents. I declare that I have changed my son's name as Thanvish Shivakumar on my own free will, in front of Notary C.R. Seetharam on 21-2-2024. I had obtained my son's birth certificate from MCC, Mysore, and my son's name has been mentioned as Thanvish Shivakumar.
Sd/- Shivakumar P.V.

ಹೊಸ ಮನೆ ಮಾರಾಟಕ್ಕಿದೆ
ಸರ್ದಾರ್ ವಲ್ಲಭಾಯಿಪಟೇಲ್ ನಗರ ಮುಡಾ ಅನುಮೋದಿತ ಲೇಔಟ್ 20*40 ಅಡಿ, ಪೂರ್ವ ದಿಕ್ಕು, 3 ಬಿಹೆಚ್‌ಕೆ, ಬೋರ್‌ವೆಲ್ ಮತ್ತು ಪಿಲ್ಲರ್ ಹೊಂದಿದೆ, 100% ವಾಸ್ತು, ಉತ್ತಮ ಗುಣಮಟ್ಟದ ಹೊಸ ಮನೆ
Call: 9380284276

ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸಾದ ವೃದ್ಧರು ಮತ್ತು ರೋಗಿಗಳನ್ನು ಆರೈಕೆ ಮಾಡಲು ನವು ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಸೇವಾ ಮನೋಭಾವವುಳ್ಳ ಯುವಕ/ಯುವತಿಯರು ಮಹಿಳೆಯರು / ವಿಧವೆ/ ವಿಚ್ಛೇದಿತೆಯರು ಹೋಂ ಕೇರ್ ಕೆಲಸಕ್ಕೆ ಬೇಕಾಗಿದ್ದಾರೆ. (ಯಾವುದೇ ರೀತಿಯ ಶುಲ್ಕ ಇರುವುದಿಲ್ಲ) ಆಧಾರ್ ಕಾರ್ಡ್ ಕಡ್ಡಾಯ ಊಟದ ವಸತಿಯೊಂದಿಗೆ ಸಂಬಳ: 12000 ರಿಂದ 15000 ರವರೆಗೆ ಕೂಡಲೇ ಸಂಪರ್ಕಿಸಿ:
9035324777, 7259306665
(ಆಫೀಸ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ)

ಸೈಟು ಮಾರಾಟಕ್ಕಿದೆ
30x40, West Facing
72 ಲಕ್ಷ ಐಶ್ವರ್ಯ ಲೇಔಟ್, ಕ್ರೈಸ್ಟ್ ಸ್ಕೂಲ್ ಹತ್ತಿರ 20 ಗುಂಟೆ ಜಮೀನು ಮಾರಾಟಕ್ಕಿದೆ ಗುಂಟೆಗೆ 11 ಲಕ್ಷ ರೂಪಾನಗರ ಪಕ್ಕ, ಮೈಸೂರು
9986856999

ಸೋಲಾರ್ ವಾಟರ್ ಹೀಟರ್
Solar Water Heater



ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

WE ARE HIRING
Drivers for goods vehicle with DL & experience.
Office Staff with experience in transport office. Contact:
9620748700

ತಕ್ಷಣ ಬೇಕಾಗಿದ್ದಾರೆ
MNC ಕಂಪನಿಗಳಿಗೆ 7th, 10th, PUC, ITI, Diploma & BA, B.Com., BBM, M.Com. ಆದ ಯುವಕ, ಯುವತಿಯರು, Hebbala, Hootagalli, Metagalli, Saraswathipuram, Kuvempunagar, N.R. Mohalla, Vontikoppal, Nanjanagud, Mandya, Chamarajanagar ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ 15,000 ರಿಂದ 40,000. ಸಂಪರ್ಕಿಸಿ:
9916641959, 9008838172

FOR SALE
68 Office chairs and 68 study tables (wooden) of study centre for sale.
8105751169 | 9620607138

WANTED
Part time / full time female candidates for an academy. Training will be given. College students also can apply. No phone calls. Whatsapp your resume /message to
9480505931

ತಕ್ಷಣ ಬೇಕಾಗಿದ್ದಾರೆ
ವಯಸ್ಸಾದ ಪಾರ್ಶ್ವವಾಯು ಪೀಡಿತ ಮಹಿಳೆಯರನ್ನು ನೋಡಿಕೊಳ್ಳಲು ಅನುಭವವಿರುವ ಹೋಂ ನರ್ಸ್ ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು: 45 ವರ್ಷದ ಒಳಗಿರಬೇಕು. ರಾತ್ರಿ ಪಾಳಿಯದಲ್ಲಿ (Night Shift) ಕೆಲಸ ಮಾಡಲು ಅವಕಾಶವಿರುತ್ತದೆ. ಉಚಿತ ಊಟ ವಸತಿಯೊಂದಿಗೆ ರೂ.15000/– ತಿಂಗಳ ಸಂಬಳ ನೀಡಲಾಗುವುದು.
08050827819

WANTED
Wanted Diploma / ITI / GTTC Candidates 2 Years Experience in the Field of Tool Room, Production, Contact: Immediately the following Mobile
Lokesh
7022540475

FOR RENT
COMMERCIAL SHOP
10x10 Feet furnished shop.
Address: 100 Feet Road, Near Ramaswamy Circle, Mysuru
Mob: 8553250846

FOR RENT
2 BHK FURNISHED HOUSE.
Address: Krishnamurthypuram, Near Ballal Circle, Mysuru.
Mob: 8553250846

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರು ಮಿತ್ರ

ಗುರುವಾರ 29 ಫೆಬ್ರವರಿ 2024

ಎಸ್ಸಿ, ಎಸ್ಟಿ ಪತ್ರಿಕಾ ಸಂಪಾದಕರ ಸಂಘದಿಂದ ಸರ್ಕಾರಕ್ಕೆ ವಿವಿಧ ಬೇಡಿಕೆ ಮಂಡನೆ

• ಮೈಸೂರು ಹೊರ ವಲಯದ ರೆಸಾರ್ಟ್‌ನಲ್ಲಿ 'ಸುದ್ದಿ ಮಾಧ್ಯಮ ಕ್ಷೇತ್ರದಲ್ಲಿ ದಲಿತರ ಉದ್ಯಮಶೀಲತೆ ಮತ್ತು ಸವಾಲುಗಳು' ವಿಚಾರ ಸಂಕಿರಣ • ತಾರತಮ್ಯ ನೀತಿಯಲ್ಲಿ ರಾಜಕೀಯ ಮತ್ತು ಪತ್ರಿಕಾ ಕ್ಷೇತ್ರವೂ ಸೇರಿದೆ



ಕರ್ನಾಟಕ ರಾಜ್ಯ ಎಸ್‌ಸಿ, ಎಸ್‌ಟಿ ಪತ್ರಿಕಾ ಸಂಪಾದಕರ ಸಂಘ ಆಯೋಜಿಸಿದ್ದ 'ಸುದ್ದಿ ಮಾಧ್ಯಮ ಕ್ಷೇತ್ರದಲ್ಲಿ ದಲಿತರ ಉದ್ಯಮಶೀಲತೆ ಮತ್ತು ಸವಾಲುಗಳು' ಕುರಿತ ವಿಚಾರ ಸಂಕಿರಣವನ್ನು ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಉದ್ಘಾಟಿಸಿದರು.

ಮೈಸೂರು, ಫೆ.28(ಎಂಟಿವೈ)– ಪರಿಶಿಷ್ಟ ಜಾತಿ ಮತ್ತು ಪಂಗಡದ ಮಾಲೀಕತ್ವದ ಪತ್ರಿಕೆಗಳಿಗೆ ಜಾಹಿರಾತು ಪ್ರಮಾಣ ಹೆಚ್ಚಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರಕ್ಕೆ ಮನವಿ ಸಲ್ಲಿಸಲು ಕರ್ನಾಟಕ ರಾಜ್ಯ ಎಸ್ಸಿ, ಎಸ್ಟಿ ಪತ್ರಿಕಾ ಸಂಪಾದಕರ ಸಂಘ ನಿರ್ಧರಿಸಿದೆ.

ಮೈಸೂರಿನ ಹೊರವಲಯದ ರೆಸಾರ್ಟ್‌ನಲ್ಲಿ ಕರ್ನಾಟಕ ರಾಜ್ಯ ಎಸ್‌ಸಿ, ಎಸ್‌ಟಿ ಪತ್ರಿಕಾ ಸಂಪಾದಕರ ಸಂಘ ಬುಧವಾರ ಆಯೋಜಿಸಿದ್ದ 'ಸುದ್ದಿ ಮಾಧ್ಯಮ ಕ್ಷೇತ್ರದಲ್ಲಿ ದಲಿತರ ಉದ್ಯಮಶೀಲತೆ ಮತ್ತು ಸವಾಲುಗಳು' ಕುರಿತ ವಿಚಾರ ಸಂಕಿರಣದಲ್ಲಿ ಬೇಡಿಕೆ ಈಡೇರಿಕೆಗೆ ಸರ್ಕಾರವನ್ನು ಒತ್ತಾಯಿಸಲಾಯಿತು. ಎಸ್ಸಿ, ಎಸ್ಟಿ ವರ್ಗಗಳ ಮಾಲೀಕತ್ವದ ಪತ್ರಿಕೆಗಳಿಗೆ ಪ್ರತಿ ತಿಂಗಳು 4 ಪುಟ ಜಾಹೀರಾತು ನೀಡಬೇಕು. 10 ವರ್ಷ ಪೂರೈಸಿರುವ ಪತ್ರಿಕೆಗಳಿಗೆ ಹಾಲಿ ನೀಡುತ್ತಿರುವ ಅರ್ಧಪುಟದಿಂದ 1 ಪುಟಕ್ಕೆ, 20 ವರ್ಷ ಪೂರೈಸಿರುವ ಪತ್ರಿಕೆಗಳಿಗೆ ಹೆಚ್ಚುವರಿ 1 ಪುಟ ಜಾಹೀರಾತು ನೀಡಬೇಕು. 22 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಕರ್ನಾಟಕ ರಾಜ್ಯ ಎಸ್ಸಿ, ಎಸ್ಟಿ ಪತ್ರಿಕಾ ಸಂಪಾದಕರ ಸಂಘದ ವತಿಯಿಂದ ಎಸ್ಸಿ–ಎಸ್ಟಿ ಪತ್ರಕರ್ತರಿಗೆ ವಿವಿಧ ಕಾರ್ಯಾಗಾರ, ವಿಚಾರ ಸಂಕಿರಣ, ಕೌಶಲ್ಯ ಅಭಿವೃದ್ಧಿ, ಪ್ರತಿಭಾನ್ವಿತ ಪತ್ರಕರ್ತರಿಗೆ ಪ್ರಶಸ್ತಿ ಹಾಗೂ ಡಾ. ಅಂಬೇಡ್ಕರ್ ಜನ್ಮ ದಿನಾಚರಣೆ ಆಯೋಜಿಸಲು ಪ್ರತಿ ವರ್ಷ 10 ಲಕ್ಷ ರೂ. ಅನುದಾನ ನೀಡುವಂತೆ ಮನವಿ ಸಲ್ಲಿಸಲು ನಿರ್ಧರಿಸಲಾಯಿತು.

ಇದಕ್ಕೂ ಮುನ್ನ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗೆ ಅವಕಾಶಗಳು ಸಿಗುತ್ತಿಲ್ಲ. ಈ ತಾರತಮ್ಯ ನೀತಿಯಲ್ಲಿ ರಾಜಕೀಯ ಹಾಗೂ ಪತ್ರಿಕಾ ಕ್ಷೇತ್ರವೂ ಸೇರಿದೆ. ಸಮುದಾಯದ ಜನ ವಿವಿಧ ಸ್ವರೂಪದಲ್ಲಿ ನೋವನ್ನು ಅನುಭವಿಸುತ್ತಿದ್ದಾರೆ. ಇಂದಿಗೂ ಮಹಿಳೆಯರಿಗೆ ಸಮಾನತೆ ಸಿಕ್ಕಿಲ್ಲ. ಮಾಧ್ಯಮ ಕ್ಷೇತ್ರದಲ್ಲಿ ದಲಿತ ಪತ್ರಕರ್ತರ ಸಂಖ್ಯೆ ಹೆಚ್ಚುತ್ತಿದ್ದರೂ ಕೆಲ ಕಾರಣದಿಂದ ಆ ಕ್ಷೇತ್ರದಿಂದ ಹೊರ ಬರಲು ಬಯಸುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ ಎಂದರು.

ಕಾಂಗ್ರೆಸ್ ಪಕ್ಷ ದಲಿತ ಸಮುದಾಯದ ಮೇಲೆ ಅಪಾರವಾದ ಕಾಳಜಿ ಹೊಂದಿದೆ. ಮೈಸೂರು ಜಿಪಂ ಅಧ್ಯಕ್ಷೆಯಾಗಿ ಅಧಿಕಾರ ನಡೆಸಿದ ಮೊದಲ ದಲಿತ ಮಹಿಳೆ ಎಂಬ ಹೆಮ್ಮೆ ನನ್ನದಾಗಿದೆ. ಅವಕಾಶ ವಂಚಿತರು ಎಲ್ಲಾ ಪಕ್ಷಗಳಲ್ಲೂ ಇದ್ದಾರೆ. ಎಲ್ಲ ಪಕ್ಷಗಳಲ್ಲೂ ದಲಿತ ಸಮುದಾಯದ ಮಹಿಳೆಯರಿದ್ದರೂ ಅವರಿಗೆ ಸಿಗಬೇಕಾದ ಸೂಕ್ತ ಸ್ಥಾನಮಾನ ಸಿಗುತ್ತಿಲ್ಲ ಎಂದು ವಿಷಾದಿಸಿದರು.

ಪತ್ರಕರ್ತ ಕೆ.ದೀಪಕ್ ಮಾತನಾಡಿ, ದೇಶದ ಪ್ರತಿಯೊಬ್ಬ ವ್ಯಕ್ತಿಗೂ ಅವರದ್ದೇ ಆದ ಕೆಲಸದ ಒತ್ತಡ ಇರುತ್ತದೆ. ಅದನ್ನು ಎಲ್ಲರೂ ಸ್ವೀಕರಿಸಲು ತಯಾರಿರಬೇಕು. ದಲಿತರ ಮಾಲೀಕತ್ವ ಇರುವ ಪತ್ರಿಕೆಯನ್ನು ಸಮಾಜ ಅಥವಾ ಸರ್ಕಾರ ಮೂರನೇ ದರ್ಜೆ ಪತ್ರಕರ್ತರನ್ನಾಗಿ ನೋಡುತ್ತಿದೆ. ಸ್ವಾಭಿಮಾನದ ಸಮುದಾಯ ಅಂದರೆ ದಲಿತ ಸಮುದಾಯ ಎಂದು ಹೇಳುವುದಕ್ಕೆ ಹೆಮ್ಮೆ ಎನ್ನಿಸುತ್ತದೆ. ಉದ್ಯಮಶೀಲತೆಗೆ ಹೋಗುವುದಕ್ಕೆ ಆತ್ಮಸ್ಥೈರ್ಯ ಬೇಕು ಎಂದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಎಸ್ಸಿ, ಎಸ್ಟಿ, ಪತ್ರಿಕಾ ಸಂಪಾದಕ ಸಂಘದ ಅಧ್ಯಕ್ಷ ಚೆಲುವರಾಜು, ಪ್ರಧಾನ ಕಾರ್ಯದರ್ಶಿ ಸೋಮಶೇಖರ ಕೆರೆಗೋಡು, ಸಂಯೋಜಕ ಎಸ್. ರವಿಕುಮಾರ್(ಟೆಲೆಕ್ಸ್) ಇದ್ದರು.

ಬೆಂಗಳೂರು ಉದ್ಯೋಗ ಮೇಳದಲ್ಲಿ ಲಕ್ಷಕ್ಕೂ ಹೆಚ್ಚು ಜನರಿಗೆ ನೌಕರಿ ಭಾಗ್ಯ!



ಬೆಂಗಳೂರು: ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ನಗರದ ಅರಮನೆ ಮೈದಾನದಲ್ಲಿ ಆಯೋಜಿಸಲಾಗಿದ್ದ ಎರಡು ದಿನಗಳ 'ಯುವ ಸಮೃದ್ಧಿ ಸಮ್ಮೇಳನ– ಬೃಹತ್ ಉದ್ಯೋಗ ಮೇಳ' ಯಶಸ್ವಿಯಾಗಿದ್ದು ಒಂದು ಲಕ್ಷಕ್ಕೂ ಹೆಚ್ಚು ಯುವಜನರು ಉದ್ಯೋಗ ಪಡೆದುಕೊಂಡಿದ್ದಾರೆ.

ಉದ್ಯೋಗ ಮೇಳಕ್ಕೆ 580 ಉದ್ಯೋಗ ದಾತರು ಆಗಮಿಸಿ ಒಂದು ಲಕ್ಷ ಉದ್ಯೋಗ ಅವಕಾಶಗಳನ್ನು ಒದಗಿಸಿದ್ದಾರೆ. ಮೇಳಕ್ಕೆ ಒಂದು ಲಕ್ಷಕ್ಕೂ ಹೆಚ್ಚು ಯುವಜನರು, ನಿರುದ್ಯೋಗಿಗಳು ನೋಂದಾಯಿಸಿಕೊಂಡಿದ್ದರು. ಇದೊಂದು ಐತಿಹಾಸಿಕ ಉದ್ಯೋಗ ಮೇಳವಾಗಿದ್ದು ಇದೇ ರೀತಿ ಕಲಬುರಗಿ, ಬೆಳಗಾವಿ, ಮೈಸೂರು ಮುಂತಾದ ಕಡೆಗಳಲ್ಲಿ ಪ್ರಾದೇಶಿಕ ಉದ್ಯೋಗ ಮೇಳಗಳನ್ನು ಆಯೋಜಿಸುತ್ತೇವೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ರಾಜ್ಯದ ಯುವ ಸಮುದಾಯಕ್ಕೆ ಉದ್ಯೋಗ, ಅಗತ್ಯವಾದ ಕೌಶಲ್ಯ, ಉದ್ಯಮಶೀಲತೆಗೆ ಪ್ರೋತ್ಸಾಹ ಮತ್ತು ಉದ್ಯೋಗ ಹುಡುಕುವ ಅವಧಿಯಲ್ಲಿ ನೆರವಾಗಲು ಯುವನಿಧಿ ಪ್ರೋತ್ಸಾಹ ಧನ ನೀಡುವ ಮೂಲಕ ಯುವ ಸಮುದಾಯಕ್ಕೆ ಸುಭದ್ರ ಭವಿಷ್ಯ ಕಟ್ಟಿಕೊಡಲು ಸರ್ಕಾರ ಬದ್ಧವಾಗಿದೆ ಎಂದು ಸಿಎಂ ಭರವಸೆ ನೀಡಿದರು. ಯುವ ಸಮುದಾಯಕ್ಕೆ ಕೆಲಸ ಸಿಕ್ಕರೆ ದೇಶದ ಭವಿಷ್ಯ ಭದ್ರವಾಗಿರುತ್ತದೆ. ಹೀಗಾಗಿ, ನಿರುದ್ಯೋಗ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು ನಾವು ಪಣ ತೊಟ್ಟಿದ್ದೇವೆ. ಅದಕ್ಕಾಗಿಯೇ ಈ ಮೇಳ ಆಯೋಜಿಸಲಾಗಿದೆ ಎಂದು ಅವರು ಹೇಳಿದರು.

ರಸ್ತೆ ಸುರಕ್ಷತೆ ಜಾಗೃತಿಗೆ ಮಕ್ಕಳಿಂದ ಜಾಥಾ



ಮೈಸೂರು, ಫೆ.28(ಪಿಎಂ)– ದ್ವಿಚಕ್ರ ವಾಹನ ಸವಾರಿ ವೇಳೆ ಹೆಲ್ಮೆಟ್ ಧರಿಸಿ... ಅತಿ ವೇಗದ ವಾಹನ ಚಾಲನೆ ಅನಾಹುತಕ್ಕೆ ಆಹ್ವಾನ... ಸಂಚಾರ ನಿಯಮಗಳನ್ನು ಪಾಲಿಸಿ... ಹೀಗೆ ಪುಟಾಣಿ ಮಕ್ಕಳು ವಿವಿಧ ಘೋಷಣೆಗಳನ್ನು ಕೂಗಿ ಸಾಗುವ ಮೂಲಕ ರಸ್ತೆ ಸುರಕ್ಷತೆಯ ಬಗ್ಗೆ ಜಾಗೃತಿ ಮೂಡಿಸಿದರು.

ಆ ಮೂಲಕ ಚಿಕ್ಕ ಮಕ್ಕಳು ತಾವೂ ರಸ್ತೆ ಸುರಕ್ಷತೆಯ ಬಗ್ಗೆ ಅರಿವು ಹೊಂದುವ ಜೊತೆಗೆ ಸಾರ್ವಜನಿಕರಿಗೂ ಜಾಗೃತಿ ಮೂಡಿಸಿದರು. ಮೈಸೂರಿನ ಕುವೆಂಪುನಗರದ ಪೊದರ್ ಜಂಬೋ ಕಿಡ್ಸ್ ವತಿಯಿಂದ ಇತ್ತೀಚೆಗೆ ಹಮ್ಮಿಕೊಂಡಿದ್ದ ಜಾಗೃತಿ ಜಾಥದಲ್ಲಿ ಸಂಸ್ಥೆಯ ಮಕ್ಕಳು ಹೀಗೆ ರಸ್ತೆಯಲ್ಲಿ ಹೆಜ್ಜೆ ಹಾಕುತ್ತಾ ಅರಿವಿನ ಸಂದೇಶ ಸಾರಿದರು. ಮೈಸೂರಿನ ರಾಮಕೃಷ್ಣ ಪರಮಹಂಸ ವೃತ್ತದ ಬಳಿಯಿಂದ ಆರಂಭವಾದ ಜಾಥವು ವಿವಿಧ ರಸ್ತೆಗಳಲ್ಲಿ ಸಾಗಿತು. ಸುಮಾರು ಸಮಾರು 2 ಕಿ.ಮೀ. ನಡೆದ ಈ ಜಾಥಾದಲ್ಲಿ ಮಕ್ಕಳೊಂದಿಗೆ ಅವರ ಪೋಷಕರು ಹಾಗೂ ಶಿಕ್ಷಕರು ಪಾಲ್ಗೊಂಡಿದ್ದರು.

ನಾಳೆ, ನಾಳಿದ್ದು ಹಾಸನ, ಮೈಸೂರಲ್ಲಿ ಸಿಎಂ ಪ್ರವಾಸ



ಮೈಸೂರು,ಫೆ.28(ಪಿಎಂ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾ.1 ಮತ್ತು 2ರಂದು ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಮಾ.1ರಂದು ಬೆಳಗ್ಗೆ 10ಕ್ಕೆ ಬೆಂಗಳೂರಿನಿಂದ ಹೆಲಿಕಾಪ್ಟರ್ ಮೂಲಕ ತೆರಳುವ ಸಿಎಂ ಬೆಳಗ್ಗೆ 11ಕ್ಕೆ ಹಾಸನದ ಭುವನಹಳ್ಳಿ ಗ್ರಾಮ ಹೆಲಿಪ್ಯಾಡ್‌ಗೆ ಆಗಮಿಸಿದ ಬಳಿಕ ಐಡಿಎಸ್‌ಎಂಟಿ ಯೋಜನೆಯಡಿ ಹಾಸನ ನಗರದ 25ನೇ ವಾರ್ಡಿನಲ್ಲಿ ನಿರ್ಮಿಸಿರುವ ವಾಣಿಜ್ಯ ಸಂಕೀರ್ಣದ ಉದ್ಘಾಟನೆ, ಹಾಸನ ನಗರ ಸಭಾ ವ್ಯಾಪ್ತಿಯಲ್ಲಿನ ವಿವಿಧ ಕಾಮಗಾರಿಗಳ ಶಂಕುಸ್ಥಾಪನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

ನಂತರ ಮಧ್ಯಾಹ್ನ 2ಕ್ಕೆ ಅಲ್ಲಿಂದ ಹೆಲಿಕಾಪ್ಟರ್ ಮೂಲಕ ತೆರಳುವ ಅವರು ಮಧ್ಯಾಹ್ನ 2.40ಕ್ಕೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಿ, ಸಂಜೆ 4ಕ್ಕೆ ಮೈಸೂರಿನ ಕಲಾಮಂದಿರದಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಆಯೋಜಿಸಿರುವ 'ಪ.ಮಲ್ಲೇಶ್–90, ಭಾರತದ ಜನತಂತ್ರದ ಸಮಕಾಲೀನ ತಲ್ಲಣಗಳು' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪಾಲ್ಗೊಳ್ಳಲಿದ್ದಾರೆ. ಸಂಜೆ 5ಕ್ಕೆ ಎನ್.ಆರ್. ಮೊಹಲ್ಲಾದ ಶಿವಾಜಿ ರಸ್ತೆಯಲ್ಲಿ ದಿ.ರಾಕೇಶ್ ಸಿದ್ದರಾಮಯ್ಯನವರ ಸ್ಮರಣಾರ್ಥದ ಶ್ರೀನಿವಾಸ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ಸಂಜೆ 6ಕ್ಕೆ ಮೈಸೂರಿನ ಯರಗನಹಳ್ಳಿಯಲ್ಲಿ ನಿವೃತ್ತ ಶಿಕ್ಷಕರ ಸದನದ ಕಟ್ಟಡ ಉದ್ಘಾಟಿಸಲಿದ್ದಾರೆ. ನಂತರ ಮೈಸೂರಿನಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಮಾ.2 ರಂದು ಬೆಳಗ್ಗೆ 9.30ಕ್ಕೆ ಜಲಪುರಿಯಲ್ಲಿ ಪೊಲೀಸ್ ಆರೋಗ್ಯ ಕೇಂದ್ರದ ಕಟ್ಟಡ ಉದ್ಘಾಟಿಸಲಿದ್ದಾರೆ. ನಂತರ ಬೆಳಗ್ಗೆ 11ಕ್ಕೆ ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ನಿರ್ಗಮಿಸಲಿರುವ ಮುಖ್ಯಮಂತ್ರಿಗಳು, ಬೆಳಗ್ಗೆ 11.25ಕ್ಕೆ ಬೆಂಗಳೂರು ಹೆಚ್‌ಎಎಲ್ ವಿಮಾನ ನಿಲ್ದಾಣ ತಲುಪಲಿದ್ದಾರೆ.

ಮಾ.3, ಕೆಎಸ್‌ವೈಡಬ್ಲೂಎಂ 'ಉದ್ಘಾಟನಾ ಕಪ್–2024' ಪುರುಷರ ಹಾಕಿ ಪಂದ್ಯಾವಳಿ

ಮೈಸೂರು, ಫೆ.28(ಎಂಕೆ)– ಕೊಡವ ಸಮಾಜ ಯೂತ್ ವಿಂಗ್ ಮೈಸೂರು ವತಿಯಿಂದ ಮಾ.3 ರಂದು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಕೆಎಸ್‌ವೈಡಬ್ಲೂಎಂ (KSYWM) 'ಉದ್ಘಾಟನಾ ಕಪ್–2024' ಪುರುಷರ ಹಾಕಿ ಪಂದ್ಯಾವಳಿಯನ್ನು ಹಮ್ಮಿಕೊಳ್ಳಲಾಗಿದೆ.

INAUGURAL CUP 2024

ಮೈಸೂರು, ಮಡಿಕೇರಿ ಮತ್ತು ಬೆಂಗಳೂರಿನ 8 ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸಲಿದ್ದು, ಗಣ್ಯರು, ಕೊಡವ ಸಮಾಜ ಯೂತ್ ವಿಂಗ್ ಪದಾಧಿಕಾರಿಗಳು ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

9 ಕೋಟಿಗೂ ಹೆಚ್ಚು ರೈತರ ಖಾತೆಗೆ ಪಿಎಂ ಕಿಸಾನ್ 16ನೇ ಕಂತಿನ ಹಣ ಬಿಡುಗಡೆ

ಮುಂಬೈ, ಫೆ.28– ಮಹಾರಾಷ್ಟ್ರದ ಯವತ್ಮಾಲ್‌ನಲ್ಲಿ ಇಂದು ಪ್ರಧಾನಿ ನರೇಂದ್ರ ಮೋದಿ ಪಿಎಂ ಕಿಸಾನ್ ಯೋಜನೆ ಅಡಿ 16ನೇ ಕಂತಿನ ಹಣವನ್ನು ಬಿಡುಗಡೆ ಮಾಡಿದ್ದಾರೆ. 9 ಕೋಟಿಗೂ ಹೆಚ್ಚು ರೈತರ ಖಾತೆಗಳಿಗೆ ಒಟ್ಟು 21,000 ಕೋಟಿ ರೂಗೂ ಹೆಚ್ಚಿನ ಮೊತ್ತವನ್ನು ಪ್ರಧಾನಿ ಮೋದಿ ರಿಮೋಟ್ ಬಟನ್ ಒತ್ತುವ ಮೂಲಕ ರವಾನೆ ಮಾಡಿದ್ದಾರೆ. ಅಷ್ಟೂ ಫಲಾನುಭವಿಗಳ ಖಾತೆಗಳಿಗೆ ತಲಾ 2,000 ರೂ. ಸಿಗಲಿದೆ.

2019ರಲ್ಲಿ ಆರಂಭವಾದ ಪಿಎಂ ಕಿಸಾನ್ ಯೋಜನೆಯಲ್ಲಿ ಇಲ್ಲಿಯವರೆಗೆ 16 ಕಂತುಗಳನ್ನು ರೈತರ ಖಾತೆಗಳಿಗೆ ಬಿಡುಗಡೆ ಮಾಡಲಾಗಿದೆ. ಐದು ವರ್ಷದಲ್ಲಿ ಒಟ್ಟಾರೆ 3 ಲಕ್ಷ ಕೋಟಿ ರೂ ಹಣ ರೈತರಿಗೆ ಸಿಕ್ಕಿದೆ. ಈ ಯೋಜನೆಯಲ್ಲಿ ಕೇಂದ್ರ ಸರ್ಕಾರ ಅರ್ಹ ರೈತರಿಗೆ ವರ್ಷಕ್ಕೆ 6,000 ರೂ ಒದಗಿಸುತ್ತದೆ. ನಾಲ್ಕು ತಿಂಗಳಿಗೊಮ್ಮೆಯಂತೆ 2,000 ರೂಗಳನ್ನು ನೀಡಲಾಗುತ್ತದೆ.

ಇದೀಗ ಪ್ರಧಾನಿ ನರೇಂದ್ರ ಮೋದಿ 16ನೇ ಕಂತಿನ ಹಣ ಬಿಡುಗಡೆ ಮಾಡಿದ್ದಾರೆ. ಈ ಹಣ ನಿಮ್ಮ ಖಾತೆಗೆ ತಲುಪಿದೆಯಾ ಪರೀಕ್ಷಿಸಿ. ಕೆಲವೊಮ್ಮೆ ಹಣ ತತ್‌ಕ್ಷಣ ಖಾತೆಗೆ ಬರದೇ ಹೋಗಬಹುದು. ಒಂದು ವಾರದ ಅವಧಿಯೊಳಗೆ ಹಣ ವರ್ಗಾವಣೆ ಆಗಿರುತ್ತದೆ.

ನಟ ಡಾಲಿ ಧನಂಜಯ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ರಾಯಭಾರಿಯಾಗಿ ನೇಮಕ



ಬೆಂಗಳೂರು, ಫೆ28– 2023–24ನೇ ಸಾಲಿನಲ್ಲಿ ಬೆಂಗಳೂರಿನಲ್ಲಿ ಏರ್ಪಡಿಸಲಿರುವ '15ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವ'ದ ರಾಯಭಾರಿಯನ್ನಾಗಿ ಕನ್ನಡ ಚಿತ್ರರಂಗದ ಖ್ಯಾತ ನಟ ಡಾಲಿ ಧನಂಜಯ್ ಅವರನ್ನು ನೇಮಿಸಲಾಗಿದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಅಧೀನದಲ್ಲಿರುವ ಕರ್ನಾಟಕ ಚಲನಚಿತ್ರ ಅಕಾಡೆಮಿಯ ವತಿಯಿಂದ ಪ್ರತಿವರ್ಷ ಬೆಂಗಳೂರು ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವವನ್ನು ಆಯೋಜಿಸುತ್ತಿದೆ.

ಪಿ.ಎನ್. ಪಾವನಾಗೆ ಪಿಹೆಚ್.ಡಿ.



ಮೈಸೂರು, ಫೆ. 28 – ಡಾ. ಆಲೂರೇಗೌಡ ಅವರ ಮಾರ್ಗದರ್ಶನದಲ್ಲಿ ಪಿ.ಎನ್. ಪಾವನಾ ಅವರು ನಿರ್ವಹಣೆ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಾಳೆ ಕಾಡಾ ಕಚೇರಿ ಎದುರು ಕಾವೇರಿ ಕ್ರಿಯಾ ಸಮಿತಿ ಪ್ರತಿಭಟನೆ

ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್ ಘೋಷಣೆ



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಬುಧವಾರ ಕಾವೇರಿ ಕ್ರಿಯಾ ಸಮಿತಿ ಸಭೆ ನಡೆಯಿತು.

ಮೈಸೂರು,ಫೆ.28(ಪಿಎಂ)– ತಮಿಳುನಾಡಿಗೆ ಪ್ರತಿದಿನ ಕಾವೇರಿ ನೀರು ಈಗಲೂ ಹರಿಯುತ್ತಿದ್ದು, ಈಗಲಾದರೂ ನೀರು ನಿಲ್ಲಿಸದಿದ್ದರೆ ನಮ್ಮಲ್ಲಿ ನೀರಿನ ಬವಣೆ ಎದುರಾಗಲಿದೆ ಎಂದು ತಿಳಿಸಿದ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್ (ಜೆಪಿ), ಈ ನಿಟ್ಟಿನಲ್ಲಿ ನಮ್ಮ ಸಮಿತಿ ಹೋರಾಟ ತೀವ್ರಗೊಳಿಸುತ್ತಿದ್ದು, ಮಾ.1ರಂದು ಮೈಸೂರಿನ ಕಾಡಾ ಕಚೇರಿ ಮುಖ್ಯದ್ವಾರದಲ್ಲಿ ಪ್ರತಿಭಟನಾ ಧರಣಿ ನಡೆಸಲು ತೀರ್ಮಾನಿಸಿದೆ ಎಂದು ಹೇಳಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದ ಸಭಾಂಗಣದಲ್ಲಿ (ನೂತನ ಕಟ್ಟಡ) ಬುಧವಾರ ಹಮ್ಮಿಕೊಂಡಿದ್ದ ಸಮಿತಿಯ ಮುಂದಿನ ಹೋರಾಟ ಕುರಿತ ಸಭೆ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಅಂದು ಬೆಳಗ್ಗೆ 11ಕ್ಕೆ ಪ್ರತಿಭಟನಾ ಧರಣಿ ನಡೆಸಲಾಗುವುದು. ಬೇಸಿಗೆ ಹಿನ್ನೆಲೆಯಲ್ಲಿ ಇನ್ನು 15 ದಿನಗಳ ಬಳಿಕ ರಾಜ್ಯದಲ್ಲಿ ನೀರಿನ ಸಮಸ್ಯೆ ತಲೆದೋರಲಿದೆ. ಹೀಗಾಗಿ ಕಾವೇರಿ ನೀರಿನ ವಿಚಾರದಲ್ಲಿ ಸರ್ಕಾರ ಕೂಡಲೇ ಎಚ್ಚೆತ್ತುಕೊಳ್ಳಬೇಕು ಎಂದು ಒತ್ತಾಯಿಸಿದರು.

ಮೊನ್ನೆ ತಮಿಳುನಾಡು ಸರ್ಕಾರದ ಜಲಸಂಪನ್ಮೂಲ ಸಚಿವರು ಕಾವೇರಿ ನೀರು ವಿಚಾರದ ಯಾವುದೇ ಕಾಮಗಾರಿಗೂ (ಮೇಕೆದಾಟು ಯೋಜನೆ) ಕರ್ನಾಟಕಕ್ಕೆ ಅವಕಾಶ ನೀಡುವುದಿಲ್ಲ ಎಂದು ಹೇಳಿದ್ದು, ಇದಕ್ಕೆ ಪ್ರತ್ಯುತ್ತರವನ್ನು ನಮ್ಮವರು ಯಾರೂ ನೀಡಿಲ್ಲ. ಇದಕ್ಕಿಂತ ಅವಮಾನ ಇಲ್ಲ. ರಾಜ್ಯದ ನೆಲ, ಜಲ, ಭಾಷೆ ಮತ್ತು ಸಂಸ್ಕೃತಿ ಬಗ್ಗೆ ಇಚ್ಛಾಸಕ್ತಿ ಇಲ್ಲದ ರಾಜ್ಯದ ರಾಜಕಾರಣಿಗಳಿಗೆ ಧಿಕ್ಕಾರವಿರಲಿ ಎಂದು ಖಂಡಿಸಿದರು.

ತಮಿಳುನಾಡಿನಲ್ಲಿ ಅಲ್ಲಿನ ಜನ ಯಾರೂ ಪ್ರತಿಭಟನೆ ಮಾಡುತ್ತಿಲ್ಲ. ಆದರೆ ಅಲ್ಲಿಯ ರಾಜಕೀಯ ಮುಖಂಡರು ಇಚ್ಛಾಸಕ್ತಿಯಿಂದ ತಾವೇ ಮುಂದೆ ಬಂದು ತಮ್ಮ ರಾಜ್ಯಕ್ಕೆ ಕಾವೇರಿ ನೀರು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ನಮ್ಮ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ದೂರಿದರು. ವಿಧಾನಸೌಧದಲ್ಲಿ ಮಂಗಳವಾರ 'ಪಾಕಿಸ್ತಾನ ಜಿಂದಾಬಾದ್' ಎಂದು ಘೋಷಣೆ ಕೂಗಲಾಗಿದೆ ಎಂದು ಆರೋಪಿಸಿದ ಅವರು, ಕೂಡಲೇ ಈ ಘೋಷಣೆ ಕೂಗಿದವರನ್ನು ದೇಶದಿಂದಲೇ ಗಡಿಪಾರು ಮಾಡಲು ಸರ್ಕಾರ ಕ್ರಮ ವಹಿಸಬೇಕು. ಇಲ್ಲವಾದರೆ ದೇಶದ್ರೋಹದ ಹಣೆಪಟ್ಟಿ ಕಟ್ಟಿಕೊಂಡು ಸರ್ಕಾರ ನಡೆಸಲಿ ಎಂದು ರಾಜ್ಯ ಸರ್ಕಾರವನ್ನು ಛೇಡಿಸಿದರು.

ಸಮಿತಿ ಪ್ರಧಾನ ಸಂಚಾಲಕ ಮೂಗೂರು ನಂಜುಂಡಸ್ವಾಮಿ, ಉಪಾಧ್ಯಕ್ಷ ಎಂ.ಜೆ.ಸುರೇಶ್‌ಗೌಡ, ರಾಜಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಕನ್ನಡಾಂಬೆ ಕಲಾ ಸಂಘದ ಅಧ್ಯಕ್ಷ ರಾಜಶೇಖರ್, ಮುಖಂಡರಾದ ಬೋಗಾದಿ ಸಿದ್ದೇಗೌಡ, ತೇಜೇಶ್ ಲೋಕೇಶ್ ಗೌಡ, ಸಿಂಧುವಳ್ಳಿ ಸುಬ್ರಹ್ಮಣ್ಯಂ, ಮಂಜುಳಾ, ಪದ್ಮಾ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.


ಚಾ.ನಗರದಿಂದ ಗೆದ್ದು ಸಿಎಂ ಕೈ ಬಲ ಪಡಿಸುವಾಸೆ

ಟಿಕೆಟ್ ಆಕಾಂಕ್ಷಿ ಮಾಜಿ ಸಚಿವ ಸೋಮಶೇಖರ್ ಇಂಗಿತ

ತಿ.ನರಸೀಪುರ, ಫೆ.28– ಚಾಮರಾಜನಗರ ಲೋಕಸಭಾ ಕ್ಷೇತ್ರ ನನಗೆ ಸಂಪೂರ್ಣ ಪರಿಚಿತ ಕ್ಷೇತ್ರವಾಗಿದ್ದು,ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಸಾಧಿಸುವ ಮೂಲಕ ಸಿಎಂ ಸಿದ್ದರಾಮಯ್ಯ ಅವರ ಕೈ ಬಲಪಡಿಸಬೇಕೆಂಬ ಮಹದಾಸೆ ಹೊಂದಿದ್ದೇನೆ ಎಂದು ಮಾಜಿ ಸಚಿವ ಬಿ.ಸೋಮಶೇಖರ್ ತಿಳಿಸಿದ್ದಾರೆ.

ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಚಾಮರಾಜನಗರ ನನ್ನ ಪಕ್ಕದ ಕ್ಷೇತ್ರ, ಜೊತೆಗೆ ನಾನೊಬ್ಬ ಹಿರಿಯ ದಲಿತ ಪ್ರತಿನಿಧಿಯಾಗಿದ್ದು, ಕ್ಷೇತ್ರ ವ್ಯಾಪ್ತಿಗೆ ಬರುವ ಎಲ್ಲಾ 8 ತಾಲೂಕು ಚಿರಪರಿಚಿತವಾಗಿರುವುದರಿಂದ ಈ ಕ್ಷೇತ್ರವನ್ನೇ ಆಯ್ಕೆ ಮಾಡಿಕೊಂಡಿದ್ದೇನೆ. ಕಾಂಗ್ರೆಸ್ ಹೈಕಮಾಂಡ್ ನಾನು ಮಂತ್ರಿಯಾಗಿದ್ದಾಗ ಜಾರಿಗೆ ತಂದ ಜನಪರ ಯೋಜನೆಗಳನ್ನು ಗಮನಿಸಿ ನನಗೆ ಟಿಕೆಟ್ ನೀಡುತ್ತದೆ ಎಂಬ ವಿಶ್ವಾಸ ಹೊಂದಿದ್ದೇನೆ ಎಂದು ಆಶಯ ವ್ಯಕ್ತಪಡಿಸಿದರು.

ಕ್ಷೇತ್ರದಲ್ಲಿ ಆಕಾಂಕ್ಷಿಗಳ ಪಟ್ಟಿ ದೊಡ್ಡದಿರಬಹುದು, ಆದರೆ ನನ್ನನ್ನು ಹೊರತುಪಡಿಸಿದರೆ ಬೇರೆಯವರಿಗೆ ಹಿರಿತನದ ಕೊರತೆ ಇದೆ. ಅಲ್ಲದೇ ಆಕಾಂಕ್ಷಿಗಳ ಪೈಕಿ ನಾನೇ ಹಿರಿಯನಾಗಿದ್ದು, ಉತ್ತಮ ಅನುಭವ ಹೊಂದಿದ್ದೇನೆ. ಮಂತ್ರಿಯಾಗಿ ಒಳ್ಳೊಳ್ಳೆ ಕೆಲಸ ಮಾಡಿದ್ದೇನೆ.ಹೀಗಾಗಿ ನನಗೆ ಕ್ಷೇತ್ರ ಸಿಗುವ ಅವಕಾಶ ಹೆಚ್ಚು, ಹಾಲಿ ಸಚಿವ ಮಹದೇವಪ್ಪ ನಾನು ಲೋಕಸಭಾ ಚುನಾವಣೆಯ ಆಕಾಂಕ್ಷಿಯಲ್ಲ ಎಂದು ಹೇಳಿದ್ದಾರೆ.



ತಿ.ನರಸೀಪುರ ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾಜಿ ಸಚಿವ ಹಾಗೂ ಚಾಮರಾಜ ನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಟಿಕೆಟ್ ಆಕಾಂಕ್ಷಿ ಬಿ.ಸೋಮಶೇಖರ್ ಮಾತನಾಡಿದರು.

ಹಾಗಾಗಿ ಹಿರಿತನ ಹಾಗೂ ಜನತೆಯ ಅಭಿಪ್ರಾಯ ಆಧರಿಸಿ ಪಕ್ಷ ನನ್ನ ಪರವಾದ ತೀರ್ಮಾನ ತೆಗೆದುಕೊಳ್ಳಲಿದೆ ಎಂದರು.

ನಾನೀಗಾಗಲೇ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಪಕ್ಷದ ಅಧ್ಯಕ್ಷರನ್ನು ಭೇಟಿ ಮಾಡಿ ಟಿಕೆಟ್ ಬಗ್ಗೆ ಮಾತನಾಡಿದ್ದೇನೆ. ಸ್ಥಳೀಯರ ಅಭಿಪ್ರಾಯ ಸಂಗ್ರಹ ಮಾಡಿ ಯಾರ ಪರವಾಗಿ ಹೆಚ್ಚು ಒಲವು ವ್ಯಕ್ತವಾಗುತ್ತದೋ ಅದನ್ನು ಸರ್ವೆ ಮಾಡಿ ಅಂತ ಹವರಿಗೆ ಟಿಕೆಟ್ ನೀಡುವುದಾಗಿ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಅದರ ಪ್ರಕಾರ ನಾನು ಹೋದೆಡೆ ಯೆಲ್ಲಾ ನಿರೀಕ್ಷೆಗೂ ಮೀರಿದ ಸ್ವಾಗತ ದೊರಕುತ್ತಿದೆ.

ಸಿದ್ದರಾಮಯ್ಯ ಅವರು ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಉತ್ತಮ ಕೆಲಸ ಮಾಡುತ್ತಿದ್ದಾರೆ. ಅದರಲ್ಲೂ ವಿಶೇಷವಾಗಿ 5 ಗ್ಯಾರಂಟಿಗಳನ್ನು ಜಾರಿಗೊಳಿಸಿ ಚುನಾವಣಾ ಪೂರ್ವದಲ್ಲಿ ನೀಡಿದ್ದ ಭರವಸೆಯನ್ನು ಈಡೇರಿಸಿದ್ದಾರೆ. ಬಹುಶಃ ದೇಶದ ಯಾವುದೇ ರಾಜ್ಯಕ್ಕೆ ಹೋಲಿಕೆ ಮಾಡಿದರೆ ಅವರು ಅತ್ಯಂತ ಯಶಸ್ವಿ ಮುಖ್ಯಮಂತ್ರಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಅವರ ನಾಯಕತ್ವದಲ್ಲಿ ರಾಜ್ಯ ಮುಂದುವರೆಯುತ್ತಿದೆ. ಅವರಲ್ಲಿ ಟಿಕೆಟ್‌ಗಾಗಿ ಬೇಡಿಕೆ ಇಟ್ಟಿದ್ದೇನೆ ಎಂದು ಅವರು ಹೇಳಿದರು.

ಬಿಜೆಪಿ ಅಧಿಕಾರಕ್ಕೆ ಬಂದರೆ ಸಂವಿಧಾನ ಬುಡಮೇಲು..!: ಮುಂದೆ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದರೆ ಸಂವಿಧಾನವನ್ನೇ ಬುಡಮೇಲು ಮಾಡಿ ದೇಶದಲ್ಲಿ ಅರಾಜಕತೆ ಸೃಷ್ಟಿ ಮಾಡುವ ಸಾಧ್ಯತೆ ಇರುವುದರಿಂದ ಜನತೆ ಅರಿತು ಸರ್ಕಾರವನ್ನು ಆಯ್ಕೆ ಮಾಡಿಕೊಳ್ಳುವ ಅವಶ್ಯಕತೆ ಇದೆ ಎಂದು ಮನವಿ ಮಾಡಿದ ಸೋಮಶೇಖರ್, ಕೆಲವೊಂದು ಪ್ರಕರಣಗಳಲ್ಲಿ ಕೇಂದ್ರದ ಬಿಜೆಪಿ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದೆ ಎಂದರು.

ಸುಳ್ಳಿನಿಂದಲೇ 10 ವರ್ಷ ಅಧಿಕಾರ: ಬಿಜೆಪಿ ಪಕ್ಷದವರು ಬರೀ ಸುಳ್ಳುಗಳನ್ನು ಹೇಳುತ್ತಲೇ 10 ವರ್ಷಗಳ ಕಾಲ ಆಡಳಿತ ನಡೆಸಿದರು.ಈಗ ಮತ್ತೆ ಕರ್ನಾಟಕದಲ್ಲಿ 28 ಸ್ಥಾನಗಳನ್ನು ನಾವೇ ಗೆಲ್ಲುತ್ತೇವೆ ಎನ್ನುತ್ತಿದ್ದಾರೆ. ಆದರೆ ಅದು ಸುಳ್ಳು ಸುಳ್ಳು ಹೇಳಿ ಮತ್ತೆ ಅಧಿಕಾರಕ್ಕೆ ಬರಬೇಕೆಂಬ ಹಗಲುಗನಸನ್ನು ಕಾಣುತ್ತಿದ್ದಾರೆ.ಈ ಬಾರಿ ನಡೆವ ಚುನಾವಣೆ ಬಹುಮಹತ್ವದ ಚುನಾವಣೆಯಾಗಲಿದೆ. ಇದರಲ್ಲಿ ಬಿಜೆಪಿ ಗೆದ್ದರೆ ಸಂವಿಧಾನ ತಿರುಚುವ ಕೆಲಸ ನಡೆಯಲಿದೆ. ಹಾಗಾಗಿ ಸಂವಿಧಾನ ಗೌರವಿಸುವ ಮತದಾರರು ಬಿಜೆಪಿಯನ್ನು ಸೋಲಿಸಬೇಕು ಎಂದು ಕರೆ ನೀಡಿದ ಅವರು, ಈ ಬಾರಿ ಕರ್ನಾಟಕದಲ್ಲಿ ಕಾಂಗ್ರೆಸ್20 ಹೆಚ್ಚು ಸ್ಥಾನ ಗೆದ್ದು ಬಿಜೆಪಿಗೆ ಬುದ್ಧಿ ಕಲಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮುಖಂಡ ರಂಗಸ್ವಾಮಿ, ಸೋಮು,ಕೆಬ್ಬೇಹುಂಡಿ ನಾಗರಾಜು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಮತ್ಸ್ಯಗಂಧ (ಕ)2 ಪ್ರದರ್ಶನಗಳು, ಪ್ರೇತ (ಕ) 2 ಪ್ರದರ್ಶನಗಳು	
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಕ್ರಾಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಮತ್ಸ್ಯಗಂಧ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಆರ್ಟಿಕಲ್ 370 (ಹಿಂ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಧೈರ್ಯಂ ಸರ್ವತ್ರ ಸಾಧನಂ	4 ಪ್ರದರ್ಶನಗಳು
ತಿಬ್ಬಾದೇವಿ	
ಲಾಲ್ ಸಲಾಮ್ (ತ)	4 ಪ್ರದರ್ಶನಗಳು
ಪ್ರಭಾ	
ಕ್ರಾಕ್(ಹಿಂ)	4 ಪ್ರದರ್ಶನಗಳು

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜೇನು ಹುಳುಗಳ ದಾಳಿಗೆ ವ್ಯಕ್ತಿ ಬಲಿ

ಮೂವರಿಗೆ ತೀವ್ರ ಗಾಯ, ಆತಂಕದ ಸ್ಥಿತಿ

ಬೆಟ್ಟದಪುರ, ಫೆ.28– ಜೇನುಹುಳುಗಳ ಹಿಂಡು ದಾಳಿ ನಡೆಸಿದ ಪರಿಣಾಮ ಓರ್ವ ಸಾವನ್ನಪ್ಪಿ, ಹಲವರು ಗಾಯಗೊಂಡಿರುವ ಘಟನೆ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿ ಬುಧವಾರ ಮಧ್ಯಾಹ್ನ ಸಂಭವಿಸಿದೆ. ಸುಬ್ರಮಣಿ ಎಂಬುವರೇ ಜೇನುಹುಳುಗಳ ದಾಳಿಗೆ ಬಲಿಯಾದವರಾಗಿದ್ದಾರೆ. ಇಂದು ಮಧ್ಯಾಹ್ನ ಸಾವಿರಾರು ಜೇನುಹುಳುಗಳು ಪಟ್ಟಣದ ಅಂಗಡಿ ಮತ್ತು ಹೋಟೆಲ್‌ಗಳಿಗೆ ನುಗ್ಗಿ ಸಿಕ್ಕಸಿಕ್ಕವರ ಮೇಲೆ ದಾಳಿ ನಡೆಸಿ ಕಚ್ಚಿದ್ದವು. ಬೆಟ್ಟದಪುರದಲ್ಲಿ ಹಲವಾರು ವರ್ಷಗಳಿಂದ ಹೋಟೆಲ್ ಮತ್ತು ಅಂಗಡಿಗಳಲ್ಲಿ ಕೆಲಸ ಮಾಡಿಕೊಂಡಿದ್ದ ಸುಬ್ರಮಣಿ ಮೇಲೆ ಜೇನು ಹುಳುಗಳು ಏಕಾಏಕಿ ದಾಳಿ ನಡೆಸಿದ ಪರಿಣಾಮ ಅವರು ಅಸ್ವಸ್ಥರಾಗಿ ಬಿದ್ದರು.

ಕೂಡಲೇ ಪಿರಿಯಾಪಟ್ಟಣ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಅಷ್ಟರಲ್ಲಾಗಲೇ ಅವರು ಅಸು ನೀಗಿದ್ದರು. ಈತನಿಗೆ ಬಂಧು–ಬಳಗ ಯಾರೂ ಇಲ್ಲ ಎನ್ನಲಾಗಿದೆ. ಜೇನುಹುಳುಗಳ ದಾಳಿಯಿಂದ ಮೂವರು ತೀವ್ರವಾಗಿ ಗಾಯಗೊಂಡಿದ್ದು, ಅವರನ್ನು ಪಿರಿಯಾಪಟ್ಟಣ ಆಸ್ಪತ್ರೆಗೆ ದಾಖಲಿಸಲಾಗಿದೆ. ಇನ್ನು ಹಲವರಿಗೆ ಹುಳುಕಚ್ಚಿ ಸಣ್ಣಪುಟ್ಟ ಗಾಯಗಳಾಗಿವೆ. ಇದರಿಂದ ಪಟ್ಟಣದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ನಂತರ ಸಾರ್ವಜನಿಕರು ಬೆಂಕಿ ಹಚ್ಚಿ ಹೊಗೆ ಬರುವಂತೆ ಮಾಡಿ ಹುಳುಗಳನ್ನು ಓಡಿಸಿದ್ದಾರೆ.

ಆವಿಷ್ಕಾರಗಳು ಮಾನವನ ಪ್ರಗತಿಯ ಕೊಡುಗೆಗಳು

ನಂಜನಗೂಡು, ಫೆ.28– ವಿಜ್ಞಾನದ ಆವಿಷ್ಕಾರಗಳು ಮಾನವನ ಪ್ರಗತಿಗೆ ಬಹಳಷ್ಟು ಕೊಡುಗೆಗಳನ್ನು ನೀಡುವ ಮೂಲಕ ಉದ್ಧರಿಸಿದೆ, ವಿದ್ಯಾರ್ಥಿಗಳು ವೈಜ್ಞಾನಿಕ ದೃಷ್ಟಿಕೋನ ಬೆಳೆಸಿಕೊಳ್ಳಬೇಕು ಎಂದು ಮುಖ್ಯ ಶಿಕ್ಷಕ ಮಹೇಶ್ ಕುಮಾರ್ ಹೇಳಿದರು.

ತಾಲೂಕಿನ ಹಗಿನವಾಳು ಗ್ರಾಮದ ಗ್ರಂಥಾಲಯದಲ್ಲಿ ಬುಧವಾರ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಜ್ಞಾನದಿಂದ ಪಡೆದ ಜ್ಞಾನ, ಆವಿಷ್ಕಾರಗಳಿಂದ ನಮ್ಮ ಕೃಷಿ, ಆರೋಗ್ಯ, ದೇಶದ ರಕ್ಷಣಾ ಕ್ಷೇತ್ರ ಶಕ್ತಿಯುತವಾಗಿದೆ. ಮಾನವನ ಸಮಗ್ರ ಜೀವನ ಹಸನುಗೊಂಡಿದೆ, ಕಂದಾಚಾರಗಳಿಂದ ಇಂದಿನ ಪೀಳಿಗೆ ಹೊರಬಂದು ವೈಜ್ಞಾನಿಕವಾಗಿ ಯೋಚಿಸುವ, ಬದುಕಿನಲ್ಲಿ ಅಳವಡಿಸಿಕೊಳ್ಳುವ ಮೂಲಕ ಅಭಿವೃದ್ಧಿ ಸಾಧಿಸುತ್ತಿದ್ದಾರೆ ಎಂದು ಹೇಳಿದರು.



ನಂಜನಗೂಡು ತಾಲೂಕಿನ ಹಗಿನವಾಳು ಗ್ರಾಮದ ಗ್ರಂಥಾಲಯದಲ್ಲಿ ಬುಧವಾರ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮವನ್ನು ಮುಖ್ಯ ಶಿಕ್ಷಕ ಮಹೇಶ್ ಕುಮಾರ್ ಉದ್ಘಾಟಿಸಿ, ಮಾತನಾಡಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ವಿಜ್ಞಾನದ ಪ್ರಯೋಗಗಳ ಮೂಲಕ ಸರ್ ಸಿ.ವಿ.ರಾಮನ್ ಎಫೆಕ್ಟ್ ಬಗ್ಗೆ ಅರಿವು ಮೂಡಿಸಲಾಯಿತು. ವಿಜ್ಞಾನ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಗ್ರಾ.ಪಂ ಅಧ್ಯಕ್ಷೆ ಜಯಮ್ಮ, ಪಿಡಿಓ ರವಿಕುಮಾರ್, ಗ್ರಂಥಪಾಲಕ ಸುರೇಶ್, ಪ್ರಾಧ್ಯಾಪಕರಾದ ಪುನೀತ್ ಕೋಕಿಲ, ಸುರೇಶ್ ಉಪಸ್ಥಿತರಿದ್ದರು.

ಮುತ್ತುರಾಜ್ ಕೊಲೆ ಆರೋಪಿಗಳ ಬಂಧಿಸಿ, ನ್ಯಾಯ ಒದಗಿಸಿ

ಮೃತನ ಕುಟುಂಬಕ್ಕೆ ನಿಟ್ಟೂರು ಮಠದ ಶ್ರೀಗಳ ಸಾಂತ್ವನ



ಮೃತರ ಕುಟುಂಬಕ್ಕೆ ಪರಿಹಾರ ನೀಡಿ, ಸಾಂತ್ವನ ಹೇಳುತ್ತಿರುವ ಶ್ರೀಗಳು.

ಹುಣಸೂರು, ಫೆ.28– ಮುತ್ತುರಾಜ್ ಕೊಲೆಗೆ ಕಾರಣರಾದ ಆರೋಪಿಗಳನ್ನು ಪತ್ತೆ ಹಚ್ಚುವ ಮೂಲಕ ಪೊಲೀಸರು, ನೊಂದ ಕುಟುಂಬಕ್ಕೆ ನ್ಯಾಯ ಕೊಡಿಸಬೇಕು ಎಂದು ನಿಟ್ಟೂರು ಮಠದ ಶ್ರೀ ರೇಣುಕಾಸ್ವಾಮಿ ಆಗ್ರಹಿಸಿದರು.

ಬುಧವಾರ ಬೆಳಗ್ಗೆ ತಾಲೂಕಿನ ದಾಸನಪುರ ಗ್ರಾಮದಲ್ಲಿ ಇತ್ತೀಚಿಗೆ ಹತ್ಯೆಯಾದ ವಿದ್ಯಾರ್ಥಿ ಮುತ್ತುರಾಜ್ ಮನೆಗೆ ಭೇಟಿ, ಮೃತ ಯುವಕನ ತಂದೆ ರವಿಕುಮಾರ್ ತಾಯಿ ವಸಂತರಿಗೆ ಸಾಂತ್ವನ ಹೇಳಿ, ನಂತರ ಮಾತನಾಡಿದ ಅವರು, ಕೊಲೆ ನಡೆದು ಹಲವು ದಿನಗಳೇ ಕಳೆದಿದೆ. ಕೊಲೆ ಯಾರು ಮಾಡಿದ್ದಾರೆ ಎಂಬುದನ್ನು ಕಂಡು ಹಿಡಿಯುವ ಜವಾಬ್ದಾರಿ ಪೊಲೀಸರ ಮೇಲಿದ್ದು, ಅವರಿಗೆ ತಕ್ಕ ಶಿಕ್ಷೆಯಾಗಬೇಕು. ನ್ಯಾಯ ಸಿಗದಿದ್ದರೆ ಹಾಲಿ ಶಾಸಕರು, ಸಂಸದರು, ಮಾಜಿ ಶಾಸಕರು ಮತ್ತು ಸಮಾಜದ ಬಂಧುಗಳೊಂದಿಗೆ ಹುಣಸೂರು ನಗರದಲ್ಲಿ ಬೃಹತ್ ಮೌನ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದರು.

ಸರಕಾರ ಈ ಕೂಡಲೇ ಮನೆಗೆ ಆಧಾರಸ್ತಂಭವಾಗಿದ್ದ ಒಬ್ಬನೆ ಮಗನನ್ನು ಕಳೆದುಕೊಂಡು ಅನಾಥವಾಗಿರುವ ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಮನವಿ ಮಾಡಿದರು. ನಂತರ ಮಾತನಾಡಿದ ಮೈಸೂರು–ಚಾಮರಾಜನಗರ ಜಿಲ್ಲಾ ಈಡಿಗ ಸಂಘದ ಅಧ್ಯಕ್ಷ ಎಂ.ಕೆ.ಪೋತರಾಜ್ ಮೃತನ ಕುಟುಂಬಕ್ಕೆ ವೈಯಕ್ತಿಕವಾಗಿ ಒಂದು ಲಕ್ಷದ ಚೆಕ್ ನೀಡಿ. ಕಳೆದುಕೊಂಡ ಮಗನನ್ನು ನಾವು ಕೊಡಲು ಸಾಧ್ಯವಿಲ್ಲ. ಇರುವ ಮಗಳಿಗೆ ಉತ್ತಮ ರೀತಿಯಲ್ಲಿ ಪರಿಪೂರ್ಣ ವಿದ್ಯಾಭ್ಯಾಸವನ್ನು ನಾವು ಮತ್ತು ಮಠವು ನೋಡಿಕೊಳ್ಳಲಿದೆ ಎಂದು ನೊಂದ ಕುಟುಂಬಕ್ಕೆ ಆತ್ಮಸ್ಥೈರ್ಯ ತುಂಬಿದರು.

ತಾಲೂಕು ಈಡಿಗ ಸಮಾಜ ಅಧ್ಯಕ್ಷ ವಿಶ್ವನಾಥ್, ಕಾರ್ಯದರ್ಶಿ ಧರ್ಮಾಪುರ ಶ್ಯಾಮ್, ಸಮಾಜದ ಗೋವಿಂದರಾಜು, ಸ್ವಾಮಿ, ಹರೀಶ್, ಶ್ರೀ ನಿವಾಸ್, ಗಿರೀಶ್, ಮಹದೇವ್, ನಾರಾಯಣ್ ಇದ್ದರು

ಉಚಿತ ಆರೋಗ್ಯ ತಪಾಸಣಾ ಶಿಬಿರ



ಶ್ರೀ ಮಾತಾ ಅಮೃತಾನಂದಮಯಿ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಸಲಾಯಿತು.

ಹೆಚ್.ಡಿ.ಕೋಟೆ, ಫೆ.28– ತಾಲೂಕಿನ ಮಸಣಕುಪ್ಪೆ ಗ್ರಾಮದಲ್ಲಿ ಶ್ರೀ ಮಾತಾ ಅಮೃತಾನಂದಮಯಿ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಏರ್ಪಡಿಸಲಾಗಿತ್ತು.

ಶಿಬಿರದಲ್ಲಿ ಬಿಪಿ, ಸಕ್ಕರೆ ಕಾಯಿಲೆ, ಇಸಿಜಿ ಇತ್ಯಾದಿ ಪರೀಕ್ಷೆಗಳನ್ನು ಉಚಿತವಾಗಿ ಮಾಡಲಾಯಿತು. ಶಿಬಿರದಲ್ಲಿ ಇನ್ನೂರಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ಶಿಬಿರವನ್ನು ಸದುಪಯೋಗಪಡಿಸಿಕೊಂಡರು.

ಕಾರ್ಯಕ್ರಮದಲ್ಲಿ ಡಾ. ಸೌಮ್ಯ, ಡಾ. ಪ್ರಸಾದ್, ಅಮೃತಚೈತನ್ಯ ಸ್ವಾಮಿ, ಕಾರ್ಯಕ್ರಮದ ವ್ಯವಸ್ಥಾಪಕರಾದ ಸಣ್ಣಸ್ವಾಮಿ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಿಲ್ಪಚಂದ್ರು, ಸದಸ್ಯ ದೇವರಾಜು, ಯೋಗೇಶ್, ತಾಲೂಕು ಜೆಡಿಎಸ್ ಅಧ್ಯಕ್ಷ ರಾಜೇಂದ್ರ, ಮುಖಂಡ ರಾದ ಚೇತನ್, ನವೀನ್ ಕುಮಾರ್, ಚಲುವ ರಾಜು, ಸಿದ್ದರಾಜು, ದರ್ಶೇಶ್, ಕಾಳಪ್ಪಾಜಿ, ಸೋಮಣ್ಣ, ಶಿವಪ್ಪ ಹಾಗೂ ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು.

ಬಿಜೆಪಿ ಮಂಡಲ ಅಧ್ಯಕ್ಷರಾಗಿ ಶಿವಕುಮಾರ್



ತಿ.ನರಸೀಪುರ, ಫೆ.28– ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಮಂಡಲ ಅಧ್ಯಕ್ಷರನ್ನಾಗಿ ಶಿವಕುಮಾರ್(ಸತ್ಯರಾಜ್) ಅವರನ್ನು ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆದೇಶದ ಮೇರೆಗೆ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹಾದೇವಸ್ವಾಮಿ ನೇಮಕ ಮಾಡಿದ್ದಾರೆ ಎಂದು ಪಕ್ಷದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕೇರಳದ ಲಾಟರಿ ಟಿಕೆಟ್ ಮಾರಾಟ ಮಾಡುತ್ತಿದ್ದವನ ಬಂಧನ

ಸರಗೂರು, ಫೆ.28– ಸರಗೂರು ಪೊಲೀಸರು ಕಾರ್ಯಾಚರಣೆ ನಡೆಸಿ ಕೇರಳ ಲಾಟರಿ ಟಿಕೆಟ್ ಮಾರಾಟ ಮಾಡುತ್ತಿದ್ದ ವ್ಯಕ್ತಿಯೊಬ್ಬವನ್ನು ಬಂಧಿಸಿದ್ದಾರೆ. ಸಾರ್ವಜನಿಕರಿಂದ ಬಂದ ದೂರನ್ನು ಆಧರಿಸಿ ಬುಧವಾರ ಸರಗೂರು ಟೌನ್ ಪೊಲೀಸರು ದಾಳಿ ನಡೆಸಿ, ಕೆಇಬಿ ಕಚೇರಿ ಬಳಿ ಅಕ್ರಮವಾಗಿ ಕೇರಳ ಲಾಟರಿ ಟಿಕೆಟ್ ಮಾರಾಟ ಮಾಡುತ್ತಿದ್ದ 1ನೇ ವಾರ್ಡ್ ನಿವಾಸಿ ಎಸ್.ಎಸ್.ಮಂಜುನಾಥ್‌ನನ್ನು ಬಂಧಿಸಿ, ಲಾಟರಿ ಟಿಕೆಟ್ ಸಮೇತ ಹಣವನ್ನು ವಶಕ್ಕೆ ಪಡೆದು ಕ್ರಮ ಕೈಗೊಂಡಿದ್ದಾರೆ. ಸಿಪಿಐ ಲಕ್ಷ್ಮೀಕಾಂತ್, ಪಿಎಸ್ಐ ಎಂ.ಸಿ. ಮಧು, ನಿರ್ದೇಶನದಂತೆ ನಡೆದ ಕಾರ್ಯಾಚರಣೆಯಲ್ಲಿ ಸಿಬ್ಬಂದಿಗಳಾದ ಇಮ್ರಾನ್ ಅಹಮದ್, ಶಿವರಾಜು, ನಾಗನಾಯಕ, ಆನಂದ್, ದೇವರಾಜು, ಇನ್ನಿತರರು ಭಾಗವಹಿಸಿದ್ದರು.





ಮಂಜುಳಾ ನಿಧನ



ಹಿರೀಕ್ಯಾತನಹಳ್ಳಿ, ಫೆ28– ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದ ರೈತ ವ್ಯವಸಾಯ ಸಹಕಾರ ಸಂಘದ ನಿರ್ದೇಶಕ ಹೆಚ್.ಜೆ. ನಾಗೇಶ್ ಅವರ ಪತ್ನಿ ಮಂಜುಳಾ (52) ಬುಧವಾರ ಬೆಳಗಿನ ಜಾವ ಅನಾರೋಗ್ಯದಿಂದ ನಿಧನರಾದರು.

ಬುಧವಾರ ಮಧ್ಯಾಹ್ನ 12 ಗಂಟೆಗೆ ಹಿರೀಕ್ಯಾತನಹಳ್ಳಿ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು. ಮೃತರು ಮೂವರು ಪುತ್ರಿಯರು ಹಾಗೂ ಪತಿಯನ್ನು ಅಗಲಿದ್ದಾರೆ. ಮಾಜಿ ಶಾಸಕ ಎಚ್.ಪಿ. ಮಂಜುನಾಥ್, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಗಣೇಶ್ ಗೌಡ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರು ಗಳಾದ ತೊಂಡಳ್ ರಾಮಕೃಷ್ಣೇಗೌಡ, ದೇವರಾಜ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಕೆಂಪೇಗೌಡ ಸೇರಿದಂತೆ ಹಲವು ಗಣ್ಯರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಗೋಪಮ್ಮ



ಸರಗೂರು, ಫೆ.28– ಲೋಕಾಯುಕ್ತ ನಿವೃತ್ತ ಎಸ್‌ಪಿ ಎಸ್.ಎಂ.ಪುಟ್ಟಮಾದಯ್ಯ ಅವರ ತಾಯಿ 4ನೇ ವಾರ್ಡ್ ನಿವಾಸಿ ಗೋಪಮ್ಮ (85) ಮಂಗಳವಾರ ನಿಧನರಾಗಿದ್ದಾರೆ.

ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದು, ಇವರ ಅಂತ್ಯಕ್ರಿಯೆಯನ್ನು ಪಟ್ಟಣದ ಅಂಬೇಡ್ಕರ್ ರುದ್ರಭೂಮಿಯಲ್ಲಿ ಬುಧವಾರ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಟೀಕೆಗಳು ಅಳಿಯುತ್ತವೆ, ಕೆಲಸಗಳು ಉಳಿಯುತ್ತವೆ

ಬನ್ನೂರು, ಫೆ.28– ಯಾವುದೇ ಪ್ರತಿಫಲಾಪೇಕ್ಷೆಯನ್ನು ಹೊಂದದೆ ಹಳ್ಳಿಗಳಲ್ಲಿ ಯಾರೇ ಯಾವುದೇ ಕೆಲಸವನ್ನು ಮಾಡಲು ಮುಂದಾದರೆ ಅವರಿಗೆ ಟೀಕೆಗಳು ತಪ್ಪಿದ್ದಲ್ಲ. ಟೀಕೆಗಳಿಗೆ ಕಿವಿಗೊಡದೇ ಹಳ್ಳಿಯ ಉದ್ಧಾರಕ್ಕೆ ಮುಂದಾಗಬೇಕು. ಮುಂದೆ ಟೀಕೆಗಳು ಅಳಿಯುತ್ತವೆ. ಅವರು ಮಾಡಿದ ಕೆಲಸಗಳು ಉಳಿಯುತ್ತವೆ ಎಂದು ಸಾಹಿತಿ, ಚಲನಚಿತ್ರ ನಿರ್ದೇಶಕರಾದ ನಾಗತಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಅವರು ಪಟ್ಟಣದ ಸಮೀಪದ ಯಾಚೇನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾದ ನೂತನ ಶಾಲಾ ಕಟ್ಟಡ, ಎನ್‌ಎಸ್‌ಎಸ್ ಶಿಬಿರದ ಉದ್ಘಾಟನೆ ಹಾಗೂ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದರು.

ಅರಿಷಡ್ವರ್ಗಗಳಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಲ್ಲಿ ಅತ್ಯಂತ ಅಪಾಯಕಾರಿಯಾಗಿರುವುದು ಗ್ರಾಮೀಣ ಪ್ರದೇಶದ ಜನರ ಬದುಕನ್ನು ಕಿತ್ತು ತಿನ್ನುತ್ತಿರುವ ಮತ್ಸರವಾಗಿದ್ದು, ಅದು ಇಂದು ಮೊದಲ ಸ್ಥಾನಕ್ಕೆ ಬಂದು ನಿಂತಿದೆ. ಒಬ್ಬ ಉದ್ಯೋಗದಾತನಾದರೆ, ಶ್ರೀಮಂತನಾದರೆ ಮೆಚ್ಚುವ ಬದಲು ತಾಳಿಕೊಳ್ಳಲಾಗದ ಸ್ಥಿತಿಗೆ ಬಂದು ತಲುಪಿರುವುದಾಗಿ ಬೇಸರ ವ್ಯಕ್ತಪಡಿಸಿದರು. ತಾವು ಕೂಡ ಹಳ್ಳಿಯ ಅಭಿವೃದ್ಧಿಯ ಕನಸು ಹೊತ್ತು ನಗು ನಗುತ್ತ ಹೋಗಿ ದುಃಖದೊಂದಿಗೆ ಹಿಂದಿರುಗಿದ್ದಾಗಿ ಬೇಸರ ವ್ಯಕ್ತಪಡಿಸಿದರು.



ಬನ್ನೂರಿನ ಸಮೀಪದ ಯಾಚೇನಹಳ್ಳಿಯಲ್ಲಿ ನೂತನ ಶಾಲಾ ಕಟ್ಟಡಗಳನ್ನು ನಾಗತಿಹಳ್ಳಿ ಚಂದ್ರಶೇಖರ್ ಉದ್ಘಾಟಿಸಿದರು. ಈ ವೇಳೆ ಮಾಜಿ ಶಾಸಕ ಎಂ. ಅಶ್ವಿನ್‌ಕುಮಾರ್, ವೈ.ಎಸ್. ರಾಮಸ್ವಾಮಿ, ವೈ.ಎನ್.ಶಂಕರೇಗೌಡ, ಜೆ. ಸುನೀತಾ ವೀರಪ್ಪಗೌಡ ಇದ್ದರು.

ಶಾಲೆಯ ಕಟ್ಟಡವನ್ನು ನವೀಕರಿಸುವಂತೆ ಕೆಂಪೇಗೌಡರಿಗೆ ಯಾರೂ ಹೇಳಿಲ್ಲ. ಅವರೇ ಸ್ವತಃ ಅವರ ತೃಪ್ತಿಗಾಗಿ ಮುಂದೆ ಬಂದಿದ್ದಾರೆ. ಯಾರೋ ಖುಷಿಗೆ ಕೆಲಸ ಮಾಡುವ ಅಗತ್ಯವಿಲ್ಲ. ನಮ್ಮ ಖುಷಿಗಾಗಿ ನಾವು ಕೆಲಸ ಮಾಡಬೇಕಿದೆ ಎಂದು ತಿಳಿಸಿದರು.

ಸರ್ಕಾರಿ ಶಾಲೆ ಹಳ್ಳಿಯ ಸಾಂಸ್ಕೃತಿಕ ಪ್ರತೀಕ. ಸರ್ಕಾರಿ ಶಾಲೆಯಲ್ಲಿ ಸರಕಾರ ಮತ್ತು ಶಾಲೆ ಎನ್ನುವ ಎರಡು ಪದವಿದೆ. ಕನ್ನಡ ನಮ್ಮ ಮಾತೃಭಾಷೆ, ಸರಕಾರ ನಮ್ಮ ಭಾಗ. ಒಂದು ಊರಿನಲ್ಲಿ ಸರ್ಕಾರಿ ಕಚೇರಿ, ಸರ್ಕಾರಿ ಆಸ್ಪತ್ರೆ, ಸರ್ಕಾರಿ ಬಸ್, ಸರ್ಕಾರಿ ಬಸ್‌ನಿಲ್ದಾಣ ಎಲ್ಲವೂ ಚೆನ್ನಾಗಿದ್ದರೆ ನಾವು ಚೆನ್ನಾಗಿದ್ದ ಹಾಗೇ. ಅವು ನಮ್ಮ ಪ್ರತಿಫಲನ ಎಂದು ತಿಳಿಸಿದರು. ಇಂದು ಸ್ಥಿತ್ಯಾಂತರ ಪರಿಸ್ಥಿತಿಯಲ್ಲಿದ್ದೇವೆ. ಕನ್ನಡದ ಜೊತೆ ಜೊತೆಗೆ ಇಂಗ್ಲೀಷ್ ಕಲಿಸುವ ಅಗತ್ಯವೂ ಇದೆ ಎಂದು ಅವರು ತಿಳಿಸಿದರು.

ನಂತರ ಕಾರ್ಯಕ್ರಮವನ್ನು ಉದ್ಘಾಟಿಸಿದ ಮಾಜಿ ಶಾಸಕ ಎಂ. ಅಶ್ವಿನ್‌ಕುಮಾರ್ ಮಾತನಾಡಿ, ಇಂದು ಯಾಚೇನಹಳ್ಳಿಯಲ್ಲಿ ನೂತನ ಶಾಲೆಗಳ ಕೊಠಡಿಯನ್ನು ನವೀಕರಿಸುವುದು ಸುಲಭವಾದ ಮಾತಲ್ಲ. ಅದನ್ನು ಕೆಂಪೇಗೌಡರು ಮಾಡಿ ತೋರಿಸಿದ್ದಾರೆ. ಸಿಎಫ್‌ಆರ್ ಫಂಡ್‌ನಿಂದ ತಮ್ಮ ಊರಿನ ಶಾಲೆಯನ್ನು ಅಭಿವೃದ್ಧಿ ಮಾಡುವ ಮನಸ್ಸು ಮಾಡಿರುವುದು ತನ್ನೂರಿನ ಬಗೆಗೆ ಇರುವ ಕಾಳಜಿಯನ್ನು ಎತ್ತಿ ತೋರಿಸುತ್ತದೆ ಎಂದು ತಿಳಿಸಿದರು. ವ್ಯವಸಾಯೋತ್ಪನ್ನ ಸಹಕರ ಸಂಘದ ತಾಲ್ಲೂಕು ನಿರ್ದೇಶಕ ವೈ.ಎಸ್. ರಾಮಸ್ವಾಮಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕಿ ಜೆ. ಸುನೀತಾ ವೀರಪ್ಪಗೌಡ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವೈ.ಎನ್. ಶಂಕರೇಗೌಡ, ನಾದಾನಂದನಾಥ ಸ್ವಾಮೀಜಿ, ಮೈಮುಲ್ ನಿರ್ದೇಶಕ ಚೆಲುವರಾಜು, ಕ್ಷೇತ್ರ ಶಿಕ್ಷಣಾಧಿಕಾರಿ ಜಿ. ಶೋಭಾ, ಶ್ರೀಧರ್, ಯೋಗಾನಂದ, ಅಶ್ವಿನಿ ಕೆಂಪೇಗೌಡ, ಹನುಮಂತೇಗೌಡ, ಶಿವಕುಮಾರ್, ಶ್ವೇತಾ, ವೈ.ಎಂ. ಚಂದ್ರು ವೈ.ಜಿ. ಮಹೇಂದ್ರ ವೈ.ಎಂ. ಮಲ್ಲೇಶ್, ವೈ.ಎಂ. ಶಿವಕುಮಾರ್, ಯೋಗೇಶ್ ಸೇರಿದಂತೆ ಶಾಲೆಯ ಮುಖ್ಯಶಿಕ್ಷಕರು, ಸಹ ಶಿಕ್ಷಕರು, ಯಜಮಾನರು ಇತರರಿದ್ದರು.

ನಾನು ಓದಿದ ಶಾಲೆಯನ್ನು 5 ವರ್ಷದ ಅವಧಿವರೆಗೆ ದತ್ತು ತೆಗೆದುಕೊಂಡಿದ್ದು, ಒಂದು ವರ್ಷದ ಅವಧಿಯಲ್ಲಿಯೇ ಶಾಲೆಯ 9 ಕೊಠಡಿಯನ್ನು ನೂತನವಾಗಿ ನಿರ್ಮಿಸಿದ್ದೇನೆ. ಮುಂದೆ ಮತ್ತಷ್ಟು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಕ್ರಮ ಕೈಗೊಂಡು ರಾಜ್ಯದಲ್ಲಿಯೇ ಮಾದರಿ ಶಾಲೆಯನ್ನಾಗಿ ರೂಪಿಸುತ್ತೇನೆ. ಖಾಸಗೀ ಶಾಲೆಗಳಿಗಿಂತ ಇಲ್ಲಿನ ಸರ್ಕಾರಿ ಶಾಲೆ ಯಾವುದರಲ್ಲೂ ಕಡಿಮೆ ಇಲ್ಲ ಎನ್ನುವುದನ್ನು ರೂಪಿಸಿ ತೋರಿಸುತ್ತೇನೆ.

-**ಕೆಂಪೇಗೌಡ**, ಸಿಇಓ ಇನ್ವೆಂಟಿಕ್ ಇನ್ಫೋಸಲ್ಯೂಷನ್ ಬೆಂಗಳೂರು

ಅಭಿಯಂತರರ ಐದು ದಿನಗಳ ರಾಷ್ಟ್ರೀಯ ರಂಗ ಉತ್ಸವಕ್ಕೆ ಚಾಲನೆ

● ಸಾಹಿತಿಗಳಾದ ಪ್ರೊ.ಕೆ.ವೈ.ನಾರಾಯಣ ಸ್ವಾಮಿ, ಪ್ರೊ.ಎಸ್.ಜಿ.ಸಿದ್ದರಾಮಯ್ಯ ಚಾಲನೆ ● ಇಂಜಿನಿಯರಿಂಗ್ ಕ್ಷೇತ್ರದ ರಂಗಭೂಮಿ ಪ್ರೇಮಕ್ಕೆ ಶ್ಲಾಘನೆ

ಮೈಸೂರು, ಫೆ.28(ಎಸ್‌ಪಿಎನ್)– ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಅಭಿಯಂತರರು ಆಯೋಜಿಸಿರುವ ಐದು ದಿನಗಳ ರಾಷ್ಟ್ರೀಯ ರಂಗ ಉತ್ಸವಕ್ಕೆ ಹಿರಿಯ ಸಾಹಿತಿ ಹಾಗೂ ನಾಟಕಕಾರ ಪ್ರೊ.ಕೆ.ವೈ.ನಾರಾಯಣ ಸ್ವಾಮಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಅವರು ನಗಾರಿ ಬಾರಿಸುವ ಮೂಲಕ ಬುಧವಾರ ಚಾಲನೆ ನೀಡಿದರು.

ಬಳಿಕ ಪ್ರೊ.ಕೆ.ವೈ.ನಾರಾಯಣ ಸ್ವಾಮಿ ಮಾತನಾಡಿ, ನಮ್ಮ ಸುತ್ತಲಿನ ಸಮಾಜದಲ್ಲಿ ಕೇಡು, ದ್ವೇಷ, ಅಸೂಯೆ ಹಾಸುಹೊಕ್ಕಾಗಿದೆ. ಈ ಪರಿಸ್ಥಿತಿಯನ್ನು ನೋಡಿಯೂ ನೋಡದಂತಿರುವ ಸಮಾಜವನ್ನು ಮತ್ತೆ ಕನ್ನಡಿ ರೂಪವಾಗಿ ತೋರಿಸಿ ಎಚ್ಚರಿಸುವ ಮಾಧ್ಯಮವೇ ರಂಗಭೂಮಿ. ಹಾಗಾಗಿ ತಂತ್ರಜ್ಞಾನ ಅಭಿವೃದ್ಧಿ ಹೊಂದುತ್ತಿರುವ ಸಂದರ್ಭದಲ್ಲೂ ಇಂಜಿನಿಯರ್ ಕ್ಷೇತ್ರದ ವಿದ್ಯಾರ್ಥಿಗಳು ರಂಗಭೂಮಿ ಕಡೆಗೆ ಬರುತ್ತಿರುವುದು ಸಂತೋಷದ ಸಂಗತಿ ಎಂದರು.

ಮೊದಲು ಗ್ರೀಕ್ ಭಾಷೆಯಲ್ಲಿ ಮನುಷ್ಯನ ಪಾಪ ಪ್ರಜ್ಞೆಯನ್ನು ತೋರಿಸುವ ಸಲುವಾಗಿಯೇ ನಾಟಕಗಳು ಪ್ರದರ್ಶನವಾಗುತ್ತಿದ್ದವು. ಈಗ ನಮ್ಮ ದೇಶದಲ್ಲಿ ಅಂತಹುದೇ ವಾತಾವರಣ ಸೃಷ್ಟಿಯಾಗಿದೆ. ಈ ಸನ್ನಿವೇಶವನ್ನು ನೋಡಿಯೂ ನೋಡದಂತೆ ಮಂಪರಿನ ಸ್ಥಿತಿಯಲ್ಲಿರುವ ಸಮಾಜವನ್ನು ಎಚ್ಚರಿಸಲು ಯುವಕರು, ರಂಗಭೂಮಿಯನ್ನು ಬಳಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ನಾಟಕಗಳು ಪ್ರಜಾಪ್ರಭುತ್ವದಲ್ಲಿ ಸಂಸ್ಕೃತಿ, ರಾಜಕಾರಣ, ಧರ್ಮ, ಅಭಿವೃದ್ಧಿ ಹೆಸರಿನಲ್ಲಿ ನಡೆಯುತ್ತಿರುವ ಪಾಪದ, ಕೇಡಿನ ಗುಣಗಳನ್ನು ಪ್ರತಿಬಿಂಬಿಸುವ ಅವಕಾಶ ನಾಟಕಗಳಿಗೆ ಇದೆ. ಅಲ್ಲದೆ, ಮನುಷ್ಯನ ಒಳಗಿರುವ ಕೇಡಿನ ಗುಣಗಳನ್ನು ತೋರಿಸುವ ಗುಣ ನಾಟಕಗಳಿಗೆ ಇದೆ. ಯಾವ ನಾಟಕ ನಿಮ್ಮ ಎದೆಗೆ ಕೊಳ್ಳಿ ಇಡುತ್ತದೋ, ರಾತ್ರಿ ನಿದ್ದೆ ಮಾಡದಂತೆ ನಿಮ್ಮ ಕನಸಿನಲ್ಲಿ ಬಂದು ಕಾಡುತ್ತವೆಯೂ ಅಂತಹ ನಾಟಕಗಳನ್ನು ಪ್ರೇಕ್ಷಕರು ತಿರಸ್ಕರಿಸುತ್ತಾರೆ. ಆದರೆ, ಇವುಗಳ ಬೇಕರು ಪುದು ಕೇವಲ ಮನರಂಜನೆಗಳಿರುವ ನಾಟಕಗಳು. ಅಂತಹ ನಾಟಕ ಉತ್ಸವವಾಗಿರುವುದಿಲ್ಲ ಎಂದರು.

ಇಂಜಿನಿಯರ್ ಕ್ಷೇತ್ರದ ವಿದ್ಯಾರ್ಥಿಗಳು ಕೇವಲ ಮಣ್ಣು, ಸಿಮೆಂಟ್, ಕಬ್ಬಿಣ ಬಳಸಿ ಕಟ್ಟಡ ಕಟ್ಟುವುದರ ಜೊತೆಗೆ ಸಮಾಜದಲ್ಲಿ ಪ್ರೀತಿ, ಮಮತೆ, ವಾತ್ಸಲ್ಯಗಳನ್ನು ಬಿತ್ತಿ ಸಮಾಜ ಕಟ್ಟುವ ಕೆಲಸಕ್ಕೂ ಬಂದಿರುವುದು ಸ್ವಾಗತಾರ್ಹ. ರಂಗಭೂಮಿ ಕೇವಲ ಮಾನವೀಯ ವಿಷಯಗಳನ್ನು ಅಧ್ಯಯನ ಮಾಡುವವರಿಗೆ ಮಾತ್ರ ಸೀಮಿತ ಎನ್ನುವ ಭಾವನೆ ಒಂದು ಕಾಲದಲ್ಲಿತ್ತು. ಇದೀಗ ಈ ಮಾತನ್ನು ಸ್ವಲ್ಪ ಬದಲಾಯಿಸಿ ಹೇಳುವುದಾದರೆ, ಯಾವ ಕ್ಷೇತ್ರದಲ್ಲಿಯೂ ಕೆಲಸ ಮಾಡಲು ಇಷ್ಟಪಡದವರು ರಂಗಭೂಮಿಗೆ ಬಂದು ನಾಟಕ ಕಲಿಕೆಗೆ ಬರುತ್ತಿದ್ದಾರೆ ಎಂದರೆ ತಪ್ಪಲ್ಲ.



ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಅಭಿಯಂತರರು ಆಯೋಜಿಸಿರುವ ಐದು ದಿನಗಳ ರಾಷ್ಟ್ರೀಯ ರಂಗ ಉತ್ಸವಕ್ಕೆ ಹಿರಿಯ ಸಾಹಿತಿ ಹಾಗೂ ನಾಟಕಕಾರ ಪ್ರೊ.ಕೆ.ವೈ.ನಾರಾಯಣ ಸ್ವಾಮಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಅವರು ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿದರು.

> ಫೆ.29ರಂದು ಬೆಂಗಳೂರಿನ ಸ್ಪರ್ಶ ಪ್ರತಿಷ್ಠಾನ ಅರ್ಪಿಸುವ 'ಸರಸ ವಿರಸ ಸಮರಸ'(ಕನ್ನಡ), ಮಾ.1ರಂದು ಬೆಂಗಳೂರಿನ ಥೀಮಾಟಿಸೆಂಟರ್ ಆಫ್ ಆರ್ಟ್ಸ್ ಅರ್ಪಿಸುವ '#36 ಸತಿ ಸಾವಿತ್ರಿ ನಿವಾಸ'(ಕನ್ನಡ), ಮಾ.2ರಂದು ಹಿರಿಯ ಸಾಹಿತಿ ಕೃಷ್ಣಮೂರ್ತಿ ಹನೂರು ರಚಿತ 'ಅಜ್ಞಾತ ನೊಬ್ಬನ ಆತ್ಮಚರಿತ್ರೆ(ಕನ್ನಡ), ಮುಂಬೈನ ಅಭಿನಯ ಕಲ್ಯಾಣ್ ಅರ್ಪಿಸುವ 'ಕಾಶಿ' (ಹಿಂದಿ) ನಾಟಕ ಪ್ರದರ್ಶನಗೊಳ್ಳಲಿದೆ.

ಆದರೂ ಇದು ಒಳ್ಳೆಯ ಬೆಳವಣಿಗೆ ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಪ್ರೊ.ಎಸ್. ಸಿದ್ದರಾಮಯ್ಯ ಮಾತನಾಡಿ, ರಂಗಭೂಮಿ ಎಲ್ಲರನ್ನು ಒಳಗೊಳ್ಳುವ ವೇದಿಕೆ. ಈ ದೇಶದಲ್ಲಿ ಪ್ರಸ್ತುತ ಹೆಚ್ಚು ಕೇಡಾಳಿತ ಪರಿಸ್ಥಿತಿ ನಿರ್ಮಾಣಗೊಂಡಿದೆ. ಈ ಅಂತಹವನ್ನು ಕಥಾವಸ್ತುವಾಗಿ ನಿರೀಕ್ಷಿಸುವುದು ಮನುಷ್ಯತ್ವದ ಮೌಲ್ಯ ಸತ್ಯವನ್ನು ಶೋಧಿಸಿದಂತೆ. ಅಲ್ಲದೆ, ಶೇಕ್ಸ್‌ಪಿಯರ್ ನಾಟಕಗಳು ಪ್ರಸ್ತುತ ಸ್ಥಿತಿಯನ್ನು ಬರುತ್ತದೆ. ಆದರೆ, ಚರಿತ್ರೆಯ ನಿಜವನ್ನು ತಿರುಚುವ ನಾಟಕಗಳು ದಿನ ಕಳೆದಂತೆ ಪ್ರೇಕ್ಷಕರು ಕಡೆಗಣಿಸುತ್ತಿರುವುದು ಬೇಸರದ ಸಂಗತಿ ಎಂದರು.

ಈ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ನೋಡಿದಾಗ ನನ್ನೊಳಗೊಂದು ಆಲೋಚನೆ ಬಂತು. 'ಅಭಿಯಂತರರು' ಎನ್ನುವ ಪದ ರಂಗಭೂಮಿ ಹಿನ್ನೆಲೆಯಲ್ಲಿ ಗಮನಿಸಿದಾಗ ಉತ್ತಮ ಅನ್ನಿಸತೊಡಗಿತು. ಆದರೆ, ಹೊರಗಡೆಯಿಂದ ಬಂತು ಕನ್ನಡೀಕರಣಗೊಂಡಿರುವ 'ಇಂಜಿನಿಯರ್' ಪದ ಸಮಾಜದಲ್ಲಿ ಜನಜನಿತವಾಗಿದೆ. ಇದತ್ತು ಈ ಪದ ಎಷ್ಟು ಪ್ರಸಿದ್ಧಿ ಪಡೆದಿದೆ ಎಂದರೆ, 'ಅಭಿಯಂತರರು' ಎಂದು ಇಂಜಿನಿಯರ್‌ಗಳನ್ನು ಕರೆದರೆ, ಜನಸಾಮಾನ್ಯರಿಗೆ ಅರ್ಥವಾಗುವುದಿಲ್ಲ. ಹಾಗಾಗಿ ನನಗೆ ಈ ಪದ ವಿಶಿಷ್ಟ ಅನಿಸಿತು ಎಂದರು.

ವೇದಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಅಭಿಯಂತರರು ಸಂಸ್ಥೆಯ ಅಧ್ಯಕ್ಷ ಹೆಚ್.ಎಸ್.ಸುರೇಶ್ ಬಾಬು, ಕಾರ್ಯದರ್ಶಿ ಬಿ.ಎಸ್.ತಾಂಡವಮೂರ್ತಿ ಇದ್ದರು. ವೇದಿಕೆ ಕಾರ್ಯಕ್ರಮ ನಂತರ ಸಾರಾ ಜೋಸೆಫ್ ಅವರ ಭೂಮಿ ರಾಕ್ಷಸಂ ಅನುವಾದದ ರಂಗಕರ್ಮಿ ವಿನಯ್‌ಕುಮಾರ್ ನಿರ್ದೇಶನದ ಆದಿಶಕ್ತಿ ಪುದುಚೇರಿ ಅರ್ಪಿಸುವ ಭೂಮಿ (ಇಂಗ್ಲಿಷ್) ನಾಟಕ ಪ್ರದರ್ಶನಗೊಂಡು ಪ್ರೇಕ್ಷಕರ ಮನಸೆಳೆಯಿತು.

ಕಡ್ಡಾಯ ಕನ್ನಡ ನಾಮಫಲಕ ಇಂದಿಗೆ ಗಡುವು

● ಇಂದು ನಾಮಫಲಕ ಹಾಕದಿದ್ದರೆ ನಾವೇ ತೆರವು ಮಾಡ್ತೀವಿ ● ಅಂಗಡಿಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ಎಚ್ಚರಿಕೆ

ಬೆಂಗಳೂರು: ಕಡ್ಡಾಯ ಕನ್ನಡ ನಾಮಫಲಕ ಅಳವಡಿಕೆಗೆ ಇಂದು ಕೊನೆಯ ದಿನವಾಗಿದ್ದು, ಈ ಗಡುವನ್ನು ಒಂದು ದಿನ ವಿಸ್ತರಣೆ ಮಾಡಿ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶ ಹೊರಡಿಸಿದ್ದಾರೆ.


ಇಂದು ಕಡ್ಡಾಯ ಕನ್ನಡ ನಾಮಫಲಕ ಅಳವಡಿಕೆಗೆ ಗಡುವು ನೀಡಲಾಗಿತ್ತು. ಆದರೆ ಇದನ್ನು ಕಮಿಷನರ್ ಒಂದು ದಿನ ವಿಸ್ತರಣೆ ಮಾಡಿದ್ದಾರೆ. 3,000 ಅಂಗಡಿಗಳು ಇನ್ನೂ ಕನ್ನಡ ನಾಮಫಲಕ ಹಾಕಿಲ್ಲ. ನಾಳೆಯೊಳಗೆ (ಫೆ.29) ನಾಮಫಲಕ ಹಾಕದಿದ್ದರೆ ನಾವೇ ತೆರವು ಮಾಡುತ್ತೇವೆ. ಕೂಡಲೇ ನಾಮಫಲಕ ಬದಲಾಯಿಸಿ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಎಚ್ಚರಿಕೆ ನೀಡಿದ್ದಾರೆ.

ಕಡ್ಡಾಯ ಕನ್ನಡ ನಾಮಫಲಕ ಬಳಸದವರಿಗೆ ಮತ್ತೊಂದು ದಿನ ಅವಕಾಶ ನೀಡಲಾಗಿದೆ. ನಾಳೆ ಸಂಜೆಯವರೆಗೆ ನಾಮಫಲಕ ಬದಲಾವಣೆಗೆ ಅವಕಾಶ ನೀಡಿದ್ದು, ನಾಳೆಯೊಳಗೆ ಬದಲಾಯಿಸದಿದ್ದರೆ ಕಠಿಣ ಕ್ರಮದ ಎಚ್ಚರಿಕೆ ಕೊಡಲಾಗಿದೆ. ಈಗಾಗಲೇ 90%ರಷ್ಟು ನಾಮಫಲಕ ಬದಲಾಗಿದೆ. ಇನ್ನು ಉಳಿದಿರೋದು 3 ಸಾವಿರ ನಾಮಫಲಕ ಮಾತ್ರ, ಅವರು ನಾಳೆ ಸಂಜೆಯೊಳಗೆ ಬದಲಾಯಿಸಬೇಕು. ಕೆಲವು ಅಂತಾರಾಷ್ಟ್ರೀಯ ಕಂಪನಿಗಳು ಹಾಗೂ ಎಸ್‌ಬಿಐ, ಕೆನರಾ ಬ್ಯಾಂಕ್ ಮನವಿ ಕೊಟ್ಟಿವೆ. ನಾಮಫಲಕ ಅಳವಡಿಕೆಗೆ ಮತ್ತಷ್ಟು ಗಡುವು ಕೇಳಿದ್ದಾರೆ. ಈ ಬಗ್ಗೆ ನಾಳೆ ಸಂಜೆ ತೀರ್ಮಾನ ಮಾಡುತ್ತೇವೆ ಎಂದು ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ಇನ್ನು ಈ ಕುರಿತು ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ನಾರಾಯಣಗೌಡ ಮಾತನಾಡಿ, ರಾಜ್ಯ ಸರ್ಕಾರ ಸುಗ್ರೀವಾಜ್ಞೆ ಮೂಲಕ ಬಿಬಿಎಂಪಿ ಹಾಗೂ ಸರ್ಕಾರ ನಾಮಫಲಕ ಜಾರಿಗೊಳಿಸಲು ಇವತ್ತಿನ ವರೆಗೂ ಗಡುವು ಕೇಳಿತ್ತು. ಒಟ್ಟು 50,216 ಗಳಲ್ಲಿ 40,600 ಉದ್ದಿಮೆಗಳಿಗೆ ನೋಟಿಸ್ ಕೊಟ್ಟಿದ್ದೇವೆ. 3,600 ಉದ್ದಿಮೆಗಳು ಕನ್ನಡ ನಾಮಫಲಕ ಹಾಕಿಕೊಳ್ಳಬೇಕು. ಒಂದು ವೇಳೆ ನಾಳೆಯೊಳಗೆ ಕನ್ನಡ ನಾಮಫಲಕ ಜಾರಿಯಾಗದಿದ್ದರೆ ಅವರ ಲೈಸೆನ್ಸ್ ರದ್ದು ಮಾಡಲಾಗುವುದು ಎಂದು ಬಿಬಿಎಂಪಿ ಕಮಿಷನರ್ ಹೇಳಿದ್ದಾರೆ. 100% ಕನ್ನಡೀಕರಣ ಆಗಬೇಕು ಮತ್ತೆ ಬೀದಿಗೆ ಇಳಿಯುತ್ತೇವೆ ಎಂದರು. ಇದು ಬೆಂಗಳೂರಿಗೆ ಮಾತ್ರ ಸೀಮಿತವಾಗಬಾರದು. ರಾಜ್ಯದ ಎಲ್ಲಾ ಜಿಲ್ಲೆ, ತಾಲೂಕು ಕೇಂದ್ರಗಳಲ್ಲಿ ಕನ್ನಡ ನಾಮಫಲಕಗಳು ಇರಬೇಕು. ಇಲ್ಲದಿದ್ದರೆ ಎಲ್ಲಾ ಜಿಲ್ಲೆಗಳಲ್ಲಿ ಕರವೇ ಕಾರ್ಯಕರ್ತರು ಬೀದಿಗಿಳಿಯುತ್ತಾರೆ. ಬೆಂಗಳೂರಲ್ಲಿ 3,500–4,000 ಉದ್ಯಮಿಗಳು ಕನ್ನಡ ಬಳಸದೇ ಇರೋರು ನಾಮಫಲಕದಲ್ಲಿ 60% ಕನ್ನಡ ನಾಮಫಲಕ ಹಾಕಬೇಕು.

ಆರ್.ವಿಶ್ವೇಶ್ವರನ್‌ಗೆ 'ಸಂಗೀತ ನಾಟಕ ಅಕಾಡೆಮಿ ರತ್ನ'

ನವದೆಹಲಿ, ಫೆ.28– ಕೇಂದ್ರ ಸಂಗೀತ ನಾಟಕ ಅಕಾಡೆಮಿಯ 'ಅಕಾಡೆಮಿ ರತ್ನ (ಫೆಲೋಶಿಪ್)' ಪ್ರಶಸ್ತಿಗೆ ಮೈಸೂರಿನ ಹಿರಿಯ ವೀಣಾವಾದಕ ಆರ್. ವಿಶ್ವೇಶ್ವರನ್ ಅವರನ್ನು ಆಯ್ಕೆ ಮಾಡಲಾಗಿದೆ. ಅಕಾಡೆಮಿ ರತ್ನ, 2022 ಮತ್ತು 2023ನೇ ಸಾಲಿನ ಅಕಾಡೆಮಿ ಪುರಸ್ಕಾರ ಹಾಗೂ 2022 ಮತ್ತು 2023ನೇ ಸಾಲಿನ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರಗಳ ವಿಜೇತರ ಹೆಸರನ್ನು ಮಂಗಳವಾರ ಪ್ರಕಟಿಸಲಾಗಿದೆ. ಅಕಾಡೆಮಿ ರತ್ನ ಪ್ರಶಸ್ತಿಯು 3 ಲಕ್ಷ ನಗದು, ಅಕಾಡೆಮಿ ಪುರಸ್ಕಾರವು 1 ಲಕ್ಷ ನಗದು ಹಾಗೂ ಯುವ ಪುರಸ್ಕಾರವು 25 ಸಾವಿರ ನಗದನ್ನು ಒಳಗೊಂಡಿದೆ. ಯುವ ಪುರಸ್ಕಾರವನ್ನು ಅಕಾಡೆಮಿಯ ಅಧ್ಯಕ್ಷರು ಶೀಘ್ರ ಪ್ರದಾನ ಮಾಡಲಿದ್ದಾರೆ. ಅಕಾಡೆಮಿ ರತ್ನ ಹಾಗೂ ಅಕಾಡೆಮಿ ಪುರಸ್ಕಾರವನ್ನು ರಾಷ್ಟ್ರಪತಿ ಅವರು ಪ್ರದಾನ ಮಾಡುವರು ಎಂದು ಪ್ರಕಟಣೆ ತಿಳಿಸಿದೆ. 2022ನೇ ಸಾಲಿನ ಅಕಾಡೆಮಿ ಪುರಸ್ಕಾರಕ್ಕೆ ಬೆಂಗಳೂರಿನ ವೀಣಾವಾದಕಿ ಜಯಂತಿ ಕುಮರೇಶ್, ಬೆಂಗಳೂರಿನ ಕರ್ನಾಟಕ ಸಂಗೀತ ಗಾಯಕ ಪುಸ್ತಕ ರಮಾ, 2023ನೇ ಸಾಲಿನ ಪ್ರಶಸ್ತಿಗೆ ಬೆಂಗಳೂರಿನ ಮೃದಂಗ ವಾದಕ ಎಚ್.ಕೆ. ವೆಂಕಟರಾಮ್, ಕುಮಾರ ಗಂಧರ್ವ ಅವರ ಪುತ್ರಿಯಾದ ಪ್ರಸಿದ್ಧ ಗಾಯಕಿ ಕಲಾಪಿನಿ ಕೊಂಕಳಿ (ಸದ್ಯ ಮುಂಬೈಯಲ್ಲಿ ನೆಲೆಸಿದ್ದಾರೆ), ಭರತನಾಟ್ಯ ಹಾಗೂ ಕಥಕ್ ನೃತ್ಯಪಟುಗಳಾದ ನಿರುಪಮಾ ಮತ್ತು ರಾಜೇಂದ್ರ ಆಯ್ಕೆಯಾಗಿದ್ದಾರೆ.



ಹಿರಿಯ ವೀಣಾವಾದಕ ವಿಶ್ವೇಶ್ವರನ್.

ಸ್ನಾತಕೋತ್ತರ ಪರೀಕ್ಷೆಗಳ ಮುಂದೂಡಿಕೆಗೆ ಆಗ್ರಹಿಸಿ

ಸ್ನಾತಕೋತ್ತರ ವಿದ್ಯಾರ್ಥಿಗಳಿಂದ ಪ್ರತಿಭಟನೆ

ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ಕುಲಪತಿಗಳ ಭರವಸೆ



ಸ್ನಾತಕೋತ್ತರ ಪರೀಕ್ಷೆಗಳನ್ನು ಮುಂದೂಡುವಂತೆ ಒತ್ತಾಯಿಸಿ ದಲಿತ ವಿದ್ಯಾರ್ಥಿ ಒಕ್ಕೂಟದ ಪದಾಧಿಕಾರಿಗಳು ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅವರಲ್ಲಿ ಮನವಿ ಮಾಡಿದರು.

ಮೈಸೂರು, ಫೆ.28(ಎಸ್‌ಪಿಎನ್)– ಸ್ನಾತಕೋತ್ತರ ವಿಭಾಗದ ಪರೀಕ್ಷೆಗಳು ಮಾ.4ರಂದು ಆರಂಭವಾಗಲಿದ್ದು, ಪರೀಕ್ಷಾ ವೇಳಾಪಟ್ಟಿಯನ್ನು ಕನಿಷ್ಠ 20 ದಿನಗಳು ಮುಂದೂಡುವಂತೆ ಒತ್ತಾಯಿಸಿ ದಲಿತ ವಿದ್ಯಾರ್ಥಿ ಒಕ್ಕೂಟದ ಪದಾಧಿಕಾರಿಗಳು, ಸ್ನಾತಕೋತ್ತರ ವಿದ್ಯಾರ್ಥಿಗಳು ಮೈಸೂರು ವಿವಿ ಕ್ರಾಫರ್ಡ್ ಹಾಲ್ ಮುಂಭಾಗ ಬುಧವಾರ ಪ್ರತಿಭಟನೆ ನಡೆಸಿದರು.

ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಸಚಿನ್, ಪದಾಧಿಕಾರಿಗಳಾದ ನವೀನ್ ಕೋಳೂರು, ಭರತ್, ರೋಹಿತ್ ಸೇರಿದಂತೆ ಇತರೆ ವಿದ್ಯಾರ್ಥಿಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ಸ್ನಾತಕೋತ್ತರ ವಿಜ್ಞಾನ ವಿಭಾಗದ ವಿಷಯಗಳಲ್ಲಿ ಶೇ.30 ರಷ್ಟು ಪಠ್ಯಕ್ರಮ ಮುಗಿದ್ದು, ಇನ್ನು ಶೇ.70ರಷ್ಟು ಪಠ್ಯಕ್ರಮ ಬೋಧನೆ ಹಾಗೂ ಪ್ರಾಯೋಗಿಕ ತರಗತಿಗಳು ನಡೆದಿಲ್ಲ. ಇದರಿಂದ ನಮಗೆ ಮಾ.4ರಂದು ಆರಂಭವಾಗುವ ಪರೀಕ್ಷೆ ಎದುರಿಸಲು ಸಾಧ್ಯವಾಗುತ್ತಿಲ್ಲ. ಇನ್ನು ಕೆಲ ವಿಭಾಗಗಳಲ್ಲಿ ಅಧ್ಯಾಪಕರನ್ನು ನೇಮಿಸದ ಹಿನ್ನೆಲೆಯಲ್ಲಿ ಈ ಸಾಲಿನ ಪಠ್ಯಕ್ರಮ ಬೋಧನೆ ಆರಂಭವೇ ಆಗಿಲ್ಲ ಎಂದು ವಿದ್ಯಾರ್ಥಿಗಳು ದೂರಿದರು.

ರಸಾಯನ ಶಾಸ್ತ್ರ(ಜನರಲ್), ಜೈವಿಕ ರಸಾಯನ ಶಾಸ್ತ್ರ, ಅನ್ವಯಿಕ ಸಾವಯವ ರಸಾಯನ ಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಗಣಿತ, ಅನುವಂಶಿಕ ಶಾಸ್ತ್ರ, ಅಪರಾಧ ಶಾಸ್ತ್ರ, ನ್ಯಾಯ ವಿಜ್ಞಾನ, ಪ್ರಾಚೀನ ಇತಿಹಾಸ, ಪುರಾತತ್ವ ಮತ್ತು ಸಂಪನ್ಮೂಲ ವಿಭಾಗ, ಇತಿಹಾಸ, ಸಂಖ್ಯಾಶಾಸ್ತ್ರ, ರೇಷ್ಮೆ ವಾಣಿಜ್ಯ, ಗ್ರಂಥಾಲಯ ವಿಜ್ಞಾನ, ಗಾಂಧಿ ಅಧ್ಯಯನ ವಿಭಾಗ, ಮಾನವ ಶಾಸ್ತ್ರ, ಸಮಾಜ ಶಾಸ್ತ್ರ, ರಾಜ್ಯಶಾಸ್ತ್ರ, ಇಂಗ್ಲಿಷ್, ಅರ್ಥಶಾಸ್ತ್ರ ಹಾಗೂ ಜಾಣ್ಮೆ ಆಯ್ಕೆ ವಿಷಯಗಳ ಪರೀಕ್ಷೆಗಳನ್ನು ಕನಿಷ್ಠ 20 ದಿನ ಮುಂದೂಡಬೇಕು ಎಂದು ಒತ್ತಾಯಿಸಿದರು.

ಮುಂದೂಡಿಕೆಗೆ ಪ್ರಯತ್ನ: ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅವರು, ವಿದ್ಯಾರ್ಥಿಗಳ ಮನವಿ ಆಲಿಸಿದರು. ನಂತರ ಪ್ರತಿಕ್ರಿಯೆ ನೀಡಿದ ಅವರು, ವಿಜ್ಞಾನ ವಿಷಯಗಳ ಪಠ್ಯಕ್ರಮದ ಬೋಧನೆ ಹಾಗೂ ಪ್ರಾಯೋಗಿಕ ತರಗತಿಗಳು ಪೂರ್ಣ ಪ್ರಮಾಣದಲ್ಲಿ ತಾಂತ್ರಿಕ ಕಾರಣಗಳಿಂದ ಆಗಿಲ್ಲ ಎಂಬ ಅಂಶ ನನ್ನ ಗಮನಕ್ಕೂ ಬಂದಿದೆ. ಹಾಗಾಗಿ ಈ ವಿಭಾಗದ ಪರೀಕ್ಷೆಗಳನ್ನು ಮುಂದೂಡಲು ಪ್ರಯತ್ನಿಸಲಾಗುವುದು. ಈ ತೀರ್ಮಾನವನ್ನು ಎಲ್ಲಾ ವಿಭಾಗದ ಮುಖ್ಯಸ್ಥರೊಂದಿಗೆ ಚರ್ಚಿಸಿದ ನಂತರ ಅಂತಿಮ ತೀರ್ಮಾನ ತಿಳಿಸಲಾಗುವುದು ಎಂದು ಪ್ರತಿಭಟನಾನಿರತ ವಿದ್ಯಾರ್ಥಿಗಳಿಗೆ ಭರವಸೆ ನೀಡಿದರು.